ಜನಶಕ್ತಿ

ಕನ್ನಡ ವಾರಪತ್ರಿಕೆ

Blog :janashakthi.wordpress.com e-mail : js_weekly@yahoo.com

ಸಂಪುಟ 6 ಸಂಚಿಕೆ 27
ಜುಲೈ 01, 2012

ಪುಟ 16 ರೂ. 5/-





ರಕ್ತ ಹೀನತೆಗೆ ತುತ್ತು ಕರ್ನಾಟಕದ ಮಹಿಳೆಯರು

ಸುವರ್ಣ ಭೂಮಿ : ಸರ್ಕಾರದ ವಂಚನೆ



ಮೆಕ್ಸಿಕೋದಲ್ಲಿ ಪ್ರಧಾನಿ : ಜನಗಳ ಸಂಕಟಗಳ ನಡುವೆ ದಾನಶೂರತೆಯ ಮೆರೆದಾಟ



ಶಾಸನ ಸಭೆಗೆ 60

ಎದುರು ನಿಂತ ಅಪಾಯಗಳು

ಚಿಂಚೋಳಿ :

ಕೂಲಿಕಾರರು ಸಂಘಟಿತರಾದರೆ ಈ ಶಾಸಕರಿಗೆ ಕಣ್ಣುರಿ


ಕೂಲಿಕಾರರು ಸಂಘಟಿತರಾದರೆ ಶಾಸಕನಿಗೆ ಕಣ್ಣುರಿ-ದೌರ್ಜನ್ಯ

ಚಿಂಚೋಳಿ ಪೊಲೀಸ್ ಠಾಣೆ ಎದುರು ಧರಣಿ

ಗುಲ್ಬರ್ಗಾ ಜಿಲ್ಲೆ, ಚಿಂಚೋಳಿ ತಾಲ್ಲೂಕಿನ ಐನೋಳ್ಳಿಗ್ರಾಮ ಪಂಚಾಯತಿ ವ್ಯಾಪ್ತಿಯ ಚಂದ್ರಂಪಳ್ಳಿಯಲ್ಲಿ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಜಿಲ್ಲಾಧ್ಯಕ್ಷ ಭೀಮಶೆಟ್ಟಿ ಯಂಪಳ್ಳಿ ಅವಮಾನಿಸಿ, ಸಂಘದ ಸದಸ್ಯತ್ವ ಅಭಿಯಾನಕ್ಕೆ ಅಡ್ಡಪಡಿಸಿದ ಬಿಜೆಪಿಯ ಮುಖಂಡ ಲಕ್ಷ್ಮೀಕಾಂತ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ಭಾನುವಾರ ಜೂನ್ 17, 2012 ರಂದು ಸಂಘದ ನೂರಾರು ಕಾರ್ಯಕರ್ತರು ಚಿಂಚೋಳಿ ಪೊಲೀಸ್ ಠಾಣೆ ಮುಂದೆ ಧರಣಿ ನಡೆಸಿದರು.

ತಾಲ್ಲೂಕಿನಲ್ಲಿ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ವಸತಿ ಹಾಗೂ ನಿವೇಶನರಹಿತರನ್ನು ಸಂಘಟಿಸಿ ಗ್ರಾಮ ಪಂಚಾಯತಿಗಳಿಗೆ ಅರ್ಜಿಗಳನ್ನು ಸಲ್ಲಿಸಲಾಗುತ್ತದೆ. ಕಳೆದ ಒಂದು ತಿಂಗಳಿಂದ ತಾಲ್ಲೂಕಿನ ಒಟ್ಟು 16 ಗ್ರಾಮ ಪಂಚಾಯತಿಗಳಲ್ಲಿ ಈ ಕಾರ್ಯ ಮುಗಿದಿದೆ. ಮನೆ-ನಿವೇಶನಕ್ಕಾಗಿ ಅರ್ಜಿಗಳನ್ನು ಸಂಗ್ರಹಿಸುವುದರ ಜತೆಯಲ್ಲಿ ಸಂಘಕ್ಕೆ ಅವರ ಸದಸ್ಯತ್ವವನ್ನು ಸಹ ಸಂಗ್ರಹಿಸಲಾಗುತ್ತಿತ್ತು.

ಅಂದು ಶನಿವಾರ ಚಂದ್ರಂಪಳ್ಳಿಯಲ್ಲಿ ನಿವೇಶನರಹಿತರ ಅರ್ಜಿ ಭರ್ತಿ ಮಾಡುತ್ತಿರುವಾಗ ಬಿಜೆಪಿಯ ಲಕ್ಷ್ಮೀಕಾಂತ ಎಂಬುವನು ಅಲ್ಲಿದ್ದ. ಆರಂಭದಲ್ಲೇ ಸ್ವತಃ ಅವನೇ ಒಂದೆರಡು ಅರ್ಜಿಗಳನ್ನು ತುಂಬಿ ಕೊಟ್ಟಿದ್ದಾನೆ. ಅಷ್ಟರಲ್ಲಿ ಕ್ಷೇತ್ರದ ಬಿಜೆಪಿ ಶಾಸಕ ಸುನಿಲ್ ವಲ್ಲಾಪುರೆ ಅವರಿಂದ ಆತನಿಗೆ ಫೋನ್ ಕರೆ ಬಂದಿದೆ. ತಕ್ಷಣವೇ ಸರಾಯಿ ಅಂಗಡಿಗೆ ಹೋಗಿ ಕುಡಿದು ಬಂದ ಆತ ಕೃಷಿಕೂಲಿಕಾರರ ಸಂಘದ ಸದಸ್ಯತ್ವ ಕಾರ್ಯಕ್ಕೆ ಅಡ್ಡಿಪಡಿಸಿ, ಭೀಮಶೆಟ್ಟಿ ಯಂಪಳ್ಳಿ ಅವರನ್ನು ಅವಾಚ್ಯ ಶಬ್ದಗಳಿಂದ ನಿಂದಿಸಿ



ಅವಮಾನ ಮಾಡಿದ್ದಾನೆ. ಕುಡುಕನೊಂದಿಗೆ ಜಗಳ ಮಾಡಿ ಪ್ರಯೋಜನವಿಲ್ಲ ಎಂದು ಕೃಷಿ ಕೂಲಿಕಾರರ ಸಂಘದ ಕಾರ್ಯಕರ್ತರು ಪೊಲೀಸರಿಗೆ ತಿಳಿಸಿದ್ದಾರೆ. ಆದರೆ ತಾಲ್ಲೂಕ ಶಾಸಕರ ಒತ್ತಡಕ್ಕೆ ಮಣಿದ ಪೊಲೀಸರು ಆರೋಪಿಯ ಮೇಲೆ ಯಾವುದೇ ಕ್ರಮ ಜರಗಿಸಲು


> ತಮ್ಮ ಕೇತ್ರದಲ್ಲಿ ಬಡವರು ಮನೆ-ನಿವೇಶನಕ್ಕಾಗಿ ಬೇಡಿಕೆ ಇಡುತ್ತಾರೆಂದು ಕಂಡು ಬಂದರೆ ಶಾಸಕರು ಕೆಂಗಣ್ಣು ಬಿಡುತ್ತಾರೆ. ಕೂಲಿಕಾರರು ಸಂಘಟಿತರಾಗುವುದು ಕಂಡು ಬಂದರೆ ಅಡ್ಡಿ ಪಡಿಸಿ ದೌರ್ಜನ್ಯಕ್ಕೆ ಮುಂದಾಗುತ್ತಾರೆ. ಜನರ ಸಮಸ್ಯೆ ಪರಿಹರಿಸಿ ಆ ಮೂಲಕ ಮತದಾರರ ವಿಶ್ವಾಸ ಗೆಲ್ಲುವ ಕ್ರಮದಲ್ಲಿ ನಂಬಿಕೆ ಇಲ್ಲದ ಬಿಜೆಪಿ ಶಾಸಕನ ಈ ವರ್ತನೆ ಆತನೊಬ್ಬನದು ಮಾತ್ರವಲ್ಲ, ರಾಜ್ಯ ಬಿಜೆಪಿ ಸರ್ಕಾರದ ಧೋರಣೆಯನ್ನೂ ಅದು ಪ್ರತಿಫಲಿಸುತ್ತಿದೆ.

ನಿತ್ಯಾನಂದಸ್ವಾಮಿ

ಮುಂದಾಗಲಿಲ್ಲ. ಇದರಿಂದ ಆತನಿಗೆ ಇನ್ನಷ್ಟು ಕುಮ್ಮಕ್ಕು ಸಿಕ್ಕಂತಾಗಿ ಭೀಮಶೆಟ್ಟಿಯಂಪಳ್ಳಿ ಅವರು ತಂದಿದ್ದ ಕಾರಿನ ಚಾವಿಯನ್ನು ಕಿತ್ತುಕೊಂಡು ಕಾರ್ಯಕರ್ತರನ್ನು ಗಂಟೆಗಟ್ಟಲೆ ಅಲ್ಲೇ ಕೂಡುಹಾಕಿದನು. ಆತನ ಈ ಉದ್ದಟತನವನ್ನು ಕಂಡು ಬೇಸತ್ತ ಗ್ರಾಮದ ಕೆಲ ಹಿರಿಯರು ಆತನಿಗೆ ಬೈದು ಕಾರಿನ ಚಾವಿಯನ್ನು ವಾಪಸ್ ಕೊಡಿಸಿದರು.

ಪರಿಸ್ಥಿತಿ ಶಾಂತವಾಯಿತು ಎಂದು ಭಾವಿಸಿದ ಅರ್ಜಿದಾರರು ಆಟೋರಿಕ್ಷಾಗಳ ಮೂಲಕ ಸುಮಾರು 4 ಕಿ.ಮೀ. ದೂರದಲ್ಲಿರುವ ಐನೋಳ್ಳಿ ಗ್ರಾಮ ಪಂಚಾಯತ್ ಕೇಂದ್ರಕ್ಕೆ ಬಂದರು. ಗ್ರಾಮ ಪಂಚಾಯತ್ ಅಭಿವೃದ್ಧಿ ಅಧಿಕಾರಿ ಅರ್ಜಿಗಳನ್ನು ಸ್ವೀಕರಿಸಲು ಆರಂಭ ಮಾಡಿದರು. ಆದರೆ ಶಾಸಕರೊಂದಿಗೆ ಬಿಟ್ಟುಬಿಡದ ಫೋನ್ ಸಂಪರ್ಕದಲ್ಲಿದ್ದ ಲಕ್ಷ್ಮೀಕಾಂತ ಅಲ್ಲಿಗೂ ಬಂದನಲ್ಲದೆ ಅರ್ಜಿದಾರರ ಕೈಯಲ್ಲಿದ್ದ ಅರ್ಜಿಗಳನ್ನು ಕಿತ್ತುಕೊಂಡು ಪಂಚಾಯತಿ ಪಿ.ಡಿ.ಓ.ಗೆ ಬೆದರಿಕೆ ಹಾಕಿದನು. ಆತನಿಗೂ ಸಂಘದ ಕಾರ್ಯಕರ್ತರಿಗೂ ತೀವ್ರ ವಾಗ್ವಾದ ನಡೆಯಿತು. ಪರಿಸ್ಥಿತಿ ವಿಕೋಪಕ್ಕೆ ಹೋಗುವ ಸಾಧ್ಯತೆಯನ್ನು ತಿಳಿದುಕೊಂಡರೂ ಪೊಲೀಸರು ಸ್ಥಳಕ್ಕೆ ಆಗಮಿಸಲಿಲ್ಲ. ಸಂಘದ ಮುಖಂಡರು ಅರ್ಜಿದಾರರನ್ನು ಕರೆದುಕೊಂಡು ಚಿಂಚೋಳಿ ಪೊಲೀಸ್ ಸ್ಟೇಷನ್ನಿಗೆ ಬಂದು ಲಕ್ಷ್ಮಿಕಾಂತನ ವಿರುದ್ಧ ಲಿಖಿತ ದೂರು ಸಲ್ಲಿಸಿದರು. ಸರ್ಕಲ್ ಇನ್ಸ್‌ಪೆಕ್ಟರ್ ಬಸವರಾಜ್ ದೂರನ್ನು ಸ್ವೀಕರಿಸಿದರೂ ಆರೋಪಿಯನ್ನು ಬಂಧಿಸಿ ಕ್ರಮ ಜರಗಿಸಲು ಮುಂದಾಗಲಿಲ್ಲ.

ಮರುದಿನ ಭಾನುವಾರ ಸುತ್ತಮುತ್ತಲಿನ ಗ್ರಾಮಗಳಿಂದ ಕೃಷಿಕೂಲಿಕಾರರು ನೂರಾರು ಸಂಖ್ಯೆಯಲ್ಲಿ ಚಿಂಚೋಳಿ ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯನ್ನು ನಡೆಸಿ ಬಡವರು ಸಂಘಟಿತರಾಗುವುದನ್ನು ಸಹಿಸದ ಶಾಸಕನ ವಿರುದ್ಧ, ಆತನೊಂದಿಗೆ ಕೈ ಜೋಡಿಸಿ ಆರೋಪಿ ಲಕ್ಷ್ಮೀಕಾಂತ ವಿರುದ್ಧ ಕಾನೂನು ಕ್ರಮ ಜರಗಿಸಲು



ಹಿಂದೇಟು ಹಾಕುತ್ತಿದ್ದ ಪೋಲೀಸ್ ಇನ್ಸ್‌ಪೆಕ್ಟರ್ ವಿರುದ್ಧ ಘೋಷಣೆಗಳನ್ನು ಕೂಗಿ ಪೊಲೀಸ್ ಸ್ಟೇಷನದ ಎದುರು ಧರಣಿ ನಡೆಸಲು ಮುಂದಾದರು. ಪೊಲೀಸ್ ಸ್ಟೇಷನ್ ಎದುರು ಧರಣಿ ನಡೆಸಲು ಅವಕಾಶ ಕೊಡುವುದಿಲ್ಲ ಎಂದು ಸರ್ಕಲ್ ಇನ್ಸ್‌ಪೆಕ್ಟರ್ ಕೂಗಾಡಿದಾಗ ಪ್ರತಿಭಟನಾಕಾರರು ಆತನಿಗೆ ತಕ್ಕುದಾದ ಉತ್ತರವನ್ನು ಕೊಟ್ಟರು. ಸಂಜೆಯಾದರೂ ಪ್ರತಿಭಟನೆಯಲ್ಲಿ ಭಾಗವಹಿಸಿದ್ದ ಪುರುಷರು ಹಾಗೂ ಮಹಿಳೆಯರು ಚದುರದಿರುವುದನ್ನು ನೋಡಿ, ಸರ್ಕಲ್ ಇನ್ಸ್‌ಪೆಕ್ಟರ್ ಆರೋಪಿ ವಿರುದ್ಧ ಪ್ರಕರಣ ದಾಖಲು ಮಾಡಿ ಎಫ್.ಐ.ಆರ್. ಪ್ರತಿಯನ್ನು ನೀಡಿದನು. ಧರಣಿಯಲ್ಲಿ ಭೀಮಶೆಟ್ಟಿ ಯಂಪಳ್ಳಿ, ದಾವಲ್‌ಸಾಭ್ ನಧಾಫ್, ಶರಣಬಸಪ್ಪ ಮಮಶೆಟ್ಟಿ, ಮಲ್ಲಮ್ಮ ಕೋಡ್ಲಿ, ಅಶೋಕ್ ಮ್ಯಾಗೇರಿ, ಸಿದ್ಧಲಿಂಗಯ್ಯಸ್ವಾಮಿ, ತುಳಜಪ್ಪ ರುಸ್ತಾಂಪುರ ಮುಂತಾದವರು ಮಾತನಾಡಿ ತಪ್ಪಿತಸ್ಥ ಲಕ್ಷ್ಮೀಕಾಂತ್ರನ ವಿರುದ್ಧ ಕ್ರಮ ಜರುಗಿಸಬೇಕೆಂದೂ ಕೂಲಿಕಾರರ ಸಂಘದ ನ್ಯಾಯಸಮ್ಮತವಾದ ಹೋರಾಟಗಳಿಗೆ ಅಗತ್ಯ ಭದ್ರತೆ ನೀಡಬೇಕೆಂದು ಒತ್ತಾಯಿಸಿದರು.

ಮಾಶಾಸನಕ್ಕೆ ಆಗ್ರಹಿಸಿ-ಹೋರಾಟ:

ಚಿಂಚೋಳಿ ವಿಧಾನಸಭಾ ಕ್ಷೇತ್ರದ ಶಾಸಕ ಸುನಿಲ್ ವಲ್ಲಾಪುರೆ ಮ್ಮುಂಬರುವ ಚುನಾವಣೆಯಲ್ಲಿ ಗೆಲ್ಲುವುದಿಲ್ಲ ಎಂದು ತಾಲ್ಲೂಕಿನಲ್ಲಿ ಕೇಳಿ ಬರುತ್ತಿರುವ ಚರ್ಚೆಯಿಂದಾಗಿ ತಲೆಕೆಡಿಸಿ ಕೊಂಡಿದ್ದಾರೆ. ಆಗಾಗ ನಡೆಸುವ ಸಾಮೂಹಿಕ ವಿವಾಹಗಳಿಂದ ಬಡವರ ಮತಗಳನ್ನು ಪಡೆಯಲು ಸಾಧ್ಯವಿಲ್ಲ ಎಂದು ಮನವರಿಕೆಯಾಗತೊಡಗಿದೆ. ಆದ್ದರಿಂದ ಬಡವರು ಸಂಘಟಿತರಾಗುವುದು, ತಮ್ಮ ಬೇಡಿಕೆಗಳನ್ನು ಮುಂದಿಟ್ಟು ಹೋರಾಟಗಳನ್ನು ನಡೆಸುವುದು ಅವರಿಗೆ ಸಹಿಸಲಾಗುತ್ತಿಲ್ಲ.

ಸ್ಥಗಿತಗೊಳಿಸಲಾದ ಸಂಧ್ಯಾ ಸುರಕ್ಷಾ, ವಿಧವಾ ಮತ್ತು ಅಂಗವಿಕಲರ ಮಾಸಾಶನವನ್ನು ಪುನರಾರಂಭ ಮಾಡಬೇಕೆಂದು ಒತ್ತಾಯಿಸಿ ಇತ್ತೀಚೆಗೆ ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘದ ಆಶ್ರಯದಲ್ಲಿ ಅನಿರ್ದಿಷ್ಟ ಧರಣಿಯನ್ನು ನಡೆಸಲಾಗಿತ್ತು. ತಹಶೀಲ ಕಛೇರಿ ಎದುರು 48 ಗಂಟೆಗಳ ಕಾಲ ನಡೆದ ಈ ಧರಣಿಯಲ್ಲಿ ಸಾವಿರಕ್ಕೂ ಹೆಚ್ಚು ಅರ್ಜಿದಾರರು ಪಾಲ್ಗೊಂಡಿದರು. ಈ ಕಾರ್ಯಕ್ರಮದ ಯಶಸ್ಸಿನಿಂದಾಗಿ ಶಾಸಕರಿಗೆ ಹೊಟ್ಟೆಉರಿ ಆರಂಭವಾಗಿದೆ.

"ಮನೆ ನಿವೇಶನಗಳನ್ನು ಕೊಡುವುದು ಶಾಸಕರು ನೀವು ಯಾಕೆ ಅರ್ಜಿಗಳನ್ನು ಸಂಗ್ರಹಿಸುತ್ತೀರಿ" ಎಂದು ಆತನ ಬಂಟನೊಬ್ಬನನ್ನು ಕಳುಹಿಸಿ ಚಂದ್ರಂಪಳ್ಳಿಯಲ್ಲಿ ಗಲಾಟೆ ಮಾಡಿಸಿದ್ದಾನೆ. ಆದರೆ ಆತನ ಈ ಕೃತ್ಯದಿಂದಾಗಿ ಬಡವರ ಎದುರು ಆತನ ಬಣ್ಣ ಬಯಲಾಗುತ್ತಿದೆ. ಬಗರ್ ಹುಕುಂ ಸಾಗುವಳಿ ಮಾಡುತ್ತಿರುವ ಬಡವರಿಗೂ ಆತ ಬೆದರಿಕೆ ಹಾಕುತ್ತಿದ್ದಾನೆ. ಕೂಲಿಕಾರರ ಸಂಘದವರು ಬಗರ್ ಹುಕುಂ ಸಾಗುವಳಿ ಭೂಮಿಯಲ್ಲಿ ಬಿತ್ತನೆ ಕೆಲಸ ಮಾಡಿಸುತ್ತಿರುವುದು ಆತನಿಗೆ ಸಹಿಸಲಾಗುತ್ತಿಲ್ಲ. ಜನಪರ ಕೆಲಸ ಮಾಡಿ ಜನರ ವಿಶ್ವಾಸಗಳಿಸುವ ಪ್ರವೃತ್ತಿ ಬಿಜೆಪಿ ಪಕ್ಷದಲ್ಲೇ ಇಲ್ಲದಿರುವುದರಿಂದ ಸುನಿಲ್ ವಲ್ಲಾಪುರ ಅವರಿಗೆ ಮಾತ್ರ ಒಳ್ಳೆಯ ಬುದ್ಧಿ ಹೇಗೆ ಬಂದೀತು?

ಬರಿಯ ವಂಚನೆ

ಪ್ರಕೃತಿ ವಿಕೋಪದಿಂದ ಸರ್ವಸ್ವವನ್ನು
ಕಳಕೊಂಡ ಮೊರಳಿಲ್ಲ ಕಣ್ಣು
ಅಲ್ಲಿಯೂ ನಡೆದಿಲ್ಲ ಇವನ ಪವಾಡ
ಎಲ್ಲವೂ ವಂಚನೆಯು ಸಂದೇಹ ಬೇಡ

– ವಿಡಂಬಾರಿ

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅರವತ್ತರ ಸಂಭ್ರಮದ ಎದುರಲ್ಲಿ ಕೇಕೆ ಹಾಕುತ್ತಿರುವ ಅಪಾಯಗಳು

ಕರ್ನಾಟಕ ವಿಧಾನಸಭಾ ಮೊದಲ ಅದಿವೇಶನ ಜರುಗಿ ಇದೇ ಜೂನ್ 18ಕ್ಕೆ 60ವರುಷಗಳು ತುಂಬಿವೆ. ಅದರ ಸಂಭ್ರಮಾಚರಣೆಯನ್ನು ನಡೆಸಿದ್ದು ಸ್ವಾಗತಾರ್ಹ. ಆದರೆ ಆ ಸಂದರ್ಭದಲ್ಲಿ ಆ ಮಹಾ ಸಂಸ್ಥೆ ಸಾಗಿ ಬಂದ ಹಾದಿ, ಏಳು-ಬೀಳುಗಳು, ಸಾಧನೆ -ಸವಾಲುಗಳು, ಜನತೆಯ ಹಿತ ಕಾಯುವಲ್ಲಿ ಅದರ ಪ್ರಯತ್ನಗಳು-ವಿಫಲತೆಗಳನ್ನು , ಸಾಗಬೇಕಾದ ಹಾದಿಯನ್ನು ಕುರಿತು ಗಂಭೀರವಾದ ಯಾವುದೇ ಚರ್ಚೆ- ಸಂವಾದಗಳನ್ನು ಹುಟ್ಟು ಹಾಕದಿರುವುದು ಇಂದಿನ ಅದರ ಸ್ಥಿತಿಗೆ ಹಿಡಿದ ಕನ್ನಡಿ ಎಂದೇ ಹೇಳಬೇಕಾಗುತ್ತದೆ. ಅದರಲ್ಲೂ ಜನತೆಯ ಆಶಯಗಳ ಈಡೇರಿಕೆಯಲ್ಲಿ, ಪ್ರಜಾಪ್ರಭುತ್ವ, ಮತ ನಿರಪೇಕ್ಷತೆ, ಸಾಮಾಜಿಕ ನ್ಯಾಯ, ವೈಜ್ಞಾನಿಕ ದೃಷ್ಟಿ .ಪ್ರಗತಿಯಂತಹ ಉನ್ನತ ಮೌಲ್ಯಗಳ ರಕ್ಷಣೆ ಮತ್ತು ಅವುಗಳನ್ನು ಬಲಪಡಿಸಲು ಸದಾ ಸಕಾರಾತ್ಮಕವಾಗಿ ಹೋರಾಡುತ್ತಾ , ಅಪಾರ ಕೊಡುಗೆಗಳನ್ನು ನೀಡಿದ ದುಡಿಯುವ ವರ್ಗದ ಪ್ರತಿನಿಧಿಗಳಾದ ಉಭಯ ಕಮ್ಯುನಿಷ್ಟ್ ಪಕ್ಷಗಳ ಯಾವೊಬ್ಬ ನಾಯಕರನ್ನು ಆಹ್ವಾನಿಸದೇ ಇರುವುದು ಮತ್ತು ಉಲ್ಲೇಖಿಸದೇ ಇರುವುದು ತೀವ್ರ ಆಕ್ಷೇಪಾರ್ಹವಾದುದು . ಇದು ಆಳುವವರ ಸಂಕುಚಿತ ಮತ್ತು ದುಡಿಯುವ ಜನ ವಿರೋಧಿ ಸ್ಥಾಪಿತ ವರ್ಗ ಹಿತಾಸಕ್ತಿಯ ಸೂಚಕ.

1952 ರಲ್ಲಿ ಮೊದಲ ಅಧಿವೇಶನ ಸೇರುವ ಹೊತ್ತಿನಲ್ಲಿ ದೇಶ ಸ್ವಾತಂತ್ರ್ಯ ಗಳಿಸಿದ ಸಂಭ್ರಮವಿತ್ತು. ಹರಿದು ಹಂಚಿ ಹೋಗಿದ್ದ ಕನ್ನಡನಾಡು ಒಂದಾಗಬೇಕು, ಸ್ವಾತಂತ್ರ್ಯದ ಹೋರಾಟದ ತ್ಯಾಗ, ಬಲಿದಾನಗಳ ಫಲ ದಕ್ಕ ಬೇಕೆಂಬ ಆಕಾಂಕ್ಷೆಗಳಿದ್ದವು. ಸಂಕಷ್ಟಗಳ ಎದುರಿನಲ್ಲಿ ಅಪಾರ ಸಾಧ್ಯತೆ, ಸಂಪನ್ಮೂಲ, ಅವಕಾಶಗಳು ಇದ್ದವು. ಅವುಗಳನ್ನು ಸಾಕಾರಗೊಳಿಸುವುದಕ್ಕೆ, ಜನಪರಗೊಳಿಸುವುದಕ್ಕೆ ಸಂಸದೀಯ ಪ್ರಜಾಪ್ರಭುತ್ವದ ಉನ್ನತ ವೇದಿಕೆಯಾದ ಶಾಸನಸಭೆ ಪರಿಣಾಮಕಾರಿಯಾಗಿ ಬಳಕೆಯಾಯಿತೇ ಎಂದರೆ ಉತ್ತರ ತೃಪ್ತಿದಾಯಕವಿಲ್ಲ. ಮುಖ್ಯವಾಗಿ ಜನತೆಯಿಂದ, ಜನತೆಗಾಗಿಯೆಂದು ಘೋಷಿಸಲ್ಪಟ್ಟರೂ ಅದು ಪ್ರಭುತ್ವ ಹಿಡಿದ ಭೂ ಮಾಲೀಕ, ಬಂಡವಾಳಗಾರರ ವರ್ಗ ಹಿತ ಸಾಧನೆಯ, ರಕ್ಷಣೆಯೇ ಪ್ರಧಾನ ಹಿತವಾಗಿರುವುದು ಸದಾ ಎದ್ದು ಕಾಣುವ ಅಂಶ. ಈ ಹಿನ್ನೆಲೆಯಲ್ಲಿಯೇ ಜನತೆಗೂ ಒಂದಿಷ್ಟು ದಕ್ಕಿದೆ.

ಆರಂಭದ ಹಲವು ದಶಕಗಳಲ್ಲಿ ವಿಧಾನ ಸಭೆ ಕಲಾಪಗಳು ಹಲವಾರು ಮಹತ್ತರ ಕೊಡುಗೆಗಳನ್ನು ನೀಡಿವೆ. ದೇಶದಲ್ಲಿಯೂ, ರಾಜ್ಯದಲ್ಲಿಯೂ ಎಡ ಶಕ್ತಿಗಳ ನೇತೃತ್ವದಲ್ಲಿ ನಡೆದ ಕಾರ್ಮಿಕ, ರೈತಾಪಿ ವರ್ಗಗಳ ಪ್ರಬಲ ಚಳುವಳಿಗಳು ಕಾರ್ಮಿಕ ಕಾನೂನುಗಳು, ಭೂ ಸುಧಾರಣೆ ಕಾನೂನುಗಳನ್ನು ತರುವಲ್ಲಿ ಪರಿಣಾಮಿಸಿವೆ. ಶೋಷಿತ, ದಲಿತ-ಹಿಂದುಳಿದ ವರ್ಗಗಳ ಮೀಸಲಾತಿ, ದಬ್ಬಾಳಿಕೆ ತಡೆ, ಹಿತಾಸಕ್ತಿಗಳ ರಕ್ಷಣೆ, ಪ್ರಜಾಪ್ರಭುತ್ವದ, ಆಡಳಿತದ ವಿಕೇಂದ್ರೀಕರಣ ಇತ್ಯಾದಿಗಳು ಉಲ್ಲೇಖನೀಯ. ಆದರೆ ಉದಾರೀಕರಣ, ಜಾಗತೀಕರಣದ ನೀತಿಗಳ ಜಾರಿಯಾಗುತ್ತಿರುವ ಪ್ರಕ್ರಿಯೆಯಲ್ಲಿ ಸಾಧಿಸಲಾದ ಎಲ್ಲವಕ್ಕೂ ತಿಲಾಂಜಲಿ ನೀಡುತ್ತಾ ಬರಲಾಗಿದೆ.

ಇಂದು ಅತ್ಯಂತ ಹೆಮ್ಮರವಾಗಿ ಬೆಳೆಯಬೇಕಿದ್ದ ಪ್ರಜಾಪ್ರಭುತ್ವ ಸೊರಗುತ್ತಾ, ಸಾಗಿರುವುದು ದುರಂತದ ಮುನ್ನುಡಿಯಾಗಿದೆ. ಸದನದಲ್ಲಿ ಯಾವುದೇ ಪ್ರಶ್ನೆಗಳ ಬಗೆಗೂ ಗಂಭೀರ ಚರ್ಚೆಗಳೇ ಇಲ್ಲವಾಗಿವೆ, ಇಲ್ಲವಾಗಿಸಲಾಗುತ್ತಿದೆ. ಆಂತೆ ನಡುವಿನ ರಾಜಕಾರಣದಿಂದ ರೂಪುಗೊಂಡವರ ಬದಲು ಭೂ, ಗಣಿ ಮಾಫಿಯಾ ಮತ್ತು ಕಾರ್ಪೊರೇಟ್ ಕಂಪನಿಗಳ ಪ್ರತಿನಿಧಿಗಳೇ ತುಂಬುತ್ತಿದ್ದಾರೆ. ಸದನದ ಕಲಾಪಗಳನ್ನು ಗಂಭೀರವಾಗಿ ಪರಿಗಣಿಸಿ ಅಗತ್ಯ ಸಿದ್ದತೆಗಳನ್ನೂ ಮಾಡಿಕೊಳ್ಳುವ ಶಾಸಕರು, ಸಚಿವರು ಕಾಣೆಯಾಗಿದ್ದಾರೆ. ಜನ ಜೀವನ, ಸಮಾಜವನ್ನೇ ಅಲುಗಾಡಿಸುವಂತಹ ಅತ್ಯಂತ ಮಹತ್ವದ ಬಹುತೇಕ ಎಲ್ಲಾ ಮಸೂದೆಗಳು ಏನೊಂದೂ ಚರ್ಚೆಯಿಲ್ಲದೇ ಗದ್ದಲಗಳ ನಡುವೆ ಧ್ವನಿ ಮತದ ಹೆಸರಿನಲ್ಲಿ ಅನುಮೋದನೆಗೊಂಡಿವೆ. ಇತ್ತೀಚಿನ ಬಿಜೆಪಿ ಆಡಳಿತದಲ್ಲಿ ಇವುಗಳನ್ನೂ ಒಳಗೊಂಡು ಶಾಸಕರ ಖರೀದಿ, ಆಪರೇಷನ್ ಕಮಲ, ವಿರೋಧ ಪಕ್ಷಗಳನ್ನು ಸಭೆಗೆ ಬಿಡದೇ ತಡೆದ ಪ್ರಕರಣ, ಲೈಂಗಿಕ ವಿಡೀಯೋ ವೀಕ್ಷಣೆ, ಸದನ ಸಮಿತಿಗಳೆಂಬ ಹುಸಿ ನಾಟಕ, ಇತ್ಯಾದಿಗಳು ಮಿತಿಮೀರಿವೆ. ಫ್ಯಾಶಿಸ್ಟ್ ಮಾದರಿಯ ಶಕ್ತಿಗಳ ಕೈಯಲ್ಲಿ ಪ್ರಜಾಪ್ರಭುತ್ವ, ಸಂವಿಧಾನ ನಿತ್ಯವೂ ಧಾಳಿಗೊಳಗಾಗುತ್ತಿದೆ. ಸದನವನ್ನು, ಪ್ರಜಾಪ್ರಭುತ್ವವನ್ನು, ಶಾಸಕರ ಹಕ್ಕುಗಳನ್ನು ಕಾಪಾಡಬೇಕಾದ ಸಭಾಧ್ಯಕ್ಷರು ಆಡಳಿತ ಪಕ್ಷದ ಅಕ್ರಮಗಳನ್ನು ರಕ್ಷಿಸಲು ಬುಡಮೇಲು ಕೃತ್ಯಗಳಿಗೆ ನೇರವಾಗಿ ಇಳಿದಿರುವುದು ಅತ್ಯಂತ ಖಂಡನಾರ್ಹ ಸಂಗತಿಯಾಗಿದೆ. ಇದಕ್ಕಾಗಿ ಸುಪ್ರಿಂಕೋರ್ಟನಿಂದ ಛೀಮಾರಿ ಹಾಕಿಸಿಕೊಂಡರೂ ರಾಜಿನಾಮೆ ಕೊಡದೇ ಭಂಡತನದಲ್ಲೇ

ಪುಟ 4ಕ್ಕೆ

ನಾಲಿಗೆಯ ತುದಿಯಲ್ಲೇ ಬೆಂಕಿ ಹೊತ್ತಿಸುವವರು!

'ಬಾಯಿ ಬಿಟ್ಟರೆ ಬಣ್ಣಗೇಡು' ಎಂಬ ಗಾದೆ ಮಾತಿಗೆ ಸಲ್ಲುವ ರಾಜಕಾರಣಿಯೆಂದರೆ ಅದು ಕೆ.ಎಸ್.ಈಶ್ವರಪ್ಪ ಎಂಬುದು ಎಲ್ಲರಿಗೂ ಗೊತ್ತು. ಮೊನ್ನೆ ಶಿವಮೊಗ್ಗದ ಕಾರ್ಯಕ್ರಮವೊಂದರಲ್ಲಿ ರಾಜ್ಯದ ಬಿಜೆಪಿ ಸರಕಾರ ಶಿಕ್ಷಣವನ್ನು ಕೋಮುವಾದೀಕರಿಸುತ್ತಿರುವ ಕ್ರಮವನ್ನು ಹಾಡಿ ಹೊಗಳಿದ್ದಲ್ಲದೇ ಶಿಕ್ಷಣ ಸಚಿವ ಚೆಡ್ಡಿ ವೀರ ಕಾಗೇರಿಯನ್ನು ಅದಕ್ಕಾಗಿ ಪ್ರಚೋದಿಸಿದ್ದಾರೆ. ಅದನ್ನು ಇನ್ನಷ್ಟು 'ತೀವ್ರಗೊಳಿಸಲು ಹೇಳಿದ್ದಕ್ಕೆ ವ್ಯಾಪಕ ಟೀಕೆ ವ್ಯಕ್ತವಾಗಿದೆ. ಆದರೆ ಅದರಿಂದ ತಿದ್ದಿಕೊಳ್ಳುವ ಬದಲು 'ಧರ್ಮ, ಸಂಸ್ಕೃತಿಗಾಗಿ ಜೈಲು ಸೇರಲು ಸಿದ್ಧ' ಎಂದು ಮತ್ತೊಂದು 'ರಾಷ್ಟ್ರ ಭಕ್ತಿ' ಯ ಗುರಾಣಿ ಹಿಡಿದು ಭಾಷಣಕ್ಕೆ ನಿಂತು ಬಿಟ್ಟಿದ್ದಾರೆ.

ಈಶ್ವರಪ್ಪ ರಾಷ್ಟ್ರೀಯ ಪಕ್ಷವೊಂದರ ರಾಜ್ಯ ಅಧ್ಯಕ್ಷ, ಮೇಲಾಗಿ ಶಾಸಕ. ಬಾರತದ ಸಂವಿಧಾನದಂತೆ ರಾಜ್ಯ ಸರಕಾರವೊಂದಕ್ಕೆ ಶಿಕ್ಷಣ ನೀತಿಯೊಂದನ್ನು ರೂಪಿಸಿಕೊಳ್ಳಲು, ಪಠ್ಯ ಕ್ರಮ ರಚಿಸಲು ಅಧಿಕಾರವಿದೆಯಾದರೂ ಅದು ನಮ್ಮ ಸಂವಿಧಾನದ ಆಶಯಕ್ಕೆ ಅನುಗುಣವಾಗಿಯೇ ಇರಬೇಕು.



ಆದರೆ ಸಂಘ ಸಂತತಿಗೆ ಸಂವಿಧಾನ, ದೇಶದ ಸಂಸ್ಕೃತಿ ಕಾನೂನು ಎಂದರೆ ಕಡು ದ್ವೇಷ. ಅದು ಅವರ ರಕ್ತದಲ್ಲಿ ಸದಾ ಪ್ರವಹಿಸುತ್ತಲೇ ಇರುತ್ತದೆ.

ಈಶ್ವರಪ್ಪನವರ ಈಗಿನ ಹೇಳಿಕೆ ಅಚಾತುರ್ಯದಿಂದ, ನಾಲಿಗೆ ತಪ್ಪಿ ಬಂದುದೆಂದು ಬಾವಿಸಬೇಕಿಲ್ಲ. ಹಗರಣ, ಕಿತ್ತಾಟ, ಆಡಳಿತದ ಸಂಪೂರ್ಣ ವೈಫಲ್ಯಗಳಿಂದ ಈ ಸರಕಾರ ಯಾವಾಗಲೂ ಪತನಗೊಳ್ಳಬಹುದಾಗಿದೆ. ಚುನಾವಣೆಯ ಕತ್ತಿ ನೆತ್ತಿಯ ಮೇಲೆ ತೂಗುತ್ತಿದೆ. ತಾವು ಮಾಡಿಕೊಂಡ ಅಭಿವೃದ್ದಿಯನ್ನು ಹಿಡಿದು ಜನರೆದುರು ಹೋಗಲು ಮುಖವಿಲ್ಲವಾಗಿದೆ. ಹೀಗಾಗಿ ಜಾತಿ, ಕೋಮುವಾದ, ಹಣದ ಥೈಲಿ ಹಿಡಿದು ಜನತೆಯನ್ನು ವಂಚಿಸಿ ಅಧಿಕಾರಕ್ಕೆ ಬರುವ ಹವಣಿಕೆಯಿದೆ. ಆದ್ದರಿಂದಲೇ ಯಡಿಯೂರಪ್ಪನವರ ಗುಂಪಿನ ಬಂಡಾಯ ಮತ್ತೆ ಗರಿಗೆದುರುತ್ತಿರುವಂತೆ ಜನರ ಗಮನ ಕೋಮು ಉದ್ರೇಕದತ್ತ ಹೊರಳಿಸಲು ಇದನ್ನು ಬಳಸಲಾಗುತ್ತಿದೆ.

ಇದು ಕೇವಲ ಈಶ್ವರಪ್ಪನವರ ಪ್ರಯತ್ನವಷ್ಟೇ ಅಲ್ಲ. ಬಿಜೆಪಿ,- ಇಡೀ ಸಂಘ ಪರಿವಾರ ಅಂಥಹದ್ದಕ್ಕೆ ಸನ್ನದ್ಧಗೊಂಡಿದೆ. ಪುನಃ ಇನ್ನೊಂದು ಸುತ್ತಿನಲ್ಲಿ 'ಹಿಂದು'ಗಳನ್ನು ಪ್ರಚೋದಿಸಲು ಹೊರಟಿದೆ. ಹಿಂದು ಜನಜಾಗೃತಿ ಹೆಸರಲ್ಲಿ ರಾಜ್ಯದಲ್ಲಿ ಸಮಾಜೋತ್ಸವಗಳನ್ನು ಆಯೋಜಿಸಿದೆ. ಇಂತಹ ಸಮಾಜೋತ್ಸವಗಳು ತಂದ ಗಲಭೆ, ಅನಾಹುತಗಳನ್ನು ರಾಜ್ಯದ ಜನತೆ ಕಂಡಿದೆ. ಅಂದರೆ ಕೋಮು -ವಿಭಜನೆ ಪ್ರಚೋದನೆ, ಗಲಭೆಗಳ ಹಿಂಸಾಕಾಂಡ ಅನಿರೀಕ್ಷಿತವೇನಲ್ಲ. ಈ ಹಿನ್ನೆಲೆಯಲ್ಲೇ ಈಶ್ವರಪ್ಪ, ಕಾಗೇರಿ, ಗೂಗೇರಿ ಮಾತುಗಳು.!

ಇಂತಹ ಮಾತುಗಳನ್ನಾಡುವವರ ಮೇಲೆ ಸಂವಿಧಾನಾತ್ಮಕ ಸಂಸ್ಥೆಗಳು ಕನಿಷ್ಟ ಕಠಿಣ ಕ್ರಮ ತೆಗೆದುಕೊಳ್ಳಲೇ ಬೇಕು. ಮುಖ್ಯವಾಗಿ ಜನತೆ ಇಂತಹ ದುಷ್ಟ ಆಟಗಳನ್ನು ಅರಿತು ವಿಫಲಗೊಳಿಸಬೇಕು, ತಿರಸ್ಕರಿಸಬೇಕು.

★

ಕಿತ್ತಾಟದ ಈ ಪರಿ

ಇನ್ನೇನು ಜೈಲು ಸೇರಲಿದ್ದಾರೆಂದೆ ಭಾವಿಸಲಾದ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರಿಗೆ ಸದ್ಯ ನಿರೀಕ್ಷಣಾ ಜಾಮೀನು ದೊರೆತಿದೆ. ಜೈಲಿಗೆ ಹೋಗುವ ಮೊದಲು ತಮ್ಮ ಶಕ್ತಿ ಹಾಗೂ ಒತ್ತಡವಿರಲಿಯೆಂದು ಬಂಡಾಯದ ಗುಟುರು ಹಾಕಿ 'ಸದಾನಂದಗೌಡರನ್ನು ಇಳಿಸಿ ಶೆಟ್ಟರನ್ನು ಸಿ.ಎಂ. ಮಾಡಿರಿ' ಎಂದು ಒತ್ತಾಯಿಸಿ ದೆಹಲಿ ಯಾತ್ರೆಗೆ ಮತ್ತೆ ಮುಖ ಮಾಡಿದ್ದಾರೆ. 'ಮುಂದಿನ ಚುನಾವಣೆ ಲಿಂಗಾಯತರ ನೇತೃತ್ವದಲ್ಲೋ ಅಥವಾ ಸೋಲುವ ಸದಾನಂದರಂತಹ ಒಕ್ಕಲಿಗರ ನೇತೃತ್ವದಲ್ಲೋ' ಎಂದು ಬಿಜೆಪಿ ಹೈಕಮಾಂಡ್‌ಗೆ ನೇರವಾಗಿಯೇ ಸವಾಲೆಸೆ ದಿದ್ದಾರೆ. ಅವರು ಕೊಡರು, ಇವರು ಬಿಡರು. ಹೀಗೇ ಸಾಗಿದೆ ಕರ್ನಾಟಕದ ರಾಜಕಾರಣ!

ಪುಟ 4 ಕ್ಕೆ

ಕಾರ್ಟೂನ್ ಕಾರ್ನರ್

'ವಿಧಾನ ಮಂಡಲಕ್ಕೆ 60'



ಗುತ್ತಿಗೆ ಕಾರ್ಮಿಕರಿಗೂ ಸಂಘ ಕಟ್ಟುವ ಸಂವಿಧಾನಿಕ ಹಕ್ಕಿದೆ

ಮೀನಾಕ್ಷಿ ಸುಂದರಂ

ಕೈಗಾರಿಕಾ ವಲಯದಲ್ಲಿ ಬಂಡವಾಳಗಾರರು – ಅತಿ ಹೆಚ್ಚು ಗುತ್ತಿಗೆ ಕಾರ್ಮಿಕರನ್ನು ಬಳಸಿ ಉತ್ಪಾದನೆಗೆ ಮುಂದಾಗುತ್ತಿದ್ದಾರೆ. ಇದರಿಂದ ಸಂಸ್ಥೆಗಳ ಲಾಭ ಬೆಳೆಯುತ್ತಿದೆ. ಆದರೆ ಗುತ್ತಿಗೆ ಕಾರ್ಮಿಕರು ಸಂವಿಧಾನಬದ್ಧವಾಗಿ ಕಾರ್ಮಿಕ ಸಂಘ ಕಟ್ಟಿ ಕಾನೂನಾತ್ಮಕವಾಗಿ ಸಿಗಬೇಕಾದ ಸೌಲಭ್ಯಗಳನ್ನು ಗಳಿಸಲು ಹೊರಟರೆ ಮಾಲೀಕರು ವಿಪರೀತ ಕಿರುಕುಳ ಕೊಟ್ಟು ಹಾಗೂ ಪೋಲೀಸ್ ಬಲ ಬಳಸಿ ಕಾರ್ಮಿಕರ-ಶ್ರಮಿಕರ ಧ್ವನಿ ಅಡಗಿಸಲು ಯತ್ನಿಸುವುದು ಖಂಡನಾರ್ಹ ಎಂದು ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ॥ ಮೀನಾಕ್ಷಿ ಸುಂದರಂ ಅಭಿಪ್ರಾಯಪಟ್ಟರು.

ಅವರು ಜೂನ್ 21, 2012ನೇ ಗುರುವಾರ ತುಮಕೂರು ನಗರದ ಅಂತರಸನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಶ್ರೀಕಾಳೇಶ್ವರಿ ರಿಫೈನರಿ ಪ್ರೈ.ಲಿ., ಕಾರ್ಮಿಕರ ಸಂಘವು ಕಾರ್ಖಾನೆಯ ಮುಂಭಾಗ ಏರ್ಪಡಿಸಿದ್ದ ಸಂಘದ ಧ್ವಜಾರೋಹಣ ಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.



ಮುಂದುವರೆದು ಮಾತನಾಡಿದ ಅವರು ಗೌರವಯುತ ಕೆಲಸ-ಡೀಸೆಂಟ್ ವರ್ಕ್, ಸಾಮೂಹಿಕ ಚೌಕಾಸಿ ಹಕ್ಕುಗಳಿಗೆ ಅಂತರಾಷ್ಟ್ರೀಯ ಕಾರ್ಮಿಕ ಸಂಘಟನೆಗಳು ಮುತುವರ್ಜಿ ವಹಿಸುತ್ತಿದ್ದು ನಮ್ಮ ಆಳರಸರು ಈ ಬಗ್ಗೆ ಕಾಳಜಿ ತಾಳುತ್ತಿಲ್ಲ ಎಂದು ಟೀಕಿಸಿದರು.

ಸಿಐಟಿಯು ಜಿಲ್ಲಾಧ್ಯಕ್ಷರಾದ ಕಾಂ॥ ಸೈಯದ್ ಮುಜೀಬ್ ಮಾತನಾಡಿ ಸಂಘ ಕಟ್ಟುವುದು ಅಪರಾಧವಲ್ಲ ಮಾಲೀಕರಿಗೂ ಸಂಘಟನೆ ಇದೆ. ಸಿಐಟಿಯು ರಚನಾತ್ಮಕ ಕಾರ್ಮಿಕ ಸಂಘವಾಗಿ ಕಾರ್ಮಿಕರ ಹಕ್ಕು ಬಾಧ್ಯತೆಗಳಿಗೆ ದುಡಿಯಲಿದೆ. ಹಾಗಾಗಿ ಕೈಗಾರಿಕೆಗಳಲ್ಲಿ ಕಾರ್ಮಿಕರ ಸಮಸ್ಯೆ ಬಗೆಹರಿಸಲು ಕುಳಿತು – ಚರ್ಚಿಸಿ ಪರಿಹಾರ ಕಾಣಲು ಸಿಐಟಿಯು ಸದಾ ಸಿದ್ಧವಿದೆ ಎಂದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಕಾಂ॥ ಎನ್.ಕೆ. ಸುಬ್ರಹ್ಮಣ್ಯ ಮಾತನಾಡಿ ಕಾರ್ಮಿಕ ಕಾನೂನುಗಳ ಉಲ್ಲಂಘನೆ ನಿರಂತರವಾಗಿದೆ. ಈ ಬಗ್ಗೆ ಸರ್ಕಾರ ಕ್ರಮವಹಿಸಲು ಒತ್ತಾಯಿಸಿದರು. ಸಂಘ ಕಟ್ಟುವವರ ಮೇಲೆ ಸುಳ್ಳು ಪೋಲೀಸ್ ಮೊಕದ್ದಮೆ ಹೂಡಿ ಕಾರ್ಮಿಕರನ್ನು ಬಲಿಪಶು ಮಾಡುವ ಕ್ರಮಗಳು ಕೈಗಾರಿಕಾ ಅಶಾಂತಿಗೆ ಕಾರಣವಾಗುತ್ತಿವೆ. ಇದನ್ನು ಬದಲಿಸಿ ಸಮಸ್ಯೆಗಳ ಪರಿಹಾರ ಕಾಣಲು ಮುಂದಾಗುವ ಸಕಾರಾತ್ಮಕ ಕ್ರಮಗಳ ಅಗತ್ಯವಿದೆ ಎಂದರು

ಆರಂಭದಲ್ಲಿ ಕಾಳೇಶ್ವರಿ ರಿಫೈನರಿ ಕಾರ್ಮಿಕ ಸಂಘದ ಜಂಟಿ ಕಾರ್ಯದರ್ಶಿ ಕೃಷ್ಣಪ್ಪ.ಆರ್. ಪ್ರಾಸ್ತವಿಕ ಮಾತನಾಡಿದರು. ಸಂಘದ ಉಪಾಧ್ಯಕ್ಷರಾದ ಲಿಂಗರಾಜು, ಗೀತಮ್ಮ, ಹಾಗೂ ಖಜಾಂಜಿ ಮುತ್ತುರಾಜ್ ಮಾತನಾಡಿದರು. ಗುಣಿ ಕಂಠ ಸ್ವಾಗತಿಸಿ ಸಿದ್ದಗಂಗಯ್ಯ ವಂದಿಸಿದರು.

ನಾಲಿಗೆಯ ತುದಿಯಲ್ಲೇ ಬೆಂಕಿ ಹೊತ್ತಿಸುವವರು!

ಪುಟ 3 ರಿಂದ

★

ದಂಡು ಕಟ್ಟುತ್ತಿರುವ ದಂಡ ನಾಯಕರು!

ಇತ್ತ ವಿಧಾನ ಪರಿಷತ್ ಚುನಾವಣೆಯಲ್ಲಿ ಆದ ಅಡ್ಡ ಮತದಾನದಿಂದ ಅಧಿಕೃತ ಎರಡನೇ ಅಭ್ಯರ್ಥಿ ಸೋತು ಅನಧಿಕೃತ ಹಾಗೂ ಮತ್ತೊಬ್ಬ ಆತಂಕಿತ ಅಭ್ಯರ್ಥಿ ಅನಿರೀಕ್ಷಿತವಾಗಿ ಗೆದ್ದು ಅಂತರಂಗದೊಳಗೆ ಕುದಿಯುತ್ತಿದ್ದ ಸಿ.ಎಂ. ಘಟ್ಟದ ಹಪಾಹಪಿತನ, ಆತ್ಮಹತ್ಯಾ ರಾಜಕಾರಣ ಹೊರಗೆ ಸಿಡಿದು ಹೈಕಮಾಂಡ್‌ಗೆ ದೂರಿನ ಅರ್ಜಿ ಸಲ್ಲಿಸಿ ಕ್ರಮಕ್ಕಾಗಿ ಕಾದವರು ಇನ್ನೂ ಕಾಯುತ್ತಲೇ ಇರುವುದೇ ರಾಜ್ಯದ ಕಾಂಗ್ರೆಸ್‌ನಲ್ಲಿಯ ವರ್ತಮಾನ. 'ಮುಖಭಂಗಕ್ಕೆ ಕಾರಣರ್‍ಯಾರು ? ಪತ್ತೆ ಹಚ್ಚಲೇಬೇಕು, ಶಿಕ್ಷೆಯಾಗಲೇಬೇಕು' ಎಂದು ರಚಿಸಲಾದ ಸಮಿತಿಯ ಕೈಗೆ ಇನ್ನೂ ಯಾರು ಸಿಗದಿರೋದು ಕುತೂಹಲಕಾರಿಯಾಗಿದೆ.

ಸಂಗತಿ ಹೀಗಿರುವಾಗ ಮುಖ್ಯಮಂತ್ರಿ ಸೀಟಿಗಾಗಿ ಸೀಟಿ ಊದುವವರಲ್ಲಿ ಈಗ ದಾವಣಗೆರೆಯ 'ಧಣಿ'ಗಳು ಸೇರಿಕೊಂಡಿದ್ದಾರೆ. 'ರಾಜ್ಯದಲ್ಲಿ ಕಾಂಗ್ರೆಸ್ ಗೆಲ್ಲಬೇಕಾದರೆ, ನಾಯಕತ್ವ ಲಿಂಗಾಯತರಿಗೆ ಕೊಡಿ, ಕೊಟ್ಟರೆ ಚುನಾವಣೆಯ ಖರ್ಚು ತಮದು' ಎಂದೂ, ಅಡ್ವಾನ್ಸ್ ಬುಕಿಂಗ್ ಬೇರೆ ಮಾಡುತ್ತಿದ್ದಾರೆ. ಅಂತೂ ಲಿಂಗಾಯತರಿಗೆ ಭಾರೀ ಡಿಮಾಂಡ್ ಸೃಷ್ಟಿಯಾಗಿದೆ. ಅತ್ತ ಯಡಿಯೂರಪ್ಪ, ಇತ್ತ ಶ್ಯಾಮನೂರು ಶಿವಶಂಕ್ರಪ್ಪ ಇಬ್ಬರ ಡಿಮಾಂಡ್ ಒಂದೇ ! ಅಂದರೆ ಇವರಿಗೆಲ್ಲಾ ರಾಜ್ಯದ ಲಿಂಗಾಯತರು 'ಉಘೇ, ಉಘೇ' ಎಂದು ವಿಜಯ ಮಾಲೆ ಹಿಡಿದು ಈ ವರಪುತ್ರರ ಬೆನ್ನು ಬಿದ್ದವರಂತೆ ಆಡುತ್ತಿದ್ದಾರೆ!

ಈ ಪ್ರಸಂಗಗಳಿಂದ ಒಂದಂತೂ ಗ್ಯಾರಂಟಿಯಾಗಿದೆ, ಈಗಿರುವ ಅಧ್ಯಕ್ಷ ಪರಮೇಶ್ವರ್ ಖುರ್ಚಿಗೆ ಸಂಚಕಾರ ಒದಗಿದೆ. ಆದ್ದರಿಂದಲೇ ಅವರು 'ತಾನು ಸ್ಟಾಪ್ ಗ್ಯಾಪ್ ಟೆಂಪರರಿ ಅಧ್ಯಕ್ಷ ಅಲ್ಲವೆಂದೂ, ಅಲ್ಲಿಂದ ಎಬ್ಬಿಸಲು ಯಾರಾದರೂ ಯತ್ನಿಸಿದರೆ ಸುಮ್ಮನೇ ಬಿಡುವುದಿಲ್ಲ. ಇಡೀ ದಲಿತರೇ ಬಂಡೇಳಲಿದ್ದಾರೆ' ಎಂದು ಘರ್ಜಿಸಿದ್ದಾರೆ. ಹೀಗೆ ಅಧಿಕಾರದ ಖುರ್ಚಿಗಾಗಿ ಜಾತಿಯ ದಂಡು ಕಟ್ಟುವ ದಂಡನಾಯಕರ ಸಂಖ್ಯೆ ಹೆಚ್ಚುತ್ತಿದೆ. ಇಂತಹ ಕದನ ಸಿದ್ಧತೆಯಲ್ಲಿ ವಿರೋಧ ಪಕ್ಷದ ನಾಯಕರಾದ ಸಿದ್ಧರಾಮಯ್ಯನವರು ಕಾಂಗ್ರೆಸ್ ಕಛೇರಿಯಲ್ಲಿ ಒಮ್ಮೆ ಒಳ ಹೊರ ಓಡಾಡುತ್ತಾ ನೆಲ ಮುಗಿಲಿಗೆ ಕಣ್ಣು ಹಾಯಿಸುತ್ತಿದ್ದಾರೆ! ಇದೇ ಹೊತ್ತಿನಲ್ಲಿ ಸುಮ್ಮನಿದ್ದರೆ ಬೇಳೆ ಬೇಯೋದು ಹೇಗೆಂದು ಜೆಡಿ(ಎಸ್) ನಾಯಕರು ಹಳೆಯ ಜನತಾ ಪರಿವಾರದ ಒಂದುಗೂಡಿಸುವ 'ಮರಳಿ ಮನೆಗೆ ಕಾರ್ಯಕ್ರಮ'ವನ್ನು ಉದ್ಘಾಟಿಸಿ ಪರದೆಯ ಹಿಂದೆ ನಿಂತು ನೋಡುತ್ತಿದ್ದಾರೆ. ಅವರ ಪಟ್ಟಿಯಲ್ಲಿ ತಮ್ಮ ಹೆಸರು ಕಾಣದೇ ಸಿದ್ದರಾಮಯ್ಯನವರ ನೆಲ ಮುಗಿಲ ನೋಟ ಇನ್ನಷ್ಟೂ ವೇಗ ಪಡೆದುಕೊಂಡಿದೆ. ಇದಕ್ಕಿಂತ ಹೆಚ್ಚಿನದ್ದೇನನ್ನೂ ಮಾಡಬಾರದೆಂಬ ಹೈಕಮಾಂಡ್‌ನ ಆಜ್ಞೆಯನ್ನು ಕಾಂಗ್ರೆಸ್ ನಾಯಕರು ಶಿರಸಾ ವಹಿಸಿ ಪಾಲಿಸುತ್ತಿದ್ದಾರೆ!

......ಕೇಕೆ ಹಾಕುತ್ತಿರುವ ಅಪಾಯಗಳು

ಪುಟ 3ರಿಂದ

ಕಾಲ ಕಳೆಯುತ್ತಿರುವುದು ಪ್ರಜಾಪ್ರಭುತ್ವೀಯ ಸಂಸ್ಥೆಯೊಂದನ್ನು ಬಲಿಕೊಡುತ್ತಿರುವುದರ ಸೂಚನೆಯಾಗಿದೆ. ಬಿಜೆಪಿ ಆಡಳಿತವೆಂದರೆ ಪ್ರಜಾಪ್ರಭುತ್ವದ ನಾಶವೆಂದೇ ಆಗಿದೆ. ಇಂತಹವರ ನೇತೃತ್ವದಲ್ಲಿ 60ರ ಸಂಭ್ರಮಾಚರಣೆ ಮಾಡಿದ್ದು ಕಗ್ಗೊಲೆಯ ಕೇಕೆಯಂತೇ ಕೇಳಿಸುತ್ತಿದೆ, ಕಾಣುತ್ತಿದೆ.

ಶಾಸಕಾಂಗವೂ ಒಳಗೊಂಡು ಪ್ರಜಾಪ್ರಭುತ್ವಕ್ಕೆ ಬೆದರಿಕೆ ಇರುವುದು ಆಳುವ ವರ್ಗಗಳಿಂದ ಹೊರತು ದುಡಿಯುವ ವರ್ಗಗಳಿಂದ ಅಲ್ಲ ಎಂಬ ಸತ್ಯವನ್ನು ಪುನಃ ನೆನಪಿಸಿಕೊಳ್ಳಬೇಕಿದೆ.

ಇಂತಹ ನಿರ್ಣಾಯಕ ಕಾಲ ಘಟ್ಟದಲ್ಲಿ ಜನತೆ ಹೋರಾಟದಿಂದ ರೂಪುಗೊಂಡ, ಇನ್ನೂ ಸಾಕಾರಗೊಳ್ಳಬೇಕಾದ ಹೋರಾಟದ ಈ ಒಂದು ವೇದಿಕೆಯನ್ನು ರಕ್ಷಿಸುವುದು, ಜನಪರವಾಗಿ ಬದಲಿಸಿ ಬಲಗೊಳಿಸುವುದು, ಎಲ್ಲಾ ಪ್ರಜಾಪ್ರಭುತ್ವವಾದಿ ಶಕ್ತಿಗಳ ಕರ್ತವ್ಯವಾಗಿದೆ. ಅದಕ್ಕಾಗಿ ಜನವಿರೋಧಿ, ಸರ್ವಾಧಿಕಾರೀ, ಫ್ಯಾಶಿಸ್ಟ್ ಶಕ್ತಿಗಳನ್ನು ಸೋಲಿಸಬೇಕಿದೆ. ದುಡಿಯುವ ವರ್ಗಗಳ, ನೈಜ ಪ್ರಜಾಪ್ರಭುತ್ವವಾದಿ ಶಕ್ತಿಗಳ ಪ್ರತಿನಿಧಿಗಳು ಹೆಚ್ಚೆಚ್ಚು ಆರಿಸಿ ಬರುವಂತೆ ನೋಡಬೇಕಿದೆ.

ರಾಷ್ಟ್ರಾಧ್ಯಕ್ಷರ ಚುನಾವಣೆ: ಸಿಪಿಐ(ಎಂ) ನಿಲುವು

ಜೂನ್ 21, 2012 ರಂದು ನವದೆಹಲಿಯಲ್ಲಿ ಸಭೆ ಸೇರಿದ್ದ ಸಿಪಿಐ(ಎಂ) ಪಕ್ಷದ ಪಾಲಿಟ್ ಬ್ಯುರೋ ಮುಂಬರುವ ರಾಷ್ಟ್ರಾಧ್ಯಕ್ಷರ ಚುನಾವಣಾ ವಿಷಯದ ಕುರಿತು ಚರ್ಚಿಸಿತು.

ಶ್ರೀ ಪ್ರಣಬ್ ಮುಖರ್ಜಿಯವರ ಅಭ್ಯರ್ಥಿತನವನ್ನು ಬೆಂಬಲಿಸಲು ಸಿಪಿಐ(ಎಂ) ನಿರ್ಧರಿಸಿತು. ಪ್ರಣಬ್ ಮುಖರ್ಜಿ ಪ್ರಸ್ತುತ ಸನ್ನಿವೇಶದಲ್ಲಿ ಅತಿ ಹೆಚ್ಚು ಸ್ವೀಕಾರಾರ್ಹತೆ ಹೊಂದಿರುವ ಅಭ್ಯರ್ಥಿಯಾಗಿದ್ದಾರೆ ಎಂದು ಸಿಪಿಐ(ಎಂ) ಹೇಳಿಕೆ ತಿಳಿಸಿದೆ.

ಸಿಪಿಐ(ಎಂ) ಪಕ್ಷವು ಯುಪಿಎ ಸರ್ಕಾರವನ್ನು ವಿರೋಧಿಸುವುದನ್ನು ಮುಂದುವರಿಸುತ್ತದೆ ಮತ್ತು ಜನರ ಹಿತಾಸಕ್ತಿಗಳಿಗೆ ವಿರುದ್ಧವಾದ ಉದಾರರೀಕರಣದ ಆರ್ಥಿಕ ನೀತಿಗಳ ವಿರುದ್ಧ ತನ್ನ ಹೋರಾಟವನ್ನು ದೃಢವಾಗಿ ಮುಂದುವರಿಸುವ ಪಣ ತೊಡುತ್ತದೆ ಎಂದೂ ಪಕ್ಷದ ಹೇಳಿಕೆ ಸ್ಪಷ್ಟ ಪಡಿಸಿದೆ.

ಜನಶಕ್ತಿ
ಕನ್ನಡ ವಾರಪತ್ರಿಕೆ

ಅನಿರ್ದಿಷ್ಟಾವಧಿ 'ಭೂಮಿ' ಹೋರಾಟದ ಫಲಶ್ರುತಿ ಮುಖ್ಯಮಂತ್ರಿಗಳೊಂದಿಗೆ ಮಾತುಕತೆ

'ಭೂಮಿ' ಪ್ರಶ್ನೆಯ ಮೇಲೆ ರಾಜ್ಯದಲ್ಲಿ ಇತ್ತೀಚೆಗೆ ನಡೆದ ಬೃಹತ್ ಆಂದೋಲನ ರಾಜ್ಯದ ಜನರ ಗಮನ ಸೆಳೆದಿದೆ. ಈ ಚಳುವಳಿಯ ಫಲಿತಾಂಶವಾಗಿ ಜೂನ್ 21 ರಂದು ರಾಜ್ಯದ ಮುಖ್ಯಮಂತ್ರಿಗಳು ಮತ್ತು ಸಂಬಂಧಿಸಿದ ಸಚಿವರುಗಳು ಹಾಗೂ ಸರ್ಕಾರದ ಉನ್ನತಧಿಕಾರಿಗಳು – ರೈತ ಕೃಷಿಕೂಲಿಕಾರ ಸಂಘಟನೆಗಳ ಮುಖಂಡರುಗಳು ಪಾಲ್ಗೊಂಡ ಚರ್ಚೆ ನಡೆದಿದೆ. ಚಳುವಳಿ ಎತ್ತಿರುವ ಹಲವು ಪ್ರಶ್ನೆಗಳು ಮತ್ತು ಬೇಡಿಕೆಗಳ ಈಡೇರಿಕೆ ಸಂಬಂಧ ಮುಖ್ಯಮಂತ್ರಿಗಳು ತತ್‌ಕ್ಷಣವೇ ಹಲವು ಸೂಚನೆಗಳನ್ನು ನೀಡಿರುವುದು ಈ ಸುಧೀರ್ಘ ಹೋರಾಟಕ್ಕೆ ಸಂದ ಒಂದು ಹಂತದ ಜಯ ಎಂದೇ ಪರಿಗಣಿಸಬೇಕಾಗುತ್ತದೆ. ಈ ಮಾತುಕತೆಯ ವಿವರ ಇಲ್ಲಿದೆ. ಭರವಸೆಗಳ, ಸೂಚನೆಗಳ ಜಾರಿಗಾಗಿ ಹೋರಾಟ ಮುಂದಕ್ಕೊಯ್ಯುವ ಪ್ರಶ್ನೆ ಇದ್ದೇ ಇದೆ.

ಬಗರ್ ಹುಕುಂ ಸಾಗುವಳಿ ಸಕ್ರಮಕ್ಕಾಗಿ ಒತ್ತಾಯಿಸಿ, ವಸತಿಹೀನ ಬಡವರಿಗೆ ಉಚಿತ ಮನೆ ನಿವೇಶನ ನೀಡಿಕೆಗಾಗಿ ಆಗ್ರಹಿಸಿ, ಅರಣ್ಯ ಹಕ್ಕು ಕಾಯ್ದೆಯ ಜನಪರ ಜಾರಿಗಾಗಿ ಆಗ್ರಹಿಸಿ, ಭೂ ಸುಧಾರಣಾ ಕಾಯ್ದೆಗೆ ರೈತ ವಿರೋಧಿ ತಿದ್ದುಪಡಿ ವಿರೋಧಿಸಿ ಕರ್ನಾಟಕ ಪ್ರಾಂತ ರೈತ ಸಂಘ, ಕರ್ನಾಟಕ ಪ್ರಾಂತ ಕೃಷಿಕೂಲಿಕಾರರ ಸಂಘ ಮತ್ತು ಬಗರ್ ಹುಕುಂ ಸಾಗುವಳಿದಾರರ ಹೋರಾಟ ಸಮಿತಿ ಮುಂತಾದ ಸಂಘಟನೆಗಳ ನೇತೃತ್ವದಲ್ಲಿ ಮೇ 21, 2012 ರಂದು ಬೆಂಗಳೂರು ಮಹಾನಗರದಲ್ಲಿ ಸಹಸ್ರಾರು ಜನರ ಬೃಹತ್ ರ್‍ಯಾಲಿ ಮತ್ತು ಅನಿರ್ದಿಷ್ಟಾವಧಿ ಧರಣ ಹೋರಾಟ ನಡೆದದ್ದರ ನೆನಪು ಇನ್ನೂ ಹಸಿರಾಗಿದೆ.

ಅಂದು ರಾಜ್ಯ ಸರ್ಕಾರದ ಪರವಾಗಿ ಆಗಮಿಸಿದ ಸಚಿವರುಗಳು ಚುನಾವಣಾ ನೀತಿ ಸಂಹಿತೆಯ ಕಾರಣದಿಂದ ಸರ್ಕಾರ ಈಗ ಯಾವುದೇ ನಿರ್ಧಾರ ಕೈಗೊಳ್ಳುವಂತಿಲ್ಲ. ಜೂನ್ 15, 2012 ರಂದು ಈ ಕುರಿತು ಮಾತುಕತೆ ನಡೆಸೋಣ. ಸರ್ಕಾರ ಬೇಡಿಕೆಗಳ ಕುರಿತು ಗಂಭೀರವಾಗಿ ಪರಿಗಣಿಸುತ್ತದೆ ಎಂದು ಭರವಸೆ ನೀಡಿದ್ದರು.

ವಿವರವಾದ ಮಾತುಕತೆ

ಈ ಹಿನ್ನೆಲೆಯಲ್ಲಿ ಹೋರಾಟದ ನೇತೃತ್ವ ವಹಿಸಿದ್ದ ಸಂಘಟನೆಗಳ ಮುಖಂಡರು ಮತ್ತು ಮುಖ್ಯಮಂತ್ರಿಗಳು ಹಾಗೂ ಸಂಬಂಧಿಸಿದ ಸಚಿವರುಗಳು ಮತ್ತು ಅಧಿಕಾರಿಗಳ ತಂಡ ಭಾಗವಹಿದ್ದ ಮಾತುಕತೆ– ಸುಧೀರ್ಘವಾದ ಚರ್ಚೆ ಇದೇ ಜೂನ್ 21, 2012 ರಂದು ಮುಖ್ಯಮಂತ್ರಿಗಳ ಗೃಹ ಕಛೇರಿ ಕೃಷ್ಣಾದಲ್ಲಿ ನಡೆಯಿತು.

ಮುಖ್ಯಮಂತ್ರಿಗಳು ಮತ್ತು ಸರ್ಕಾರದ ಪರವಾಗಿ ಚರ್ಚೆಯಲ್ಲಿ ಪಾಲ್ಗೊಂಡಿದ್ದವರು ಈ ಮಾತುಕತೆಗಾಗಿ ಮಾಡಿಕೊಂಡಿದ್ದ ಗಂಭೀರವಾದ ಸಿದ್ಧತೆ ಮತ್ತು ಚರ್ಚೆಯ ಫಲಿತಾಂಶವಾಗಿ ಮುಖ್ಯಮಂತ್ರಿಗಳು ನೀಡಿರುವ ಹಲವು ನಿರ್ದೇಶನಗಳು ಇವುಗಳನ್ನು ಆಧರಿಸಿ ಹೇಳುವುದಾದರೆ ಮೇ 21, 2012ರ ಅನಿರ್ದಿಷ್ಟಾವಧಿ ಧರಣ ಹೋರಾಟವು ಈ ಹಂತದಲ್ಲಿ ಹಲವು ಸಾಧನೆಗಳನ್ನೇ ಮಾಡಿದೆ ಎಂದರೆ ತಪ್ಪಾಗಲಾರದು.

ಮನೆ ನಿವೇಶನದ ಪ್ರಶ್ನೆ

ನಿವೇಶನ ರಹಿತರು ಪ್ರಾಂತ ರೈತ ಸಂಘ ಮತ್ತು ಪ್ರಾಂತ ಕೃಷಿ ಕೂಲಿಕಾರರ ಸಂಘಗಳ ನೇತೃತ್ವದಲ್ಲಿ ನಿವೇಶನ ರಹಿತರಿಗೆ ನಿವೇಶನಕ್ಕಾಗಿ ನಿರಂತರವಾಗಿ ನಡೆಸುತ್ತಿರುವ ಹೋರಾಟ ರಾಜ್ಯದಲ್ಲಿ ಈಗಾಗಲೇ ಜನಜನಿತವಾಗಿದೆ. ಇಂತಹ ಹೋರಾಟದ ಫಲವಾಗಿ



ಕರ್ನಾಟಕವನ್ನು ಗುಡಿಸಲು ರಹಿತ ರಾಜ್ಯವನ್ನಾಗಿ ಮಾಡುತ್ತೇನೆಂಬ ಗುರಿಯನ್ನು ಘೋಷಿಸಬೇಕಾಗಿ ಬಂದಿದೆ. ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ 4–5 ಸಾವಿರ ಉಚಿತ ನಿವೇಶನ ಹಂಚುವ ಯೋಜನೆ ಈಗ ಚಾಲ್ತಿಗೆ ಬಂದಿದೆ. ಆದರೆ ಈ ವಿಷಯದಲ್ಲಿ ಕೆಲವು ತೊಂದರೆಗಳಿವೆ.

ಈ ಉದ್ದೇಶಕ್ಕಾಗಿ ಸರ್ಕಾರ ಭೂಮಿ ಖರೀದಿಸಬೇಕಾಗಿ ಬಂದಲ್ಲಿ ಅದಕ್ಕೆ ಗ್ರಾಮಾಂತರ ಪ್ರದೇಶದಲ್ಲಿ ಎಕರೆಗೆ 3 ಲಕ್ಷ, ಹಾಗೂ ನಗರ ಪ್ರದೇಶಗಳಲ್ಲಿ ಎಕರೆಗೆ 9 ಲಕ್ಷ ಪರಿಹಾರ ಅಥವಾ ಭೂಮಿಗೆ ಬೆಲೆಯ ಮಿತಿಯನ್ನು ಸರ್ಕಾರ ನಿಗದಿ ಮಾಡಿದ್ದು ಆ ಮಿತಿ ಹಲವು ವರ್ಷಗಳಿಂದ ಹಾಗೇ ಇತ್ತು. ಈ ಬೆಲೆಯಲ್ಲಿ ಭೂಮಿ ಖರೀದಿಗೆ ಸಿಗದೇ ಬಡವರ ಮನೆ ನಿವೇಶನದ ಪ್ರಶ್ನೆ ಎಷ್ಟೋ ಕಡೆ ಕನಸಿನ ಗಂಟಾಗಿತ್ತು. ಈ ಕುರಿತು ಮುಖಂಡರ ನಿಯೋಗವು ಪ್ರಾಯೋಗಿಕ ಸಮಸ್ಯೆಯನ್ನು ಸರ್ಕಾರದ ಗಮನಕ್ಕೆ ತಂದಿತು.



ಹೆಚ್ಚು ಬೆಲೆ ಕೊಡಲು ಅನುಮತಿಗಾಗಿ ಮನವಿಯು ಜಿಲ್ಲಾಧಿಕಾರಿಗಳಿಂದ ಬಂದ ಸಂದರ್ಭದಲ್ಲಿ ಹೆಚ್ಚು ಬೆಲೆ ನೀಡಿ ಭೂಮಿ ಖರೀದಿ ಮಾಡಲು ಅನುಮತಿ ನೀಡಿದ್ದೇವೆ, ಮುಂದೆಯೂ ನೀಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದರು. ಶಿರಸಿಯಲ್ಲಿ ಎಕರೆ 30 ಲಕ್ಷ ರೂ ಬೆಲೆ ನೀಡಿಕೆಗೆ ಅನುಮತಿ ನೀಡಿರುವುದಾಗಿ ಹೇಳಿದರು.

ಜಿಲ್ಲಾಧಿಕಾರಿಗಳು ತಾವಾಗಿ ಸೂಚಿಸುವುದನ್ನು ಕಾಯುವ ಬದಲಿಗೆ ಸರ್ಕಾರದ ಕಡೆಯಿಂದ– ಅಗತ್ಯವಿದ್ದಲ್ಲಿ ಹೆಚ್ಚುವರಿ ಬೆಲೆ ನೀಡಿ ಖರೀದಿಸಲು ಸರ್ಕಾರದಲ್ಲಿ ಅನುಮತಿ ಕೋರಬಹುದು ಎಂಬ ಲಿಖಿತ ಆದೇಶ ಹೋದಲ್ಲಿ ಈ ನಿಟ್ಟಿನಲ್ಲಿ ಹೆಚ್ಚು ಪ್ರಯೋಜನ ಎಂದು ಸಂಘಟನೆಗಳ ಮುಖಂಡರು ಪ್ರತಿಪಾದಿಸಿದಾಗ ಮುಖ್ಯಮಂತ್ರಿಗಳು ಈ ಸೂಚನೆಯನ್ನು ಒಪ್ಪಿದ್ದಾರೆ. ಇದಲ್ಲದೇ ಹೆಚ್ಚುವರಿ ಬೆಲೆ ನೀಡಿಕೆಗೆ ಸೂಚನೆಗಳು ಈಗ ಎಲ್ಲೆಲ್ಲಿಂದ ಬಂದಿವೆಯೋ ಅದೆಲ್ಲದರ ವಿವರಗಳನ್ನು ತರಿಸಿಕೊಂಡು ಆ ಬಗ್ಗೆ ಕ್ರಮವಹಿಸಲು ಅಧಿಕಾರಿಗಳಿಗೆ ಸೂಚಿಸಿದ್ದಾರೆ. ಮತ್ತು ನಿವೇಶನ ಹೋರಾಟದ ಮೂಲಕ ಎಲ್ಲೆಲ್ಲಿ ನಿವೇಶನಕ್ಕಾಗಿ ಹೊಸ ಅರ್ಜಿಗಳನ್ನು ಸಲ್ಲಿಸಲಾಗಿದೆಯೋ ಅಲ್ಲಿ ಕೂಡ ಅವುಗಳನ್ನು ಪರಿಗಣಿಸುವ ಸಲುವಾಗಿ ಈ ಕುರಿತು ತಹಸೀಲ್ದಾರರಿಂದ ವರದಿ ತರಿಸಿಕೊಳ್ಳಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿ ಆ ಬಗೆಗೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದಾರೆ. ಮತ್ತು ಸರ್ಕಾರಿ ಭೂಮಿಯಲ್ಲಿ ಮನೆ ಕಟ್ಟಿಕೊಂಡಿರುವ ಬಡವರಿಗೆ ಹಕ್ಕು ಪತ್ರ ನೀಡಿಕೆ ಸಂಬಂಧ ಚರ್ಚೆ ನಡೆದು ಜನವರಿ 2012 ರ ಹೊತ್ತಿಗೆ ಸರ್ಕಾರಿ ಜಾಗದ ಸ್ವಾಧೀನ ಹೊಂದಿದ್ದ ಬಡವರಿಗೆ ಹಕ್ಕು ಪತ್ರ ನೀಡಲೂ ಕ್ರಮ ವಹಿಸಲಾಗುವುದು ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ದೇವದಾಸಿ ಮಹಿಳೆಯರ ಬೇಡಿಕೆ

ದೇವದಾಸಿ ಮಹಿಳೆಯರ ಮಾಸಿಕ ಪಿಂಚಣಿಯನ್ನು 400 ರೂಪಾಯಿಂದ 500 ರೂಪಾಯಿಗೆ ಹೆಚ್ಚಳಮಾಡುವುದು, ಮನೆ ಕಟ್ಟಡಕ್ಕಾಗಿ ನೀಡುವ 40,000 ರೂಪಾಯಿ ಹಣವು ತಾರತಮ್ಯವಾಗಿದ್ದು ಅದನ್ನು 1 ಲಕ್ಷ ರೂಪಾಯಿಗೆ ಹೆಚ್ಚಿಸಲು ಮತ್ತು ಇದಕ್ಕಾಗಿ ಹಣವನ್ನು ಸಮಾಜ ಕಲ್ಯಾಣ ಇಲಾಖೆಯ ಮೂಲಕ ವಿಶೇಷ ಘಟಕ ಯೋಜನೆಯ ಕ್ರೋಢೀಕೃತ ಹಣದಿಂದ ನೀಡಲು ಮುಖ್ಯಮಂತ್ರಿಗಳು ಈ ಸಂಬಂಧದ ಚರ್ಚೆಗೆ ಸ್ಪಂದಿಸಿ ಸೂಚಿಸಿದರು.

ಬಗರ್ ಹುಕುಂ ಸಾಗುವಳಿ ಭೂಮಿ ಪ್ರಶ್ನೆ ಭೂ ಮಂಜೂರಾತಿ ಸಮಿತಿಗಳ ಕಾಲಾವಧಿ ವಿಸ್ತರಣೆ

ಈ ಸಂಬಂಧ ರಾಜ್ಯದಲ್ಲಿ ನಾಲ್ಕೂಕಾಲು ಲಕ್ಷ ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇದ್ದು ಈ ಪ್ರಶ್ನೆಯನ್ನು ನಿಯೋಗ ಚರ್ಚೆಯಲ್ಲಿ ಎತ್ತಿತು. ಭೂ ಮಂಜೂರಾತಿ ಸಮಿತಿಗಳು ಈ ಅರ್ಜಿಗಳನ್ನು ಶೀಘ್ರ ಇತ್ಯರ್ಥ ಪಡಿಸಲು ಹಲವು ಕಾನೂನು ತೊಡಕುಗಳಿದ್ದವು. ಆದರೆ ಈ ಸಮಿತಿಗಳ ಕಾಲಾವಧಿ ಮುಗಿದು

ಪುಟ 6ಕ್ಕೆ

‘ಭೂಮಿ’ ಹೋರಾಟದ ಫಲಶ್ರುತಿ...

ಪುಟ 5 ರಿಂದ

ತ್ತೊಂದರೆಯಾಗಿತ್ತು. ಸರ್ಕಾರ ಈಗ ಈ ಭೂ ಮಂಜೂರಾತಿ ಸಮಿತಿಯ ಕಾಲಾವಧಿಯನ್ನು ಫೆಬ್ರವರಿ 26, 2014 ರವರೆಗೆ ವಿಸ್ತರಿಸಿದೆ. ಈ ಸಮಿತಿ ಈಗ ಅರ್ಜಿಗಳನ್ನು ಇತ್ಯರ್ಥ ಪಡಿಸಲು ಇನ್ನಷ್ಟು ಕಾಲಾವಕಾಶ ಸಿಕ್ಕಿದ್ದು ರೈತ –ಕೃಷಿ ಕೂಲಿಕಾರ, ಚಳುವಳಿಗಳು ಈ ಅಂಶವನ್ನು ಗಮನಿಸಿ ಸೂಕ್ತ ಕ್ರಮ ವಹಿಸಲು ಅವಕಾಶವಾಗಿದೆ.. ಇದಲ್ಲದೇ ಮುಖಂಡರ ನಿಯೋಗವು ಈ ಸಮಿತಿಗಳು ಈಗಾಗಲೇ ತಿರಸ್ಕರಿಸಿರುವ ಅರ್ಜಿಗಳನ್ನು ಪುನರ್ ಪರಿಶೀಲನೆ ಮಾಡಬೇಕೆಂಬ ಬೇಡಿಕೆಯನ್ನು ಇಟ್ಟಿತು ಮತ್ತು ಈ ಸಂಬಂಧ ಹೊಸ ಅರ್ಜಿಗಳನ್ನು ಸಹ ಪರಿಗಣಿಸುವಂತೆ ಸೂಚಿಸಲು ಕೋರಿತು. ಮುಖ್ಯಮಂತ್ರಿಗಳು ಈ ವಿಷಯವಾಗಿ ಪರಿಶೀಲಿಸುವುದಾಗಿ ಪ್ರತಿಕ್ರಿಯಿಸಿದ್ದಾರೆ.

ನಗರ ಮತ್ತು ಪಟ್ಟಣಗಳ ಸುತ್ತಲ ಮಿತಿ ಪ್ರಶ್ನೆ

ಬೆಂಗಳೂರು ಮಹಾನಗರದ ಸುತ್ತಲ 18 ಕಿ.ಮಿ. ವ್ಯಾಪ್ತಿಯಲ್ಲಿನ ಸರ್ಕಾರಿ ಭೂಮಿ, ಅದೇ ರೀತಿ ವಿವಿಧ ಪಟ್ಟಣಗಳ, ಸಿಎಂಸಿಗಳ ಸುತ್ತಲ ಸರ್ಕಾರಿ ಭೂಮಿಯಲ್ಲಿನ ಬಡವರ ಸಾಗುವಳಿ, ವಾಸ ಇತ್ಯಾದಿಗಳನ್ನು ಸಕ್ರಮ ಮಾಡಲಾಗದು ಎಂಬ ಸರ್ಕಾರದ ಧೋರಣೆಯನ್ನು ಬದಲಿಸಬೇಕೆಂದು ಮುಖಂಡರ ನಿಯೋಗ ವಾದ ಮಂಡಿಸಿತು. ಈ ಬಗ್ಗೆ ಸಾಕಷ್ಟು ವಾದ–ಪ್ರತಿವಾದಗಳು ನಡೆದವು. ಅಭಿವೃದ್ಧಿ ಚಟುವಟಿಕೆಗಳಿಗೆ, ನಾಗರೀಕ ಸೌಲಭ್ಯಗಳನ್ನು ಒದಗಿಸಲು ಈ ಭೂಮಿ ಸರ್ಕಾರಕ್ಕೆ ಬೇಕಾಗುತ್ತದೆ ಎಂದು ಮುಖ್ಯಮಂತ್ರಿಗಳು ಪ್ರತಿಪಾದಿಸಿದರು. ಆದರೆ ಈ ಹಿಂದೆ ರಾಮಸ್ವಾಮಿ ಆಯೋಗದ ವರದಿ ಆಧಾರದಲ್ಲಿ ಮರುವಶ ಮಾಡಕೊಳ್ಳಲಾದ ಸರ್ಕಾರಿ ಭೂಮಿಯನ್ನು ರಾಜ್ಯ ಬಿಜೆಪಿ ಸರ್ಕಾರವೇ ಹರಾಜು ಹಾಕಿ ಶ್ರೀಮಂತರ ಪಾಲು ಮಾಡಿದ್ದನ್ನು ಮತ್ತು ಸಾರ್ವಜನಿಕ ಉದ್ದೇಶಕ್ಕೆ ಆ ಭೂಮಿಯನ್ನು ಕಾದಿರಿಸಲಿಲ್ಲ ಎಂಬುದನ್ನು ಮುಖ್ಯಮಂತ್ರಿಗಳಿಗೆ ನೆನಪಿಸಲಾಯಿತು. ಅಲ್ಲದೇ ಈ ಪರೀಧಿಯಲ್ಲಿ ಸರ್ಕಾರಿ ಜಮೀನಿನಲ್ಲಿ ಬಡವರ ಸಾಗುವಳಿ ಹಾಗೂ ವಾಸ ಇವನ್ನು ಸಕ್ರಮಗೊಳಿಸಿದರೂ ನಾಗರೀಕ ಸೌಲಭ್ಯಕ್ಕೆ ಭೂಮಿ ಹೊಂದಿಸಿಕೊಳ್ಳುವುದು ಸಾಧ್ಯ ಎಂದು ನಿಯೋಗ ದೃಢವಾಗಿ ಪ್ರತಿಪಾದಿಸಿತು. ಈ ಹಂತದಲ್ಲಿ ಆಡಳಿತ ಪಕ್ಷದ ಶಾಸಕರಾದ ಯಲಹಂಕ ಕ್ಷೇತ್ರದ ವಿಶ್ವನಾಥ್‌ರವರು ಚಳುವಳಿಕಾರರ ಬೇಡಿಕೆಗಳ ಪರವಾಗಿ ನಿಂತು ಮುಖ್ಯಮಂತ್ರಿಗಳ ಮನವೊಲಿಸಲು ಪ್ರಯತ್ನಿಸಿದ್ದು ವಿಶೇಷವಾಗಿತ್ತು. ಈ ಸಂಬಂಧವಾಗಿ ತೀರ್ಮಾನಿಸಲು ಸರ್ಕಾರವು ಉನ್ನಾಧಿಕಾರ ಸಮಿತಿ (ಹೈ ಪವರ್ ಕಮಿಟಿ)ಯೊಂದನ್ನು ರಚಿಸಿ ವರದಿ ಪಡೆಯುತ್ತದೆ ಎಂದು ಮುಖ್ಯಮಂತ್ರಿಗಳು ಭರವಸೆ ನೀಡಿದರು.

ಅರಣ್ಯ ಹಕ್ಕು ಕಾಯ್ದೆಯ ಸಮರ್ಪಕ ಜಾರಿ ಪ್ರಶ್ನೆ

ಅರಣ್ಯ ಹಕ್ಕು ಕಾಯ್ದೆಯ ಜಾರಿ ಸಂಬಂಧ ರಾಜ್ಯದ ಮೂವತ್ತು ಜಿಲ್ಲೆಗಳ ಪೈಕಿ ಕೇವಲ 8 ಜಿಲ್ಲೆಗಳಲ್ಲಿ ಮಾತ್ರ ಅರಣ್ಯ ಹಕ್ಕು ಸಮಿತಿ ರಚಿಸಿರುವ ಪರಿಸ್ಥಿತಿಯ ಕುರಿತು ನಿಯೋಗವು ಮುಖ್ಯಮಂತ್ರಿಗಳ ಗಮನಕ್ಕೆ ತಂದಿತು. ಸಮಿತಿ ರಚಿಸಿರುವ ಈ ಜಿಲ್ಲೆಗಳಲ್ಲೂ ಸಹ ಸಮರ್ಪಕವಾಗಿ ಅರ್ಜಿ ಸ್ವೀಕಾರ ಮತ್ತು ಪರಿಶೀಲನೆ ನಡೆದಿಲ್ಲದಿರುವುದನ್ನು ಗಮನಕ್ಕೆ ತರಲಾಯಿತು. ಅರ್ಜಿ ಸಲ್ಲಿಸಿದ ಬುಡಕಟ್ಟು ಜನರಿಗೂ ಸಹ ಅರಣ್ಯ ಭೂಮಿ ಪಟ್ಟ ಸಿಕ್ಕಿಲ್ಲದಿರುವುದನ್ನು ಸಹ ನಿಯೋಗ ಗಮನಕ್ಕೆ ತಂದಿತು. ಇತರ ಪಾರಂಪರಿಕ ಅರಣ್ಯ ವಾಸಿಗಳ ಭೂಮಿ ಹಕ್ಕಿನ ಪ್ರಶ್ನೆಯಲ್ಲಿ ಕೇಂದ್ರ ಸರ್ಕಾರವು ಮೂರು ತಲೆಮಾರುಗಳ ಅಂದರೆ 75 ವರ್ಷ ದಾಖಲೆಯನ್ನು ಕೇಳುತ್ತಿದ್ದು ರಾಜ್ಯ ಬಿಜೆಪಿ ಸರ್ಕಾರ ಅದನ್ನು ಒಂದು ತಲೆಮಾರಿಗೆ ಅಂದರೆ 25 ವರ್ಷದ ದಾಖಲೆಗೆ ಇಳಿಸುವಂತೆ ತಿದ್ದುಪಡಿ ಮಾಡಲು ಕೇಂದ್ರ ಸರ್ಕಾರವನ್ನು ಕೋರಿತ್ತು. ಈ ಶಿಫಾರಸ್ಸು ಕೂಡ ಪಾರಂಪರಿಕ ಅರಣ್ಯವಾಸಿಗಳ ಅರಣ್ಯ ಭೂಮಿ ಹಕ್ಕಿಗೆ ಮಾರಕವಾಗಿದ್ದು, ಈ ಸಂಬಂಧ ಬುಡಕಟ್ಟು ಜನರ ಭೂಮಿ ಮಂಜೂರಿಗೆ ಇರುವ ಅಂತಿಮ ಗಡುವಿನ ದಿನಾಂಕವಾದ ಡಿಸೆಂಬರ್ 13, 2005 ಪರಿಗಣಿಸಲು ಕೇಂದ್ರ ಸರ್ಕಾರವು ತಿದ್ದುಪಡಿ ತರುವಂತೆ ರಾಜ್ಯ ಸರ್ಕಾರವು ಮನವಿ ಸಲ್ಲಿಸಿ ಒತ್ತಾಯಿಸಲು ಹಾಗೂ ಅಲ್ಲಿಯವರೆಗೆ ರಾಜ್ಯ ಸರ್ಕಾರದ ಅರಣ್ಯ ಇಲಾಖೆಯಿಂದ ಸಾಗುವಳಿದಾರರಿಗೆ ಕಿರುಕುಳ ತಪ್ಪಿಸಲು ಕ್ರಮವಹಿಸಬೇಕೆಂದು ನಿಯೋಗ ಮನವಿ ಮಾಡಿತು.



ಈ ಚರ್ಚೆ ಮತ್ತು ಮನವಿಗಳನ್ನು ಆಲಿಸಿದ ಮುಖ್ಯಮಂತ್ರಿಗಳು ಒಟ್ಟಾರೆ ಈ ಪ್ರಶ್ನೆಗಳ ಸಂಬಂಧ ಪರಿಶೀಲನೆ ನಡೆಸಲು ಸಮಾಜ ಕಲ್ಯಾಣ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಮತ್ತು ಬುಡಕಟ್ಟು ನಿರ್ದೇಶನಾಲಯದ ನಿರ್ದೇಶಕರಿಗೆ ಆದೇಶಿಸಿದರು. ಈ ವಿಷಯವಾಗಿ ಕಾಲದ ಗಡುವಿನ ಕುರಿತು ತಿದ್ದುಪಡಿಗೆ ಒತ್ತಾಯಿಸಿ ಕೇಂದ್ರಕ್ಕೆ ಪತ್ರ ಬರೆಯುವುದಾಗಿ ತಿಳಿಸಿದರು.

ಕುಂಬ್ರಿ ಜಮೀನು ಪ್ರಶ್ನೆ

ಅದೇ ರೀತಿಯಾಗಿ ಮುಖ್ಯಮಂತ್ರಿಗಳು ಉತ್ತರ ಕನ್ನಡ ಜಿಲ್ಲೆ ಜೋಯಿಡಾ ತಾಲ್ಲೂಕಿನ ಕುಂಬ್ರಿ ಜಮೀನು ಪ್ರಶ್ನೆಯನ್ನು ಕ್ಯಾಬಿನೆಟ್ ಮುಂದೆ ತರಲು ಅಧಿಕಾರಿಗಳಿಗೆ ಸೂಚಿಸಿದರು.

ಭೂ ಸ್ವಾಧೀನದ ಪ್ರಶ್ನೆ

ಬಳ್ಳಾರಿ ಜಿಲ್ಲೆಯ ಬ್ರಹ್ಮಿಣಿ ಮತ್ತು ಮಿತ್ತಲ್ ಕಂಪನಿಗಳಿಗಾಗಿ ರೈತರಿಂದ ಭೂಮಿಯನ್ನು ಸರ್ಕಾರದ ಸೂಚಿತ ಮಾರ್ಗದರ್ಶಿ ಬೆಲೆಗಿಂತಲೂ ಕಡಿಮೆ ಬೆಲೆ ನಿಗದಿಗೊಳಿಸಿ ವಶಪಡಿಸಿಕೊಂಡಿರುವ ಕೆಐಎಡಿಬಿ ಸಂಸ್ಥೆಯ ಅನ್ಯಾಯದ ಕುರಿತು ಮುಖ್ಯಮಂತ್ರಿಗಳ ಗಮನಕ್ಕೆ ತರಲಾಯಿತು. ಕಾನೂನಿನಲ್ಲಿ ಈ ರೀತಿಯ ಕ್ರಮಕ್ಕೆ ಅವಕಾಶ ಇದೆಯೇ ಎಂದು ಪ್ರಶ್ನಿಸಲಾಯಿತು.

ಈ ಸ್ವರೂಪದ ಭೂ ಸ್ವಾಧೀನ ನಡೆದಿರುವುದು ನಿಜವೇ ಎಂದು ಮುಖ್ಯಮಂತ್ರಿಗಳು ಸಂಬಂಧಿಸಿದ ಅಧಿಕಾರಿಗಳನ್ನು ಪ್ರಶ್ನಿಸಿದಾಗ ಅವರು ಈ ಪ್ರಶ್ನೆಗೆ ಉತ್ತರಿಸಲಾಗದೇ ತಡಬಡಾಯಿಸಿ ಕೊನೆಗೆ ಸರಾಸರಿ ಸ್ವರೂಪದಲ್ಲಿ ಭೂಮಿ ಬೆಲೆ ನಿಗದಿ ಮಾಡಲಾಗಿದೆ ಎಂದು ತಮ್ಮ ತಪ್ಪು ಕ್ರಮವನ್ನು ಸಮರ್ಥಿಸಿಕೊಳ್ಳಲು ಯತ್ನಿಸಿದರು. ಆದರೆ ಅಧಿಕಾರಿಗಳಿಂದ ಸಮರ್ಪಕ ಉತ್ತರ ಬರದಿದ್ದಾಗ ಈ ಸಂಬಂಧ ಎಲ್ಲ ಮಾಹಿತಿಗಳನ್ನು ಲಿಖಿತವಾಗಿ ತಮಗೆ ಸಲ್ಲಿಸುವಂತೆ ಆದೇಶಿಸಿದರು. ಮತ್ತು ಮುಂದಿನ ತೀರ್ಮಾನವನ್ನು ಮಾಹಿತಿ ಆಧರಿಸಿ ಕೈಗೊಳ್ಳುವುದಾಗಿ ನಿಯೋಗಕ್ಕೆ ಭರವಸೆ ನೀಡಿದರು.

ಭೂ ಸುಧಾರಣಾ ಕಾಯ್ದೆ ತಿದ್ದುಪಡಿ ಪ್ರಶ್ನೆ

ಭೂ ಸುಧಾರಣಾ ಕಾಯ್ದೆಗೆ ರಾಜ್ಯ ಸರ್ಕಾರವು ತರಲು ಹೊರಟಿರುವ ತಿದ್ದುಪಡಿಗಳ ಕುರಿತು ನಿಯೋಗವು ಮುಖ್ಯಮಂತ್ರಿಗಳಿಗೆ ತನ್ನ ಆತಂಕವನ್ನು ವ್ಯಕ್ತಪಡಿಸಿತು.

‘ಕೃಷಿ’ ಎಂಬುದರ ಅರ್ಥ–ವ್ಯಾಖ್ಯಾನವನ್ನು ತಿದ್ದಿ ಸಕ್ಕರೆ ಕಾರ್ಖಾನೆ, ಜವಳಿ ಉದ್ದಿಮೆ, ಕೃಷಿ ಉತ್ಪನ್ನಗಳ ಸಂಸ್ಕರಣೆ ಇತ್ಯಾದಿಯಾಗಿ ಕೃಷಿ ಉತ್ಪನ್ನಗಳನ್ನು ಬಳಸುವ ಉದ್ದಿಮೆಗಳ ಚಟುವಟಿಕೆಗಳನ್ನೂ ಕೃಷಿ ಚಟುವಟಿಕೆಯ ವ್ಯಾಪ್ತಿಗೆ ತಂದು, ಕಂಪನಿಗಳು ಕೃಷಿ ಭೂಮಿಯನ್ನು ಮುಕ್ತವಾಗಿ ಖರೀದಿಸಲು ಅವಕಾಶ ನೀಡುವಂತಹ ರೈತ ವಿರೋಧಿ ತಿದ್ದುಪಡಿ ಸೂಚನೆ ಹಾಗೂ ಕುಟುಂಬವೊಂದು ಹೊಂದಿರಬಹುದಾದ ಭೂಮಿಯ ಪ್ರಮಾಣವ ಗರಿಷ್ಠ ಮಿತಿಯನ್ನು ಏರಿಸಿ ಭೂ ಸುಧಾರಣಾ ಕಾಯ್ದೆಯ ಉದ್ದೇಶವನ್ನೆ ದುರ್ಬಲಗೊಳಿಸುವಂತಹ ರಾಜ್ಯ ಸರ್ಕಾರದ ಯತ್ನಕ್ಕೆ ನಿಯೋಗ ತನ್ನ ಅಸಮ್ಮತಿ ವ್ಯಕ್ತಪಡಿಸಿತು ಮಾತ್ರವಲ್ಲ, ಸರ್ಕಾರದ ಪ್ರಸ್ತುತ ಮುಂದುವರೆದದ್ದೇ ಆದರೆ ತೀವ್ರ ಪ್ರತಿರೋಧವನ್ನು ಎದುರಿಸಬೇಕಾಗುತ್ತದೆ ಹಾಗೂ ರೈತರ–ಜನರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ ಎಂದು ನಿಯೋಗ ಸರ್ಕಾರವನ್ನು ಎಚ್ಚರಿಸಿತು.

ರೈತ–ಕೂಲಿಕಾರರ ನಿಯೋಗದಲ್ಲಿ ಪ್ರಾಂತ ರೈತ ಸಂಘದ ಪ್ರಧಾನ ಕಾರ್ಯದರ್ಶಿ ಜಿ.ಸಿ. ಬಯ್ಯಾರೆಡ್ಡಿ, ಅಧ್ಯಕ್ಷರಾದ ಮಾರುತಿ ಮಾನ್ಪಡೆ, ಕೂಲಿಕಾರರ ಸಂಘದ ಅಧ್ಯಕ್ಷರಾದ ನಿತ್ಯಾನಂದ ಸ್ವಾಮಿ, ಉಪಾಧ್ಯಕ್ಷರಾದ ಜಿ.ಎನ್. ನಾಗರಾಜ್, ರೈತ ಸಂಘದ ಪದಾಧಿಕಾರಿಗಳಾದ ಯು. ಬಸವರಾಜ್, ಭೀಮಶಿ ಕಲಾದಗಿ, ಶಾಂತಾರಾಮ ನಾಯಕ್, ಎನ್. ವೆಂಕಟಾಚಲಯ್ಯ, ಯಾದವಶೆಟ್ಟಿ, ಕೃಷಿ ಕೂಲಿಕಾರರ ಸಂಘದ ಪುಟ್ಟಮಾದು ಒಳಗೊಂಡಿದ್ದರು.

ಸರ್ಕಾರದ ಪರವಾಗಿ ಮುಖ್ಯಮಂತ್ರಿಗಳಲ್ಲದೇ ಕಾನೂನು ಮತ್ತು ನಗರಾಭಿವೃದ್ಧಿ ಸಚಿವ ಸುರೇಶ್ ಕುಮಾರ್, ವಸತಿ ಸಚಿವ ವಿ.ಸೋಮಣ್ಣ, ಶಾಸಕ ವಿಶ್ವನಾಥ್ ಅವರಲ್ಲದೇ ಮುಖ್ಯಮಂತ್ರಿಗಳ ಪ್ರಿನ್ಸಿಪಲ್ ಸೆಕ್ರೆಟರಿ, ವಸತಿ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ, ರೆವಿನ್ಯೂ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ ಮುಂತಾದ 15 ಕ್ಕೂ ಹೆಚ್ಚು ಸರ್ಕಾರದ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು.

ಮಾತುಕತೆ ಮುಂದುವರಿಕೆ

ಭೂಮಿ ಸಂಬಂಧದ ಈ ವಿವಿಧ ಪ್ರಶ್ನೆಗಳ ಕುರಿತು ಇನ್ನಷ್ಟು ಚರ್ಚೆ ಅಗತ್ಯವಿರುವುದರಿಂದ ಮತ್ತೆ ಎರಡು ವಾರಗಳ ನಂತರ ಚರ್ಚೆಯನ್ನು ಮುಂದುವರೆಸೋಣ ಎಂದು ಮುಖ್ಯಮಂತ್ರಿಗಳು ಮನವಿ ಮಾಡಿದರು.

ಸರ್ಕಾರದ ಭರವಸೆಗಳು ಯಾವ ರೀತಿಯಲ್ಲಿ ಜಾರಿಗೆ ಬರುತ್ತವೆಂಬುದರ ಆಧಾರದಲ್ಲಿ ಮತ್ತು ಹಲವು ಪ್ರಶ್ನೆಗಳಲ್ಲಿ ಸರ್ಕಾರದ ಧೋರಣೆ ಪರಿಗಣಿಸಿ ಮುಂದಿನ ತನ್ನ ನಡೆಯನ್ನು ಸಂಘಟನೆಗಳು ತೀರ್ಮಾನಿಸಲಿವೆ. ಮತ್ತು ಮುಂದಿನ ಮಾತುಕತೆಯಲ್ಲಿ ಜನಪರ ವಿಚಾರಗಳನ್ನು ಮತ್ತೆ ಪರಿಣಾಮಕಾರಿಯಾಗಿ ಮಂಡಿಸಲು ತೀರ್ಮಾನಿಸಿವೆ.

ಧರ್ಮ ನಿರಾಪೇಕ್ಷತೆ?

ಧರ್ಮ ನಿರಾಪೇಕ್ಷತೆ ಬರದಿರಲು ಮೂಡಿ
ಬಾಳುವುದು ಅಸಾಧ್ಯ ನಾವೆಲ್ಲ ಕೂಡಿ
ಇದು ನೋಡಿ ಬರುವುದಕೆ ಬಿಡರಯ್ಯ ಇಲ್ಲಿ
ಕಾರಣವು ಅಧಿಪತ್ಯ ವಂಚಕರ ಕೈಲಿ

– ವಿಡಂಬಾರಿ

ಜನಗಳ ಸಂಕಟಗಳ ನಡುವೆ ದಾನಶೂರತೆಯ ಮೆರೆದಾಟ!

ಭಾರತ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಕಾಣಿಕೆ ನೀಡಿದರೆ, ಯುರೋವಲಯದ ಪುನಶ್ಚೇತನ ಒಂದು ಹೊಸ ಹಣಕಾಸು ಗುಳ್ಳೆಯನ್ನು ಸೃಷ್ಟಿಸುತ್ತದೆ. ಅದರ ವಿಸ್ತರಣೆ ಭಾರತಕ್ಕೆ ಹೆಚ್ಚಿನ ಹಣಕಾಸನ್ನು ಲಭ್ಯಗೊಳಿಸಿ ಪ್ರಯೋಜನಕಾರಿಯಾಗಬಹುದು ಎಂಬುದು ಪ್ರಧಾನ ಮಂತ್ರಿಗಳ ನಿರೀಕ್ಷೆ ಎಂಬುದಂತೂ ಸ್ಪಷ್ಟ. ಪ್ರಸಕ್ತ ಬಿಕ್ಕಟ್ಟು ಮತ್ತು ಅಭಿವೃದ್ಧಿ ಹೊಂದಿದ ದೇಶಗಳನ್ನು ಆವರಿಸಿಕೊಂಡಿರುವ ಹಿಂಜರಿತದಿಂದ ಏನೇನೂ ಪಾಠ ಕಲಿತಿರುವಂತೆ ಕಾಣುತ್ತಿಲ್ಲ. ಗುಳ್ಳೆಗಳು ಕೊನೆಗೆ ಒಡೆಯಲೇ ಬೇಕು ತಾನೇ? ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶಗಳನ್ನು ಅನುಸರಿಸುವ ಇಂತಹ ನವ-ಉದಾರವಾದಿ ಮಾನಸಿಕತೆಯನ್ನು ಕೈಬಿಟ್ಟು ನಮ್ಮ ದೇಶೀ ಬೇಡಿಕೆಗಳನ್ನು ಬಲಪಡಿಸಬಹುದಾದ ಮತ್ತು ದೇಶೀ ಆರ್ಥಿಕವನ್ನು ವಿಸ್ತರಿಸಬಹುದಾದ ಧೋರಣೆಗಳನ್ನು ಅನುಸರಿಸಿದರೆ ಮಾತ್ರ ಭಾರತೀಯ ಆರ್ಥಿಕ ಉತ್ತಮಗೊಳ್ಳಲು ಸಾಧ್ಯ.

ಜೂನ್ 21, 2012 ರ 'ಪೀಪಲ್ಸ್ ಡೆಮಾಕ್ರಸಿ' ಸಂಪಾದಕೀಯದಿಂದ

ಮೆಕ್ಸಿಕೋದ ಲೊಸ್ ಕಬೊಸ್‌ನಲ್ಲಿ ಜಿ-20 ಶೃಂಗಸಭೆಯಲ್ಲಿ ಪ್ರಧಾನ ಮಂತ್ರಿ ಮನಮೋಹನ ಸಿಂಗ್ ಜಾಗತಿಕ ದಾನಶೂರನಾಗಿ ಬಿಟ್ಟಿದ್ದಾರೆ. ಯುರೋವಲಯ ಪ್ರಸಕ್ತ ತೀವ್ರ ಆರ್ಥಿಕ ಬಿಕ್ಕಟ್ಟಿನಿಂದ ಹೊರಬರುವಲ್ಲಿ ನೆರವಾಗಲು ಅಂತರ್ರಾಷ್ಟ್ರೀಯ ಹಣಕಾಸು ನಿಧಿಗೆ 10 ಬಿಲಿಯ(ಒಂದು ಸಾವಿರ ಕೋಟಿ) ಡಾಲರುಗಳ ವಾಗ್ದಾನ ಮಾಡಿದ್ದಾರೆ. ಇದು ಒಂದು ಹೈದರಾಬಾದೀ ಗಾದೆಯನ್ನು ನೆನಪಿಸುತ್ತದೆ- 'ಬಾಹರ್ ಶೇರ್ವಾನಿ, ಅಂದರ್ ಪರೇಶಾನಿ'(ಅಂದರೆ ಹೊರನೋಟಕ್ಕೆ ರಾಜಗಾಂಭೀರ್ಯ, ಒಳಗಿನ ಗಂಭೀರ ಸಮಸ್ಯೆಗಳನ್ನು ಮರೆಮಾಚಲಿಕ್ಕಾಗಿಯಷ್ಟೇ). ಈಗಿನ ವಿನಿಮಯ ದರದಲ್ಲಿ ಇದು 56,000 ಕೋಟಿ ರೂ. ಆಗುತ್ತದೆ.


ಈ ಮಹಾ ಔದಾರ್ಯ ಪ್ರಕಟವಾಗಿರುವುದು ಭಾರತೀಯ ಜನತೆ ಎಲ್ಲ ಆವಶ್ಯಕ ಸರಕುಗಳ ಬೆಲೆಗಳ ನಿರಂತರ ಬೆಲೆಯೇರಿಕೆಗಳಿಂದ ಹೆಚ್ಚೆಚ್ಚು ಹೊರೆಗಳನ್ನು ಹೊರಬೇಕಾಗಿ ಬರುತ್ತಿರುವ ಸಮಯದಲ್ಲಿ. ಇದೂ ಸಾಲದೆಂಬಂತೆ, ತೈಲ ಕಂಪನಿಗಳ 'ಕಡಿಮೆ ವಸೂಲಾತಿ' ಏರುತ್ತಿದೆ ಎಂಬ ಹೆಸರಿನಲ್ಲಿ ಇತ್ತೀಚೆಗೆ ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸಲಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಏರಿಸಲು ಈ ನೆವವೊಡ್ಡಿ ಜನಗಳಿಗೆ ಎಂತಹ ಬೃಹತ್ ಮೋಸ ಎಸಗಲಾಗುತ್ತಿದೆ ಎಂಬುದನ್ನು ಈ ಅಂಕಣದಲ್ಲಿ ಹಿಂದೆ ನೋಡಿದ್ದೇವೆ. ಆರ್ಥಿಕವಾಗಿ ಮುಂದುವರೆದಿರುವ ಯುರೋಪಿಯನ್ ಒಕ್ಕೂಟದ ನೆರವಿಗೆ ಮುಂದಾಗುವ ಬದಲು, ಭಾರತ ಈ ಹಣವನ್ನು ಈಗಾಗಲೇ ನರಳುತ್ತಿರುವ ಜನತೆಯ ಮೇಲೆ ಇನ್ನಷ್ಟು ಹೊರೆ ಹಾಕುವುದನ್ನು ತಪ್ಪಿಸಲು ಬಳಸಬಹುದಾಗಿತ್ತು.

'ಪ್ರಬುದ್ಧ ನೆರವಿ'ನ ಹಿಂದೆ

ಆದರೆ ಭಾರತ ವಾಗ್ದಾನ ಮಾಡಿರುವ ಈ "10 ಬಿಲಿಯ ಡಾಲರುಗಳು ಪ್ರಬುದ್ಧ ನೆರವು-ಸಂಕಟದಲ್ಲಿರುವ ಪ್ರಮುಖ ವ್ಯಾಪಾರೀ ಜೊತೆಗಾರನಿಗೆ ಮಾಡುವ ನೆರವು" ಎಂದು ನಮಗೆ ತಿಳಿ ಹೇಳಲಾಗುತ್ತಿದೆ. ಜಗತ್ತಿನ ಜಿಡಿಪಿಯ 80 ಶೇಕಡಾವನ್ನು ಪ್ರತಿನಿಧಿಸುವ ಪ್ರಭುತ್ವಗಳ ಮುಖ್ಯಸ್ಥರ ಈ ಸಭೆಯಲ್ಲಿ ಪ್ರಧಾನ ಮಂತ್ರಿಗಳ ಭಾಷಣದಲ್ಲಿ ಭಾರತ ಒದಗಿಸುವ ಈ ನೆರವು ಯುರೋವಲಯದ ಪುನಶ್ಚೇತನಕ್ಕೆ ನೀಡುವ ಕಾಣಿಕೆ ಎಂಬ ತರ್ಕವಿತ್ತು. ಯುರೋವಲಯದಲ್ಲಿ ಆರ್ಥಿಕ ಬೆಳವಣಿಗೆ ಮತ್ತೆ ಶುರುವಾದರೆ, ಅದು ಒಂದು ಅಲೆಯಂತೆ ಭಾರತದ ಆರ್ಥಿಕದ ಹಡಗನ್ನೂ ಮೇಲಕ್ಕೆತ್ತಬಲ್ಲದು ಎಂಬ ಕಲ್ಪನೆ ಇದರ ಹಿಂದಿದೆ. "ಅಭಿವೃದ್ಧಿ ಹೊಂದುತ್ತಿರುವ ದೇಶಗಳ ಮೂಲರಚನೆಯಲ್ಲಿ ಹೂಡಿಕೆಯ ವಿಸ್ತರಣೆ, ಅವರಿಗೆ ಈ ಹೂಡಿಕೆಗೆ ದೀರ್ಘಕಾಲದ ಬಂಡವಾಳಕ್ಕೆ ಅವಕಾಶ ಸಿಕ್ಕರೆ ಮಾತ್ರ ಸಾಧ್ಯ. ಬಂಡವಾಳದ ಹರಿವುಗಳಿಗೆ ಅಡೆ-ತಡೆ ಬಂದಿರುವ ಸಮಯದಲ್ಲಿ ಇದು ಕಷ್ಟಕರ" ಎಂದು ಪ್ರಧಾನಮಂತ್ರಿಗಳು ಹೇಳಿದರು.

ಭಾರತ ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳಕ್ಕೆ ಕಾಣಿಕೆ ನೀಡಿದರೆ, ಯುರೋವಲಯದ ಪುನಶ್ಚೇತನ ಒಂದು ಹೊಸ ಹಣಕಾಸು ಗುಳ್ಳೆಯನ್ನು ಸೃಷ್ಟಿಸುತ್ತದೆ, ಅದರ ವಿಸ್ತರಣೆ ಭಾರತಕ್ಕೆ ಹೆಚ್ಚಿನ ಹಣಕಾಸನ್ನು ಲಭ್ಯಗೊಳಿಸಿ ಪ್ರಯೋಜನಕಾರಿಯಾಗಬಹುದು ಎಂಬುದು ಪ್ರಧಾನ ಮಂತ್ರಿಗಳ ನಿರೀಕ್ಷೆ ಎಂಬುದಂತೂ ಸ್ಪಷ್ಟ. ಪ್ರಸಕ್ತ ಬಿಕ್ಕಟ್ಟು ಮತ್ತು ಅಭಿವೃದ್ಧಿ ಹೊಂದಿದ ದೇಶಗಳನ್ನು ಆವರಿಸಿಕೊಂಡಿರುವ ಹಿಂಜರಿತದಿಂದ ಏನೇನೂ ಪಾಟ ಕಲಿತಿರುವಂತೆ ಕಾಣುತ್ತಿಲ್ಲ. ಗುಳ್ಳೆಗಳು ಕೊನೆಗೆ ಒಡೆಯಲೇ ಬೇಕು. ಹಾಗಾದಾಗ ಬಿಕ್ಕಟ್ಟಿನ ಹೊಸದೊಂದು ಸುತ್ತು ಜಾಗತಿಕ ಆರ್ಥಿಕವನ್ನು ಆವರಿಸಿಕೊಳ್ಳುತ್ತದೆ. ಜಗತ್ತಿನ ಜನಸಂಖ್ಯೆಯ ವಿಶಾಲ ಜನಸಮೂಹಗಳ ಮೇಲೆ ಅಭೂತಪೂರ್ವ ಹೊರೆಗಳನ್ನು, ಸಂಕಟಗಳನ್ನು ಹೇರುತ್ತದೆ.

ಆದ್ದರಿಂದ, ಯುರೋಪಿನ ಒಂದು ಪುನಶ್ಚೇತನಕ್ಕೆ ಕಾಯುವ ಬದಲು, ಪ್ರಧಾನ ಮಂತ್ರಿಗಳು ತಾವು ವಾಗ್ದಾನ ಮಾಡಿದ ಅದೇ ಸಂಪನ್ಮೂಲಗಳನ್ನು ನಮ್ಮ ಬಹು ಆವಶ್ಯಕವಾಗಿರುವ ಮೂಲಸೌಕರ್ಯಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳಲ್ಲಿ ಒಂದು ಬೃಹತ್ ವಿಸ್ತರಣೆಗೆ ಬಳಸಬಹುದಾಗಿತ್ತು. ಇದು ದೇಶದಲ್ಲಿ ಗಮನಾರ್ಹ ಪ್ರಮಾಣದಲ್ಲಿ ಹೆಚ್ಚಿನ ಉದ್ಯೋಗಾವಕಾಶಗಳನ್ನು ನಿರ್ಮಿಸುತ್ತಿತ್ತು, ಅದರ ಪರಿಣಾಮವಾಗಿ ನಮ್ಮ ದೇಶದ ಆರ್ಥಿಕದಲ್ಲಿ ಒಟ್ಟು ಆಂತರಿಕ ಬೇಡಿಕೆಯನ್ನು ವ್ಯಾಪಕವಾಗಿ ವಿಸ್ತರಿಸಬಹುದಾಗಿತ್ತು, ಅಮೂಲಕ ಒಂದು ಬಹುತಾಳಿಕೆಯ ಬೆಳವಣಿಗೆಯ ದಿಕ್ಪಥಕ್ಕೆ ಆಧಾರ ನಿರ್ಮಾಣವಾಗುತ್ತಿತ್ತು. ಬದಲಿಗೆ, ಅವರು ಯುರೋಪಿಯನ್ ಒಕ್ಕೂಟಕ್ಕೆ ನೆರವಿನ ವಾಗ್ದಾನವನ್ನು ಆರಿಸಿಕೊಂಡರು. ಇದು ಜನಗಳ ಮೇಲೆ ಇನ್ನಷ್ಟು ಹೊರೆಗಳನ್ನು ಹಾಕುವ ಮೂಲಕ ಮಾತ್ರ ಸಾಧ್ಯ. ಇದನ್ನು ಸರಕಾರ ಪರೋಕ್ಷ ತೆರಿಗೆಗಳನ್ನು ಹೆಚ್ಚಿಸಿ ಜನಗಳಿಂದ ಸಂಗ್ರಹಿಸಿದ ಹಣದಿಂದ ಮಾಡಬೇಕು, ಇಲ್ಲವೇ ಈಗಾಗಲೇ ಹೆಚ್ಚಿರುವ ಹಣಕಾಸು ಕೊರತೆಯನ್ನು ಇನ್ನಷ್ಟು ಹೆಚ್ಚಿಸಿ ಮಾಡಬೇಕು. ಒಂದು ವೇಳೆ ಹಣಕಾಸು ಕೊರತೆಯನ್ನು ಹೆಚ್ಚಿಸಿ ಮಾಡಿದರೆ, ಅದನ್ನೇ ಬೆದರುಗೊಂಬೆಯಾಗಿ ಮಾಡಿಕೊಂಡು ಈಗಾಗಲೇ ಅಲ್ಪಪ್ರಮಾಣಕ್ಕೆ ಇಳಿದಿರುವ ಸಬ್ಸಿಡಿಗಳನ್ನು ಸಂಪೂರ್ಣವಾಗಿ ತೆಗೆಯದಿದ್ದರೂ ಇನ್ನಷ್ಟು ಇಳಿಸಲು ಪ್ರಯತ್ನ ನಡೆಯುತ್ತದೆ. ಒಟ್ಟಿನಲ್ಲಿ ಈ ವಾಗ್ದಾನದ ಹೊರೆಗಳನ್ನು ಹೊರಬೇಕಾದವರು ಜನಸಾಮಾನ್ಯರೇ.



ಸ್ವಂತ ದೇಶಕ್ಕೆ ಅನ್ವಯಿಸದೇ?

ಆದರೆ, ಪ್ರಧಾನಮಂತ್ರಿಗಳು ಯುರೋಪಿಯನ್ ಒಕ್ಕೂಟಕ್ಕೆ ನೀಡಿರುವ ತರ್ಕವನ್ನು ನಮ್ಮದೇ ಸ್ವಂತ ಆರ್ಥಿಕಕ್ಕೆ ಬಳಸುವಂತೆ ಕಾಣುತ್ತಿಲ್ಲ. "ಯುರೋವಲಯದ ಸಾಲಗ್ರಸ್ತ ಸದಸ್ಯ ದೇಶಗಳಲ್ಲಿ ಮಿತವ್ಯಯದ ಕ್ರಮಗಳು ಕೆಲಸ ಮಾಡಬೇಕಾದರೆ, ಹೆಚ್ಚುವರಿ ಇರುವ ಸದಸ್ಯ ದೇಶಗಳು ಯುರೋ ಕರೆನ್ಸಿ ಪ್ರದೇಶದಲ್ಲಿ ಇತರೆಡೆಗಳಲ್ಲಿ ಆಗಿರುವ ಕುಗ್ಗಿಕೆಯನ್ನು ಸರಿಹೊಂದಿಸುವ ವಿಸ್ತರಣೆ ಮಾಡಲು ಸಿದ್ಧವಿದ್ದರೆ ಮಾತ್ರ ಸಾಧ್ಯ" ಎಂದು ಅವರು ಅಲ್ಲಿ ನೆರೆದಿದ್ದ ಜಿ-20 ಸಭಿಕರಿಗೆ ಹೇಳಿದರು. ಅವರು ಯುರೋವಲಯದ ಅತ್ಯಂತ ಬಲಿಷ್ಟ ಆರ್ಥಿಕವಾದ ಜರ್ಮನಿ ಆಂತರಿಕ ಹಣದುಬ್ಬರಕ್ಕೆ ಭಯಪಡದೆ ತನ್ನ ಆರ್ಥಿಕವನ್ನು ಸಡಿಲಗೊಳಿಸಬೇಕು ಎಂದು ಸೂಚಿಸುತ್ತಿದ್ದಾರೆ ಎಂಬುದು ಸ್ಪಷ್ಟ. ಆದರೆ ಜರ್ಮನಿ ಇಂತಹ ಕೃತಜ್ಞಾಪೂರ್ವಕವಾದ ಸಲಹೆಗೆ ಕಿವಿಗೊಡುತ್ತದೆ ಎಂಬುದಂತೂ ದೂರದ ಮಾತು. ಇಲ್ಲಿ ನಮ್ಮಲ್ಲಿಯೇ ಬೃಹತ್ ಸಾರ್ವಜನಿಕ ಹೂಡಿಕೆಗಳ ಮೂಲಕ ಭಾರತೀಯ ಆರ್ಥಿಕವನ್ನು ವಿಸ್ತರಿಸುವ ಬದಲು, ನಮ್ಮ ಪ್ರಧಾನ ಮಂತ್ರಿಗಳು ಜಾಗತಿಕ ದಾನಶೂರರಾಗಿ ಬಿಟ್ಟಿದ್ದಾರೆ. ಆದರೆ ಭಾರತ ಇಂತಹ ಪಾತ್ರವನ್ನು ನಮ್ಮದೇ ಬಹುಪಾಲು ಜನಗಳನ್ನು ಹಸಿವು, ಸಂಕಟದಲ್ಲಿಟ್ಟು ಮಾಡಲು ಶಕ್ಯವೇ? ನಮ್ಮ ಸ್ವಂತ 'ಆಮ್ ಆದ್ಮಿ'ಯ ಬದಲು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಸೇವೆಗೆ ನಿಲ್ಲುವುದೇ ಗುರಿಯಾದಾಗ ಆಗುವುದು ಇದೇ.

ಪ್ರಧಾನ ಮಂತ್ರಿಗಳು ಆಗಾಗ 'ಪ್ರಬುದ್ಧ ರಾಷ್ಟ್ರೀಯ ಹಿತಾಸಕ್ತಿ' ಎಂಬ ಪದಗುಚ್ಛವನ್ನು ತಮ್ಮ ಸರಕಾರದ ಧೋರಣೆಗಳ ಮಾರ್ಗದರ್ಶಕ ನೀತಿಯೆಂಬಂತೆ ಬಳಸುತ್ತಾರೆ. ಅಭಿವೃದ್ಧಿ ಹೊಂದಿರುವ ದೇಶಗಳಿಗೆ 'ಪ್ರಬುದ್ಧ ನೆರವು' ನೀಡುವುದು ನಮ್ಮ 'ಪ್ರಬುದ್ಧ ರಾಷ್ಟ್ರೀಯ ಹಿತಾಸಕ್ತಿ'ಯನ್ನು ಈಡೇರಿಸುತ್ತದೆಯೇ?

ಭಾರತೀಯ ಆರ್ಥಿಕ ಒಂದು ಜಾರುದಾರಿಯಲ್ಲಿ ಸಾಗಿದ್ದು, ಅಲ್ಲಿಂದ ಹಿಂದಿರುಗಲು ಸಾಧ್ಯವಿಲ್ಲವೇನೋ ಎಂಬಂತೆ ಕಾಣುತ್ತಿರುವಾಗ, ಈ ಜಾರುದಾರಿಯನ್ನು ತಪ್ಪಿಸಬೇಕಾದರೆ ಇರುವ ಏಕೈಕ ದಾರಿಯೆಂದರೆ ಆಂತರಿಕ ಬೇಡಿಕೆಯನ್ನು ವಿಸ್ತರಿಸುವುದರ ಮೇಲೆ ಗಮನ ಕೇಂದ್ರೀಕರಿಸುವುದು; ಅದು ಬೆಳವಣಿಗೆಗೆ ಅಗತ್ಯವಾದ ಉತ್ತೇಜನೆಯನ್ನು ನೀಡಬಲ್ಲದು. ಅಂತಿಮ ವಿಶ್ಲೇಷಣೆಯಲ್ಲಿ, ಭಾರತವನ್ನು ಜಾಗತಿಕ ವ್ಯವಸ್ಥೆಯಲ್ಲಿ ಲೆಕ್ಕಕ್ಕೆ ತಗೊಳ್ಳುವುದು ಅದರ ಆಂತರಿಕ ಆರ್ಥಿಕದ ಬಲದ ಮೇಲೆಯೇ

ಪುಟ. 12ಕ್ಕೆ

ರಕ್ತಹೀನತೆಗೆ ತುತ್ತು ಕರ್ನಾಟಕ ಮಹಿಳೆಯರು

ಮಹಿಳೆಯರ ಆರೋಗ್ಯದ ಪರಿಸ್ಥಿತಿಯು ನಮ್ಮ ಸಮಾಜದ ಆರೋಗ್ಯದ ಪರಿಸ್ಥಿತಿಯನ್ನೂ ಪ್ರತಿಬಿಂಬಿಸುತ್ತದೆ. ನಮ್ಮ ಸಮಾಜದ ಆರ್ಥಿಕ-ಸಾಮಾಜಿಕ ರಾಜಕೀಯ ಆರೋಗ್ಯ ಕೆಟ್ಟಿದೆ ಎಂಬುದು ಸ್ಪಷ್ಟ. ಅಲ್ಲವೇ ? ಓದಿ ನೋಡಿ ಈ ಲೇಖನ.

ಪ್ರಭಾ.ಎನ್

ದೇಶದ ಶಿಕ್ಷಣ ಮತ್ತು ಆರೋಗ್ಯ ಪರಿಸ್ಥಿತಿ ಹೇಗೆ ಎನ್ನುವ ಆಧಾರದ ಮೇಲೆ ಆ ದೇಶದ ಅಭಿವೃದ್ಧಿಯ ಸ್ಥಾನಮಾನವನ್ನು ನಿರ್ಧರಿಸುವುದು ವಾಡಿಕೆ. ನಮ್ಮ ದೇಶದ ಆಳುವ ವರ್ಗ ಈ ಮಾನದಂಡಗಳನ್ನು ಬದಲಾಯಿಸಿಕೊಂಡಿದ್ದರೂ ಜಗತ್ತಿನೆದುರು ನಿರೂಪಿಸುವ ಅಂಕಿ-ಅಂಶಗಳನ್ನು ಬದಲಾಯಿಸುವುದು ಸುಲಭವೇನಲ್ಲ. ಭಾರತದ ಸಾಕ್ಷರತೆ ಎಷ್ಟು ಎನ್ನುವಾಗ ಇನ್ನೂ ಶೇ. 75 ನ್ನು ದಾಟಲಾಗಿಲ್ಲ ಎಂದು ಒಪ್ಪಿಕೊಳ್ಳಲೇಬೇಕು. (2011ರ ಜನಗಣತಿಯ ಮಧ್ಯಂತರ ವರದಿ ಪ್ರಕಾರ 74.04%) ಹಾಗೆಯೇ ಆರೋಗ್ಯದ ವಿಷಯಕ್ಕೆ ಬರುವಾಗಲೂ ಭಾರತ ತನ್ನದೇ ಆದ ಅಂಕಿ ಅಂಶಗಳನ್ನು ಹೊಂದಿದೆ. ಜಗತ್ತಿನೆದುರು ತಾನು ಮೇಲಿನ ಸ್ಥಾನದಲ್ಲಿದ್ದೇನೆಂದು ತೋರಿಸಿಕೊಳ್ಳಲು ಭಾರತ ಬಯಸಿದರೆ ಅಂಕಿ ಅಂಶಗಳ ಪಟ್ಟಿಯಲ್ಲಿ ಕೆಳಗಿನಿಂದ ಮೇಲಕ್ಕೆ ಎಣಿಸಿಕೊಂಡು ಹೋಗಬೇಕಾಗುತ್ತದಷ್ಟೆ. ಶಿಕ್ಷಣದ ವಿಷಯವನ್ನಿಟ್ಟುಕೊಂಡು ಚರ್ಚಿಸುವಾಗ ಸ್ಥಾನದ ಬಗ್ಗೆ ನಿಖರವಾದದ್ದೊಂದು ಸಂಖ್ಯೆ ನಮಗೆ ಸಿಗಬಹುದಾದರೂ ನಮ್ಮ ಜನತೆಯ ಆರೋಗ್ಯದ ವಿಷಯವನ್ನು ಚರ್ಚೆಗಿಟ್ಟುಕೊಂಡಲ್ಲಿ 'ಮಾನಕ್ಕೂ' ಸಂಚಕಾರ ಎಂಬುದರಲ್ಲಿ ಎರಡನೇ ಮಾತೇ ಇಲ್ಲ. ಹೀಗಾಗಿ ಭಾರತದ ಅಭಿವೃದ್ಧಿಯನ್ನು ಲೆಕ್ಕಹಾಕುವಾಗ "ಸ್ಥಾನ-ಮಾನ" ಎರಡೂ ಅಪಾಯದಲ್ಲಿವೆ.

ದೇಶದ ಅಭಿವೃದ್ಧಿಯನ್ನು ಅಳೆಯುವಾಗ ಆರೋಗ್ಯವನ್ನು, ಆರೋಗ್ಯವನ್ನು ಅಳತೆ ಮಾಡುವಾಗ ಅಲ್ಲಿನ ಮಾತೃಮರಣ-ಶಿಶುಮರಣ, ಮಹಿಳಾ-ಮಕ್ಕಳ ಅರೋಗ್ಯ, ಜನಸಂಖ್ಯಾ ಸ್ಥಿರತೆ, ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಮುಂತಾದ ಅಂಶಗಳನ್ನು ಪ್ರಮುಖವಾಗಿ ಪರಿಗಣಿಸಲಾಗುತ್ತದೆ.

ಪ್ರಾಥಮಿಕ ಆರೋಗ್ಯ ವ್ಯವಸ್ಥೆ ಉತ್ತಮವಾಗಿದ್ದಲ್ಲಿ ಜನಸಂಖ್ಯಾ ಸ್ಥಿರತೆ, ಜನಸಂಖ್ಯಾ ಸ್ಥಿರತೆ ಇದ್ದಲ್ಲಿ ಮಾತೃಮರಣ, ಶಿಶುಮರಣಗಳಿಂದ ರಕ್ಷಣೆ, ಇವುಗಳೆಲ್ಲವು ಸರಿಯಿದ್ದಾಗ ಮಹಿಳಾ ಆರೋಗ್ಯ-ಮಕ್ಕಳ ಆರೋಗ್ಯದಲ್ಲಿ ಪ್ರಗತಿ ಇರಲು ಸಾಧ್ಯ. ಇಂತಹ ವ್ಯವಸ್ಥೆಗೊಂದು ಉತ್ತಮ ಉದಾಹರಣೆ ಕ್ಯೂಬಾ. ಇತ್ತೀಚೆಗೆ ಹೊಸದಾಗಿ ಸೇರ್ಪಡೆಯಾಗುತ್ತಿರುವ ಮತ್ತೊಂದು ದೇಶ ಪಕ್ಕದ ಶ್ರೀಲಂಕಾ.



ಜೈ ಭಾರತ ಜನನಿಯ ತನುಜಾತೆ:

ನಮ್ಮ ದೇಶದಲ್ಲಿ ಸಂಭವಿಸುವ ಮಾತೃಮರಣ, ಶಿಶುಮರಣಗಳಿಗೆ ಬಹು ಮುಖ್ಯವಾದ್ದೊಂದು ಕಾರಣ ರಕ್ತಹೀನತೆ. ನೂರಕ್ಕೆ 35% ಮಾತೃಮರಣಗಳು ರಕ್ತಹೀನತೆಯ ಕಾರಣಕ್ಕೆ ಸಂಭವಿಸುತ್ತವೆ. ಆರೋಗ್ಯ ಇಲಾಖೆಯನ್ನು ಒಳಗೊಂಡು ಇತ್ತೀಚಿನ ಹಲವಾರು ವರದಿಗಳು ಇದನ್ನು ಬಹಿರಂಗಪಡಿಸಿವೆ. ಕರ್ನಾಟಕದಲ್ಲಿ ಶೇ 39.04 ರಷ್ಟು ಮಹಿಳೆಯರು ಸಾಮಾನ್ಯ ರಕ್ತಹೀನತೆಯಿಂದಲು, 16.01 ರಷ್ಟು ಮಹಿಳೆಯರು ಮಧ್ಯಮ ಪ್ರಮಾಣದ ರಕ್ತಹೀನತೆಯಿಂದಲೂ, ಶೇಕಡಾ 2 ರಷ್ಟು ಮಹಿಳೆಯರು ತೀವ್ರತರನಾದ ರಕ್ತಹೀನತೆಯಿಂದಲೂ ಬಳಲುತ್ತಿರುವ ಅಂಕಿ ಅಂಶಗಳನ್ನು ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-3 ಬಹಿರಂಗಪಡಿಸಿದೆ. ರಕ್ತಹೀನತೆಗೆ ಹಲವಾರು ಕಾರಣಗಳಿದ್ದು ಅದರ ಬಗೆಗಳು ಸಹ ಬೇರೆ-ಬೇರೆಯಿದ್ದರೂ ನೂರಕ್ಕೆ 95ರಷ್ಟು ಮಹಿಳೆಯರಲ್ಲಿ ರಕ್ತಹೀನತೆಗೆ ಕಾರಣ ಕಬ್ಬಿಣಾಂಶದ ಕೊರತೆ. ಶೇ. 5 ಪ್ರಮಾಣವಷ್ಟೆ ಇತರೆ ಕಾರಣಗಳಿಗೆ ಮೀಸಲು. ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ-2 ರಿಂದ ಸಮೀಕ್ಷೆ-3 ಕ್ಕೆ ಬರುವಷ್ಟರಲ್ಲಿ ವಿವಾಹಿತ ಮಹಿಳೆಯರಲ್ಲಿನ ಅನಿಮಿಯಾ ಪ್ರಮಾಣ ಶೇ. 52 ರಿಂದ ಶೇ. 56 ಕ್ಕೆ ಏರಿಕೆ ಆಗಿದೆ. ಆರೋಗ್ಯ ಕ್ಷೇತ್ರದಲ್ಲಿ ಭಾರೀ ನಿರೀಕ್ಷೆ ಮೂಡಿಸಿದ್ದ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವು ಇದೇ ಅವಧಿಯಲ್ಲಿ ಚಾಲ್ತಿಯಲ್ಲಿದೆ ಎಂಬುದು ವಿಶೇಷ. ಈ ಲೇಖನವನ್ನು ಬರೆದವರನ್ನು ಒಳಗೊಂಡು ನಮ್ಮಲ್ಲಿ ಸಣ್ಣಗಾತ್ರದ ಮಹಿಳೆಯರು 36%. ಸಾಧಾರಣ ಸಣ್ಣಗಿರುವವರು ಶೇ.45 ರಷ್ಟಿದ್ದಾರೆ. ಇದರ ಹಿಂದಿನ ಕಾರಣವೂ ರಕ್ತಹೀನತೆ.

ರಕ್ತಹೀನತೆಯ ತಾಯಿಗೆ ಹುಟ್ಟುವ ಮಕ್ಕಳಲ್ಲಿ ಶೇ.95 ಕ್ಕಿಂತ ಹೆಚ್ಚಿನ ಮಕ್ಕಳು ರಕ್ತಹೀನತೆಯನ್ನೆ ಮೈದಳೆದು ಹುಟುತ್ತವೆ ಎಂಬುದು ಎಂದೋ ಸಾಬೀತಾಗಿರುವ ವೈದ್ಯಕೀಯ ಸತ್ಯ. ಇದೇ ಮಾದರಿಯನ್ನು ಭಾರತ ಮಾತೆಯ ಮಕ್ಕಳಂತಿರುವ ರಾಜ್ಯಗಳ ಮಟ್ಟಿಗೆ ಹೋಲಿಸಬಹುದು. ಈ ಪ್ರಕಾರವಾಗಿ ತಾಯಿಗಿರುವ ಎಲ್ಲ ಸಮಸ್ಯೆಗಳನ್ನು ಮೈದಳೆದು ನಿಂತಿದೆ ಕರ್ನಾಟಕ. ರಕ್ತಹೀನತೆಗೆ ತುತ್ತಾಗಿರುವ ಹೆಚ್ಚಿನ ಜನರನ್ನು ಹೊಂದಿರುವ ದೇಶದ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ಅದಕ್ಕೇ ಇರಬೇಕು, 'ಜೈ ಭಾರತ ಜನನಿಯ ತನುಜಾತೆ ಜಯಹೇ ಕರ್ನಾಟಕ ಮಾತೆ' ಎನ್ನುವುದು. ಅಪವಾದದ ಪ್ರಕರಣವಾಗಿ ಕೇರಳ ರಾಜ್ಯವು "ರೋಗನಿರೋಧಕತೆಯನ್ನು" ಪಡೆದುಕೊಂಡು ರೋಗಪೀಡಿತ ಮಾತೃಸ್ಥಾನದಿಂದ ದೂರನಿಲ್ಲುವಲ್ಲಿ ಯಶಸ್ವಿಯಾಗಿದೆ. ಆರೋಗ್ಯ ಸುಧಾರಣೆಯಲ್ಲಿ ದೇಶಕ್ಕೇ ನಂಬರ್ ಒನ್ ಸ್ಥಾನದಲ್ಲಿದೆ. ಕೇರಳವನ್ನನುಸರಿಸಿ ಮಣಿಪುರ, ಗೋವಾ, ನಾಗಾಲ್ಯಾಂಡ್ ರಾಜ್ಯಗಳು ರಕ್ತಹೀನತೆಯ ಮಟ್ಟಿಗೆ ಸುಧಾರಣೆ ಮೂಡಿಸಿವೆ. ಇವೆಲ್ಲವು ಮಾತೃಪ್ರಧಾನ ಕುಟುಂಬ ವ್ಯವಸ್ಥೆಯನ್ನು ಪೋಷಿಸಿದ ರಾಜ್ಯಗಳು ಎನ್ನುವುದನ್ನು ಅಗತ್ಯವಾಗಿ ನೆನಪಿಡಬೇಕು.

ರಕ್ತಕ್ಕೆ ಕಬ್ಬಿಣ ಎಲ್ಲಿಂದ ಬರಬೇಕು?

ಕಬ್ಬಿಣಾಂಶದ ಕೊರತೆಗೆ ಮೂಲಕಾರಣ ಪೌಷ್ಟಿಕ ಆಹಾರದ ಕೊರತೆ. ಪೌಷ್ಟಿಕ ಆಹಾರದ ಮಾತಿರಲಿ ಹೊಟ್ಟೆ ತುಂಬುವಷ್ಟು ಆಹಾರವಾದರೂ ಶೇ. 35 ಜನರಿಗೆ ನಮ್ಮಲ್ಲಿ ಪ್ರತಿನಿತ್ಯ ಲಭ್ಯವಾಗುತ್ತಿಲ್ಲ. ಹೀಗಾಗಿ ಮಹಿಳೆಯರಲ್ಲಿ ಅಲ್ಲದೆ 24% ಪುರುಷರಲ್ಲೂ ರಕ್ತಹೀನತೆ ಮನೆಮಾಡಿದೆ. ಒಂದು ಅಂದಾಜಿನ ಪ್ರಕಾರ ಕರ್ನಾಟಕದಲ್ಲಿ ಗರ್ಭಿಣಿ ಮಹಿಳೆಯರ ರಕ್ತಹೀನತೆಯ ಪ್ರಮಾಣ ಶೇಕಡಾ 90 ರಷ್ಟು, ಇದರಿಂದಾಗಿ ಗರ್ಭಪಾತ, ಅವಧಿಗೆ ಮುನ್ನ ಹೆರಿಗೆ, ಗಂಡಾಂತರಕಾರಿ ಹೆರಿಗೆಗಳು, ಕಡಿಮೆ ತೂಕದ ಮಕ್ಕಳ ಜನನ ನಮ್ಮಲ್ಲಿ ಸಹಜವಾಗಿ ಹೆಚ್ಚಿರುತ್ತವೆ. ಒಂದು ಕಡೆ ಪೌಷ್ಟಿಕ ಆಹಾರದ



ಅಲಭ್ಯತೆ, ಬಾಲ್ಯ ವಿವಾಹಗಳು, ಅಂತರವಿಲ್ಲದ ಹೆರಿಗೆಗಳು, ಸಮಾಜ ಹಾಗೂ ಕುಟುಂಬದೊಳಗೆ ಮನೆ ಮಾಡಿರುವ ಪುರುಷ ಪ್ರಧಾನ ಮೌಲ್ಯಗಳ ಹಿಡಿತ, ಮತ್ತೊಂದು ಕಡೆ ಸರ್ಕಾರ ವಿತರಿಸುವ ಕಬ್ಬಿಣಾಂಶ ಮಾತ್ರೆಗಳ ಬಗೆಗಿರುವ ಪೂರ್ವಾಗ್ರಹಗಳಿಂದಾಗಿ ಕರ್ನಾಟಕದ ಮಹಿಳೆಯರ ಆರೋಗ್ಯವು ದಯನೀಯ ಪರಿಸ್ಥಿತಿಯಲ್ಲಿದೆಯೆಂದರೆ ಅತಿಶಯೋಕ್ತಿಯಲ್ಲ. ಇದೇ ಸ್ಥಿತಿ ಮಕ್ಕಳದ್ದು ಕೂಡ. ಮಹಿಳೆಯರು ಮತ್ತು ಮಕ್ಕಳ ಆರೋಗ್ಯ ದರ್ಜೆ ಪರಸ್ಪರ ಪೈಪೋಟಿಯಲ್ಲಿವೆ. ಸಣ್ಣದೊಂದು ಉದಾಹರಣೆಯನ್ನು ನೀಡಬಹುದಾದರೆ, ಕೇರಳ ರಾಜ್ಯದಲ್ಲಿ 'ಐರನ್ ಫೋಲಿಕ್ ಆಸಿಡ್' (IFA-ಕಬ್ಬಿಣಾಂಶದ ಗುಳಿಗೆಗಳು) ಬಳಕೆ 83% ಇದ್ದರೆ ಕರ್ನಾಟಕದಲ್ಲಿ ಇದರ ಬಳಕೆ 37–44%



ಅಕ್ಕ-ಪಕ್ಕದ ರಾಜ್ಯಗಳ ಮಾತೃಮರಣ ಮತ್ತು ಶಿಶುಮರಣ ದರಗಳ ಅಂಕಿಅಂಶಗಳು (ಡಿ.ಎಲ್.ಹೆಚ್.ಎಸ್-2006)			
ಕ್ರ.ಸಂ.	ರಾಜ್ಯಗಳು	ಮಾತೃಮರಣ (1 ಲಕ್ಷಕ್ಕೆ)	ಶಿಶುಮರಣ (1 ಸಾವಿರಕ್ಕೆ)
	ಭಾರತ	450	50
1	ಕರ್ನಾಟಕ	213	48
2	ಕೇರಳ	95	15
3	ಆಂಧ್ರ ಪ್ರದೇಶ	154	56
4	ತಮಿಳು ನಾಡು	111	37
5	ಮಹಾರಾಷ್ಟ್ರ	130	35

ಪ್ರಮಾಣ ಮಾತ್ರ.

ಸಮಗ್ರ ಆರೋಗ್ಯ ಸುಧಾರಣಾ ಕಾರ್ಯಕ್ರಮಗಳು ಕೇರಳದಲ್ಲಿ ಅನುಷ್ಠಾನಗೊಳಿಸುತ್ತಿರುವುದರ ಭಾಗವಾಗಿ 'ಐರನ್ ಫೋಲಿಕ್ ಆಸಿಡ್' ಅನ್ನು ಅಲ್ಲಿನ ಮಹಿಳೆಯರು ಸ್ವೀಕರಿಸುತ್ತಿದ್ದಾರೆ. ಜ್ವರ, ಕೆಮ್ಮು, ನೆಗಡಿಯಂತಹ ಕಾಯಿಲೆಗಳಿಗೂ ನೂರಾರು ರೂಪಾಯಿಗಳನ್ನು ಖರ್ಚು ಮಾಡಬೇಕಾದಾಗ IFA ಮಾತ್ರೆಗಳು ಮಾತ್ರವೆ ಏಕೆ ಮನೆಬಾಗಿಲಿಗೆ ಹುಡುಕಿಕೊಂಡು ಬರುತ್ತಿವೆ ಎಂದು ಅವುಗಳನ್ನು ಅನುಮಾನಿಸಿ ನೋಡುವ ಪರಿಸ್ಥಿತಿ ಕರ್ನಾಟಕದ ಮಹಿಳೆಯರದ್ದಾಗಿದೆ. ದುರಂತವೆಂದರೆ IFA ಮಾತ್ರೆಗಳು ಕೂಡ ಅಗತ್ಯ ಪ್ರಮಾಣದಷ್ಟು ಲಭ್ಯವಾಗುತ್ತಿಲ್ಲವೆಂದು ಬೆಂಗಳೂರಿನಲ್ಲಿ ಜರುಗಿದ ಉನ್ನತ ಅಧಿಕಾರಿಗಳ ಸಭೆಯಲ್ಲಿ ಆರೋಗ್ಯ ಇಲಾಖೆಯವರೆ ಅಲವತ್ತುಕೊಂಡದ್ದಿದೆ. ಮಾತೃಮರಣ, ಶಿಶುಮರಣಗಳನ್ನು ತಗ್ಗಿಸುವ ಪ್ರಮುಖ ಗುರಿಯನ್ನು ಮುಂದೆ ಮಾಡಿಕೊಂಡು ಬಂದ ರಾಷ್ಟ್ರೀಯ ಗ್ರಾಮೀಣ ಅರೋಗ್ಯ ಅಭಿಯಾನವು ಇನ್ನೇನು ಮುಗಿಯುತ್ತಾ ಬಂದಿದೆ (2005–2012) ಎನ್ನುವ ಕಾಲಘಟ್ಟದಲ್ಲಿ ಈ ಪರಿಸ್ಥಿತಿ ಎಂದರೆ ಕರ್ನಾಟಕದ ಒಟ್ಟಾರೆ ಆರೋಗ್ಯ ಪರಿಸ್ಥಿತಿ ಹೇಗಿರಬೇಕು.

ಹೆತ್ತಮಕ್ಕಳನ್ನೇ ಮಾರಾಟ ಮಾಡಿಕೊಳ್ಳುವ ಕಡುಬಡತನವಿರುವ ಕರ್ನಾಟಕದಲ್ಲಿ ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನವೆಂಬ ಕಾಲಾವಧಿ ಕಾರ್ಯಕ್ರಮ ಸಮಗ್ರ ಆರೋಗ್ಯಕ್ಕೆ ಗುಳಿಗೆಯಾದೀತೆ? 20 ರೂಪಾಯಿಗಳ ದಿನಾದಾಯದಲ್ಲಿ 100ಕ್ಕೆ 70 ಜನ ದಿನದೂಡುತ್ತಾರೆ ಎನ್ನುವ ಅಂಕಿಅಂಶಗಳು ಸರ್ಕಾರದ ಮೂಲಕವೇ ಹೊರಬೀಳುತ್ತಿವೆ ಎಂದ ಮೇಲೆ ಸಮಾಜದಲ್ಲಿ ಹಾಗೂ ಅದರ ಘಟಕವಾದ ಕುಟುಂಬದಲ್ಲಿ ಎರಡನೇ ಸ್ಥಾನದಲ್ಲಿರುವ ಮಹಿಳೆಯರ ಅರೋಗ್ಯ ಪರಿಸ್ಥಿತಿ ಹೇಗಿರಬಹುದು ಎಂದು ತಿಳಿಯಲು ಭಾರೀ ಸಮೀಕ್ಷೆಗಳೇ ಬೇಕೇ? ಇವು ಜನತೆಯ ಬದುಕನ್ನು ನಿರ್ಧರಿಸುತ್ತಿರುವ ಕೆಲವಾರು ಅಂಕಿ-ಅಂಶಗಳು. ನಮ್ಮ ದೇಶದಲ್ಲಿ ಜನಸಾಮಾನ್ಯರ ಜೀವನದಲ್ಲಿ ಆಟ ಆಡುವ ಅಂಕಿ-ಸಂಖ್ಯೆಗಳೇ ಬೇರೆ. ಆಳುವ ಜನರಿಗೆ ಅನ್ವಯಿಸುವ ಅಂಕಿ ಅಂಶಗಳೇ ಬೇರೆ. ಈ ನಂಬರ್ ಗೇಮ್ ವ್ಯತ್ಯಾಸ ಹೇಗೆ? ಎಷ್ಟು? ಸಣ್ಣ ಪ್ರಮಾಣದಲ್ಲಾದರೂ ಇವುಗಳನ್ನು ತಿಳಿಯೋಣ.

ನಂಬರ್ ಗೇಮ್:

"ನಂಬರ್ ಗೇಮ್" ಎನ್ನುವುದು ರಾಷ್ಟ್ರೀಯ ಕ್ರೀಡೆಗಳ ಮಟ್ಟಕ್ಕೆ ಪರಿವರ್ತನೆಯಾಗುತ್ತಿರುವ ಭಾರತದ 'ರಾಜಕೀಯ ಆಟ'. ಕರ್ನಾಟಕದಲ್ಲಿ ಬಹುಮತ ಸಾಬೀತುಪಡಿಸಲು 'ಯಡಿಯೂರಪ್ಪ- 10462' ಎನ್ನುವ ಪ್ರಳಯಾಂತಕರು ಆಪರೇಷನ್ ಕಮಲದ ಮೂಲಕ ಕರ್ನಾಟಕದಲ್ಲಿ ಆಡಿದ ನಂಬರ್ ಗೇಮ್ ಅಂತರರಾಷ್ಟ್ರೀಯ ಕ್ರೀಡೆಯಂತೆಯೇ ಖ್ಯಾತವಾಗಿದ್ದು ಈಗ ಇತಿಹಾಸ. ಆಪರೇಷನ್ ಕಮಲದ ಮುಖ್ಯ ಫೈನಾನ್ಸರ್‌ಗಳಾದ ಗಾಲಿ ಜನಾರ್ಧನರೆಡ್ಡಿ–697, ಶ್ರೀನಿವಾಸ ರೆಡ್ಡಿ–696 ಎನ್ನುವ ಮಹಾನುಭಾವರುಗಳು ಸಹಸ್ರ ಕೋಟಿಗಳಲ್ಲಿ ಲೂಟಿ ಮಾಡಿ ಹೈದರಾಬಾದಿನ ಜೈಲು ಪಾಲಾದದ್ದನ್ನು ಜನ ಹೆಚ್ಚು ಕಡಿಮೆ ಮರೆತೇ ಹೋದರು. ರಾಜಾ, ಕನಿಮೊಳಿ ಮುಂತಾದವರು 2 ಜಿ ಸ್ಪೆಕ್ಟ್ರಂ ವ್ಯವಹಾರದಲ್ಲಿ 2,645 ಸಹಸ್ರ ಕೋಟಿಗಳಷ್ಟು ಹಣವನ್ನು ಸರ್ಕಾರಕ್ಕೆ ಪಂಗನಾಮ ಹಾಕಿ ಕಂಬಿ ಎಣಿಸುವ ಗೇಮ್ಸ್‌ನಲ್ಲಿ ಕಾಲ ಕಳೆಯುತ್ತಿರುವ ವಿಚಾರ ಸಹ ಜಗದ್ವಿಖ್ಯಾತಿ. ಇಂಥಾ ಆಟಗಳ ಪಟ್ಟಿ ಮಾಡ ಹೊರಟರೆ ಪತ್ರಿಕೆಯ ಇಡೀ ಪುಟಗಳನ್ನು ಇವಕ್ಕೇ ಮೀಸಲಿಡಬೇಕಾದ್ದರಿಂದ ಇವು ರಾಜಕಾರಣಿಗಳ ನಂಬರ್ ಆಟಕ್ಕೆ ಸ್ಯಾಂಪಲ್ಸ್ ಅಷ್ಟೇ.

ಇರಲಿ. ಇಲ್ಲಿ ಮುಖ್ಯವಾದ ವಿಷಯವೇನೆಂದರೆ, ಆಳುವ ಜನರೆನ್ನುವವರು ತಮ್ಮ ನಂಬರ್‌ಗಳನ್ನು ಕೋಟಿಗಳಲ್ಲಿ ಲೆಕ್ಕಹಾಕುವಾಗ ಯೋಜನಾ ಆಯೋಗದ ಉಪಾಧ್ಯಕ್ಷ ಮೊಂಟೆಕ್ ಸಿಂಗ್ ಅಹ್ಲುವಾಲಿಯ ಎನ್ನುವ ಆರ್ಥಿಕ ತಜ್ಞರು ಬಡತನರೇಖೆಯನ್ನು ಗುರುತಿಸಲು ನಡೆಸಿದ ಕಸರತ್ತು, ಬಡವರಿಗೆ ಎರಡು ಸಂಖ್ಯೆಗಳನ್ನು ನಿಗದಿಮಾಡಿ ಅವುಗಳನ್ನು ಅನುಸರಿಸಲು ಪ್ರಧಾನ ಮಂತ್ರಿಗಳಿಗೆ ಪುಣ್ಯಾತ್ಮರು ಸಲಹೆ ಮಾಡಿದ್ದರು. ಒಂದು, ನಗರಗಳಲ್ಲಿ ವಾಸಿಸುವ ಜನರಿಗೆ ನಿಗದಿಪಡಿಸಿದ ಸಂಖ್ಯೆ ದಿನಕ್ಕೆ 32 ರೂಪಾಯಿಗಳಿಗಿಂತ ಹೆಚ್ಚಿಗೆ ಖರೀದಿಸುವ ಶಕ್ತಿಯಿರುವವರನ್ನು ನಗರಗಳ ಬಿಪಿಎಲ್ ಪಟ್ಟಿಯಿಂದ ಆಚೆ ಇಡುವುದು. ಎರಡನೆಯದು, ಇದೇ ಮಾನದಂಡವನ್ನನುಸರಿಸಿ ಗ್ರಾಮೀಣ ಜನರಿಗೆ ದಿನವೊಂದಕ್ಕೆ 26 ರೂಪಾಯಿಗಳನ್ನು ನಿಗದಿಪಡಿಸಿ ಅದಕ್ಕಿಂತ ಹೆಚ್ಚು ಖರ್ಚು ಮಾಡುವವರನ್ನು ಹಳ್ಳಿಗಳ ಬಿಪಿಎಲ್ ಪಟ್ಟಿಯಿಂದ ಆಚೆ ಎಸೆಯುವುದು. ಮನುಷ್ಯರ ಘನತೆಗೆ ಸವಾಲೆಸೆದಿರುವ ಇದಕ್ಕಿಂತ ಅಪಮಾನಕರವಾದ ಸಂಗತಿ ಜಗತ್ತಿನಲ್ಲಿ ಸದ್ಯ ಬೇರೊಂದಿರಲಾರದು. ವಿಪರ್ಯಾಸವೆಂದರೆ, ಇದೇ ಆಳುವ ಜನರೆ, ವಿಜೃಂಭಿಸುವ ಸೂಟು-ಬೂಟುಗಳೊಂದಿಗೆ ಅಂತರರಾಷ್ಟ್ರೀಯ ವೇದಿಕೆಗಳಲ್ಲಿ ಕೂತು ಶಿಶುಮರಣ-ಮಾತೃಮರಣಗಳೆಂಬ ಕಳಂಕಗಳನ್ನು ದೇಶದಿಂದ ಅಳಿಸುತ್ತೇವೆ ಎನ್ನುವ ಅಲಂಕಾರಿಕ ಮಾತುಗಳನ್ನಾಡಿ ಪ್ರತಿಜ್ಞೆ ಸ್ವೀಕರಿಸಿ ಬರುವುದು. ಇಂತಹವೇ ನೂರಾರು ಪ್ರತಿಜ್ಞಾ ವಿಧಿಗಳನ್ನು ವಿಶ್ವ ಆರೋಗ್ಯ ಸಂಸ್ಥೆ ತನ್ನ ಚಾರಿತ್ರಿಕ ಕಡತಗಳಲ್ಲಿ ದಾಖಲಿಸಿಕೊಂಡು ಕೆಲವೊಂದು ಸಮಯದ ನಂತರ 'ಪ್ರಗತಿ ಸಮೀಕ್ಷೆಗೆ' (impact assessment) ಪೆನ್ನು ಪೇಪರ್ (ಕ್ಷಮಿಸಿ, ಈಗ ಲ್ಯಾಪ್ಟಾಪ್) ಹಿಡಿದು ತಂಡದ ಸಮೇತ ಬರುವುದು ಇಲ್ಲವೇ ಪ್ರತಿನಿಧಿಗಳನ್ನು ಕಳಿಸುವುದು.

ಸ್ವಾತಂತ್ರ್ಯ ಬಂದು ಮುಕ್ಕಾಲು ಶತಮಾನವನ್ನು ಸವೆಸುತ್ತಾ ಬಂದಿರುವ ವಿಮೋಚನಾ ಭಾರತದಲ್ಲಿ ಜನಸಾಮಾನ್ಯರು ಶಿಕ್ಷಣ, ಆಹಾರ, ಆರೋಗ್ಯ ಮುಂತಾದ ಮೂಲ ಅವಶ್ಯಕತೆಗಳಿಗೆ ಸರ್ಕಾರಗಳ ಮುಂದೆ ಭಿಕ್ಷೆ ಎತ್ತುವ ಸನ್ನಿವೇಶವನ್ನು ಇಂದಿಗೂ ಉಳಿಸಿಕೊಳ್ಳಲಾಗುತ್ತಿದೆ ಎನ್ನುವ ವಿಚಾರ ನಿಜವಾಗಲು ನಾಗರಿಕತೆಗೇ ಅಪಮಾನ. ಇಂತಹ ಅನಾಗರಿಕ ನೀತಿಗಳ ವಿರುದ್ಧ ಜನ ಒಂದಾದರೆ ಆ ನಂಬರ್ ಎಷ್ಟಾಗ ಬಹುದು ?



2,500 ಜನರಿರುವ ಗ್ರಾಮವೊಂದನ್ನು ಉದಾಹರಣೆಯಾಗಿ ತೆಗೆದುಕೊಂಡರು ಅಭಿಜಿತ್ ಸೇನ್ ವರದಿ ಪ್ರಕಾರ 1950

ಪುಟ 10 ಕ್ಕೆ

ರಕ್ತಹೀನತೆಯ ಮಹಿಳೆಯರಿಂದ ತುಂಬಿತುಳುಕುತ್ತಿರುವ.......

ಪುಟ 9 ರಿಂದ

ಜನ ಬಿಪಿಎಲ್ ವ್ಯಾಪ್ತಿಗೆ ಬರುತ್ತಾರೆ. ಇವರಲ್ಲಿ ಅರ್ಧಜನ ಅಗತ್ಯಗಳಿಗಾಗಿ ಬೀದಿಗಿಳಿದರು 975 ಜನ ಗ್ರಾಮವೊಂದ ರಲ್ಲೇ ಒಟ್ಟುಗೂಡಿ ಆಳುವ ಜನರಿಗೆ ಎಚ್ಚರಿಕೆ ಕೊಡಬಹುದು. ಆಟ ನಡೆಯಲಿಲ್ಲ ವೆನ್ನೋಣ. ಪಂಚಾಯತಿ ಯೊಂದರ ವ್ಯಾಪ್ತಿಯಲ್ಲಿ ಜನ ಬೀದಿಗಿಳಿದರು 5,000 ಜನಸಂಖ್ಯೆಯಲ್ಲಿ ಕನಿಷ್ಠ 3,000 ಜನ ಬಿಪಿಎಲ್. 1,000 ಜನ ತಪ್ಪಿಸಿಕೊಂಡು 2,000 ಜನ ಪಂಚಾಯತಿ ಮುಂದೆ ನೆರೆದರೆನ್ನಿ, ಹೇಗಾಗಬಹುದು ಸನ್ನಿವೇಶ ? ಆಗಲೂ ನಡೆಯಲಿಲ್ಲ ಆಟ ಎಂದೇ ಭಾವಿಸಿಕೊಳ್ಳೋಣ, ಆಟದ ಸೂತ್ರವನ್ನು ಮುಂದುವರೆಸಿ ತಾಲ್ಲೂಕಿಗೆ ಅನ್ವಯಿಸಿದರೆ? ನನ್ನದೇ ತಾಲ್ಲೂಕಾದ ದೊಡ್ಡಬಳ್ಳಾಪುರದಲ್ಲಿ 29 ಪಂಚಾಯತಿಗಳಿವೆ. ಅದನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ, 2x29,000=58,000. ಪಂಚಾಯತಿಗೆ 2,000 ದಂತೆ ಜನ ಬಂದರೂ ತಾಲ್ಲೂಕು ಕೇಂದ್ರದಲ್ಲಿ ಒಟ್ಟಿಗೆ ನೆರೆಯಲು ಸ್ಥಳವಿಲ್ಲ. ಅದರೆ ಈ ಪ್ರಕಾರದಲ್ಲಿ ಜನ ಗೇಮ್ ಆಡದೆ ಆರೋಗ್ಯವೂ ಇಲ್ಲ, ಶಿಕ್ಷಣವೂ ಇಲ್ಲ, ಮಾತೃಮರಣ ಶಿಶುಮರಣ ದರಗಳಲ್ಲಿ ಇಳಿಕೆಯೂ ಇಲ್ಲ, ಅನಿಮಿಯಾ ಅಳಿಯುವ ಪ್ರಶ್ನೆ ಉದ್ಭವಿಸುವುದೇ ಇಲ್ಲ.

ಮಾದರಿ ಕೇರಳ:

ಮಾನವ ಅಭಿವೃದ್ಧಿ ಸೂಚ್ಯಂಕದ ಎಲ್ಲ ನಿರ್ಧಾರಕಗಳಲ್ಲಿ ಕೇರಳ ದೇಶದಲ್ಲೇ ಪ್ರಥಮ ಸ್ಥಾನದಲ್ಲಿದ್ದರೆ, ಅರೋಗ್ಯ, ಶಿಕ್ಷಣ, ಜನರ ಆದಾಯದಲ್ಲಿ ಪ್ರಗತಿ ಆಗಿದ್ದರೆ ಅದಕ್ಕೆ ಮೂಲ ಕಾರಣ ಕೇರಳದ ಜನತೆ ಸಹಸ್ರ ಸಹಸ್ರ ಸಂಖ್ಯೆಯಲ್ಲಿ ಬೀದಿಗಿಳಿದು ಹಕ್ಕುಗಳಿಗಾಗಿ ಹೋರಾಡಿದ್ದು. ಹೋರಾಟದ ಹಾದಿಯಲ್ಲಿ ಎಷ್ಟೋ ವೀರರು ಹುತಾತ್ಮರಾಗಿದ್ದು. ಆ ಮಟ್ಟದ ಘನತೆಯ ಬದುಕು ನಮದಲ್ಲ. ಉಳ್ಳವರ ಪರವಾದ ರಾಜಕಾರಣದ ಗೇಮ್‌ನಲ್ಲಿ ಸೋತೂ–ಸೋತೂ ಸುಣ್ಣವಾಗುತ್ತಿರುವ ನಿಕೃಷ್ಟ ಬದುಕು. ತಲೆಯಂತೂ ತಗ್ಗಿಸಲೇಬೇಕು. ಯಾರು? ಬಡತನ ರೇಖೆಯನ್ನು 26 ರೂಪಾಯಿ ಗಳಿಗೆ ಇಳಿಸಹೊರಟಿರುವ ಆಳುವ ಜನರೋ? ಇಷ್ಟಾದರು ಕೈಕಟ್ಟಿ ಕುಳಿತಿರುವ ಪ್ರಜಾಪ್ರಭುತ್ವದ ಪ್ರಭುಗಳಾದ ಜನರೋ?

ರಕ್ತಹೀನತೆ ಏಕೆ? ತಡೆಗಟ್ಟುವ ಬಗೆ ಹೇಗೆ?

ರಕ್ತಹೀನತೆ ತಡೆಯುವಲ್ಲಿ ನಮ್ಮ ಕನಿಷ್ಠ ಪ್ರಯತ್ನ

1. ರಕ್ತಹೀನತೆ ಎಂದರೇನು?

ದೇಹದ ಎಲ್ಲ ಭಾಗಗಳಿಗೂ ಆಮ್ಲಜನಕವನ್ನು ಪೂರೈಸಲು ಬೇಕಾಗುವಷ್ಟು ಕೆಂಪುರಕ್ತ ಕಣಗಳು ರಕ್ತದಲ್ಲಿ ಇರದ ಸ್ಥಿತಿಯನ್ನು ರಕ್ತಹೀನತೆ ಎನ್ನುತ್ತೇವೆ. ಸಾಕಷ್ಟು ಪ್ರಮಾಣದ ಆಮ್ಲಜನಕವಿರುವ ರಕ್ತ ಶರೀರದ ಅಂಗಾಂಗಗಳಿಗೆಲ್ಲ ಶಕ್ತಿ ತುಂಬಲು ಸಾಧ್ಯ.

ನಮ್ಮ ಶರೀರದಲ್ಲಿರುವ ಪ್ಲಾಸ್ಮಾ ಎನ್ನುವ ದ್ರವರೂಪದ ಜೀವಕೋಶಗಳಲ್ಲಿ ರೋಗಾಣುಗಳ ಜೊತೆ ಹೋರಾಡುವ ಬಿಳಿರಕ್ತಕಣಗಳು, ರಕ್ತ ಹೆಪ್ಪುಗಟ್ಟುವಂತೆ ನೋಡಿಕೊಳ್ಳುವ ಕಿರುತಟ್ಟೆಗಳು, ಶರೀರದ ಅಂಗಾಂಗಳಿಗೆಲ್ಲ ಆಮ್ಲಜನಕವನ್ನು ಪೂರೈಸುವ ಕೆಂಪು ರಕ್ತಕಣಗಳು ಕೆಲಸ ನಿರ್ವಹಿಸುತ್ತವೆ.

ಕೆಂಪು ರಕ್ತ ಕಣಗಳಲ್ಲಿ ಹಿಮೋ ಗ್ಲೋಬಿನ್ ಎನ್ನುವ ಸತ್ವವಿದೆ. ರಕ್ತಕ್ಕೆ ಕೆಂಪುಬಣ್ಣವನ್ನು ತುಂಬುವುದು ಇದೇ ಹಿಮೋಗ್ಲೋಬಿನ್. ಹಿಮೋ ಗ್ಲೋಬಿನ್ ಎನ್ನುವುದು ಕಬ್ಬಿಣಾಂಶದಿಂದ ತುಂಬಿದ ಪ್ರೋಟೀನು. ಶರೀರಕ್ಕೆ ಸಾಕಷ್ಟು ಕಬ್ಬಿಣಾಂಶವು ಸಿಗದೇ



ಹೋದಾಗ ಹಿಮೋಗ್ಲೋಬಿನ್ ಪ್ರಮಾಣ ಕಡಿಮೆ ಯಾಗಿಬಿಡುತ್ತದೆ.

2. ಶರೀರದಲ್ಲಿ ಹಿಮೋಗ್ಲೋಬಿನ್ ಎಷ್ಟಿರಬೇಕು?

11 ಗ್ರಾಂ ನಿಂದ 13 ಗ್ರಾಂನಷ್ಟಿರಬೇಕು.

3. ರಕ್ತಹೀನತೆಯ ಲಕ್ಷಣಗಳೇನು?

ಸುಸ್ತು, ಬಳಲಿಕೆ, ತಲೆಸುತ್ತುವುದು, ಚರ್ಮ, ತುಟಿ ಕಣ್ಣೊಳಗಿನ ರೆಪ್ಪೆಯ ಕೆಂಪು ಭಾಗ, ಉಗುರುಗಳು, ಅಂಗೈ, ನಾಲಿಗೆ ಬಿಳಚಿಕೊಳ್ಳುವುದು. ಅಂಗೈಗಳು, ಪಾದ ತಣ್ಣಗಾಗುವುದು, ಸ್ವಲ್ಪವೇ ಕೆಲಸ ಮಾಡಿದರೂ (ಮೆಟ್ಟಿಲುಗಳನ್ನು ಹತ್ತಿದರೂ ಸಾಕು) ಎದೆಬಡಿತ ಏರುವುದು, ಉಸಿರಾಟ ಮಂದಗತಿ ಯಲ್ಲಿರುವುದು.

4. ರಕ್ತಹೀನತೆಯ ಪರಿಣಾಮಗಳೇನು?

ರೋಗಕ್ಕೆ ದಾರಿ ಮಾಡಿಕೊಡು ವುದು, ರಕ್ತಹೀನತೆಗೆ ತುತ್ತಾದ ವ್ಯಕ್ತಿಯ ಚಟುವಟಿಕೆಗಳು ಕುಗ್ಗುವುದು, ಮೆದುಳಿನ ಬೆಳವಣಿಗೆ, ಚಟುವಟಿಕೆಗೆ ತಡೆಯೊ ಡ್ಡುವುದು, ದೇಹದ ಉಷ್ಣತೆ ಕಾಪಾಡಿ ಕೊಳ್ಳಲು ಅಡ್ಡಿಯಾಗುವುದು, ಜೀರ್ಣ ಕ್ರಿಯೆಗೆ–ಸ್ನಾಯುಗಳ ಚಟುವಟಿಕೆಗಳಿಗೂ ತೊಂದರೆಯಾಗುವುದು, ಮಕ್ಕಳ ಶಾರೀರಿಕ, ಮಾನಸಿಕ ಬೆಳವಣಿಗೆಗಳನ್ನು ಕುಂಠಿತಗೊಳಿಸುವುದು.

5. ರಕ್ತಹೀನತೆಗೆ ಬಲಿಯಾಗುವವರಲ್ಲಿ ಹೆಚ್ಚಿನವರು ಯಾರು?

ಮಹಿಳೆಯರು ಮತ್ತು ಮಕ್ಕಳು. ನಮ್ಮ ದೇಶದ ಶೇ. 90 ರಷ್ಟು ಮಹಿಳೆಯರಲ್ಲಿ ಮತ್ತು ಅಷ್ಟೇ ಪ್ರಮಾಣದಲ್ಲಿ ಮಕ್ಕಳಲ್ಲಿ ರಕ್ತಹೀನತೆ ಮನೆ ಮಾಡಿದೆ. ಹಾಗೆಯೇ ಜಗತ್ತಿನಾದ್ಯಂತ ಸರಿ–ಸುಮಾರು 500 ದಶಲಕ್ಷ ಮಹಿಳೆಯರು ರಕ್ತ ಹೀನತೆಗೆ ತುತ್ತಾಗಿದ್ದಾರೆ. ಇದಕ್ಕೆ ಲಿಂಗತಾರತಮ್ಯ ಮುಖ್ಯ ಕಾರಣವೆನ್ನದೆ ವಿಧಿಯಿಲ್ಲ.

6. ಮಹಿಳೆಯರಲ್ಲಿನ ರಕ್ತಹೀನತೆಯಿಂದ ಆಗಬಹುದು ದಾದ ಪರಿಣಾಮಗಳೇನು?

ಸದಾ ಸುಸ್ತು, ಹೆರಿಗೆ ಸಂಬಂಧಿ ಸಾವುಗಳು, ತೀವ್ರ ತೆರನಾದ ರಕ್ತಹೀನತೆಯ ಕಾರಣದಿಂದ ಸಂಭವಿಸುವ ಸಾವುಗಳು, ಕಡಿಮೆ ತೂಕದ ಮಕ್ಕಳ ಜನನ, ರಕ್ತಹೀನತೆಯಿಂದ ಬಳಲುವ ತಾಯಿಗೆ ಜನಿಸುವ ಮಕ್ಕಳಲ್ಲೂ ತಪ್ಪದೆ ರಕ್ತಹೀನತೆ, ಗರ್ಭಪಾತಗಳು, ಉತ್ಪಾದನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಲಾರದ ಅಸಹಾಯಕತೆ ಮುಂತಾದವು.

7. ರಕ್ತಹೀನತೆಗೆ ಚಿಕಿತ್ಸೆ ಹೇಗೆ?

ರಕ್ತಹೀನತೆ ಆದವರಿಗೆ ಕಬ್ಬಿಣಾಂಶದ ಮಾತ್ರೆಗಳನ್ನು ವೈದ್ಯರು ನೀಡುತ್ತಾರೆ. ಈ ಗುಳಿಗೆಗಳನ್ನು ಸೇವಿಸುವ ಮೂಲಕ ಸರಿಪಡಿಸಿಕೊಳ್ಳಬಹುದು. ಫೆರಸ್ ಸಲ್ಫೇಟ್, ಫೆರಸ್ ಫ್ಯೂಮರೇಟ್, ಫೆರಸ್ ಗ್ಲುಕೊನೇಟ್ ಎಂಬುವಂತಹ ಔಷಧಗಳನ್ನು ರಕ್ತಹೀನತೆಗೆ ಚಿಕಿತ್ಸೆಯಾಗಿ ಬಳಸುತ್ತಾರೆ. ಕೆಂಪುರಕ್ತಕಣಗಳು ಉತ್ಪತ್ತಿಯಾಗಲು ಕಬ್ಬಿಣಾಂಶದ ಜೊತೆಗೆ ಫೋಲಿಕ್ ಆಸಿಡ್ ಮತ್ತು ವಿಟಮಿನ್ ಬಿ ಕೂಡ ಬೇಕು. ಹೀಗಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ವಿತರಿಸುವ ಐರನ್ ಮತ್ತು ಫೋಲಿಕ್ ಆಸಿಡ್ (IFA) ಮಾತ್ರೆಗಳನ್ನು ಬಿಸಾಡದೆ ಅಗತ್ಯವಾಗಿ ಉಪಯೋಗಿಸಿಕೊಳ್ಳಬೇಕು.

ಅಗತ್ಯ ಕಂಡರೆ ವೈದ್ಯರು ಇಂಜೆಕ್ಷನ್ ಮೂಲಕವು- ತೀವ್ರ ರಕ್ತಹೀನತೆಯಿಂದ ಬಳಲುವ ರೋಗಿಗೆ ರಕ್ತನೀಡುವ ಮೂಲಕವು ಚಿಕಿತ್ಸೆ ನೀಡುತ್ತಾರೆ.

8. ಆಹಾರದ ಮೂಲಕ ರಕ್ತಹೀನತೆಯನ್ನು ತಡೆಗಟ್ಟಬಹುದೆ?

ನಮ್ಮ ದೇಶದಲ್ಲಿ ಆಹಾರದ ಕೊರತೆಯೇ ರಕ್ತಹೀನತೆಗೆ ಪ್ರಮುಖ ಕಾರಣ. ಗಡ್ಡೆ–ಗೆಣಸುಗಳು, ಹಸಿರುಸೊಪ್ಪು, ಗಾಢಬಣ್ಣದ ತರಕಾರಿಗಳು, ಬೆಲ್ಲ, ಮಾಂಸ, ಮೀನು, ಮೊಟ್ಟೆ, ತಾಜಾ ಹಣ್ಣುಗಳ ಮೂಲಕ ಶರೀರಕ್ಕೆ ಅಗತ್ಯವಾದ ಕಬ್ಬಿಣಾಂಶವನ್ನು ಪೂರೈಸಲು ಸಾಧ್ಯ.

9. ರಕ್ತಹೀನತೆ ತಡೆಗಟ್ಟಲು ಮನೆಗಳಲ್ಲಿ ಅನುಸರಿಸ ಬಹುದಾದ ವಿಧಾನಗಳೇನು?

ಮನೆಯಿಂದ ಹೊರಹೋಗುವಾಗ ಚಪ್ಪಲಿಗಳನ್ನು ಧರಿಸುವುದು, ತರಕಾರಿ ಪದಾರ್ಥಗಳನ್ನು ಸಣ್ಣ–ಸಣ್ಣ ಹೋಳುಗಳಾಗಿ ಕತ್ತರಿಸದೆ ದಪ್ಪಗೆ ಹೋಳು ಮಾಡಿ ಕತ್ತರಿಸುವ ಮುಂಚೆ ತೊಳೆದು ಆದಷ್ಟು ಕುಕ್ಕರ್‌ಗಳಲ್ಲಿಯೇ ಬೇಯಿಸಿ ಉಪಯೋಗಿಸುವುದು. ಮೊಳಕೆ ಕಾಳುಗಳನ್ನು, ಸ್ಥಳೀಯವಾಗಿ ಲಭ್ಯವಾಗುವ ವಿವಿಧ ಸೊಪ್ಪುಗಳನ್ನು ಧಾರಾಳವಾಗಿ ಬಳಸುವುದು. ಸುಲಭವಾಗಿ ಲಭ್ಯವಾಗುವ ಪರಂಗಿಹಣ್ಣು, ಸೀಬೆಹಣ್ಣು, ನಲ್ಲಿಕಾಯಿ, ನೇರಳೆ ಹಣ್ಣು ಮುಂತಾದ ಸ್ಥಳೀಯ ಹಣ್ಣುಗಳನ್ನು ಮಕ್ಕಳು, ಮಹಿಳೆಯರು ಸಾಕಷ್ಟು ಸೇವಿಸುವುದು. ನುಗ್ಗೆಸೊಪ್ಪು–ನುಗ್ಗೆಕಾಯಿ, ಅಗಸೆಯನ್ನು ಹೇರಳವಾಗಿ ಬಳಕೆ ಮಾಡುವುದು. ದಿನವೊಂದಕ್ಕೆ ಕನಿಷ್ಠ 3 ಲೀಟರ್ ನೀರನ್ನು ಕುಡಿಯುವ ಅಭ್ಯಾಸವನ್ನು ರೂಢಿಸಿಕೊಳ್ಳುವುದು.

ಪರಂಗಿ, ಸೀಬೆ, ನುಗ್ಗೆ, ನೆಲ್ಲಿ ಮುಂತಾದವು ಸುಲಭದಲ್ಲಿ ಕೈಗೆಟುಕುವಂತೆ ಮಾಡಿಕೊಳ್ಳಲು ಮನೆಯ ಸುತ್ತಲಿನ ಜಾಗದಲ್ಲಿಯೇ ಇವುಗಳನ್ನು ನೆಟ್ಟು ಪೋಷಿಸಿಕೊಳ್ಳುವುದು.

10.ರಕ್ತಹೀನತೆಯನ್ನು ಪತ್ತೆಹಚ್ಚುವುದು ಹೇಗೆ ?

ಸುಸ್ತು, ಬಳಲಿಕೆ, ಕಣ್ಣು–ಅಂಗೈ–ಅಂಗಾಲುಗಳು ಬಿಳಚಿಕೊಂಡ ಲಕ್ಷಣಗಳು ಕಂಡುಬಂದ ಕೂಡಲೆ ವೈದ್ಯರನ್ನು ಭೇಟಿಯಾಗಿ ಸಲಹೆ ಪಡೆಯುವುದು, ರಕ್ತಪರೀಕ್ಷೆ ಮಾಡಿಸಿಕೊಂಡು ಹಿಮೋಗ್ಲೋಬಿನ್ ಪ್ರಮಾಣವನ್ನು ತಿಳಿದುಕೊಳ್ಳುವುದು.

ಹಿಮೋಗ್ಲೋಬಿನ್ ಪ್ರಮಾಣವು 8 ಗ್ರಾಂಗಳಿಗಿಂತ ಕಡಿಮೆಯಿದ್ದಲ್ಲಿ ತೀವ್ರತರ ರಕ್ತಹೀನತೆಯೆಂದು 8–10 ಗ್ರಾಂಗಳಿದ್ದಲ್ಲಿ ಮಧ್ಯಮ ಸ್ಥಿತಿಯದ್ದೆಂದು 10 ರಿಂದ 11 ಗ್ರಾಂಗಳಿದ್ದರೆ ಸಾಧಾರಣಾ ರಕ್ತಹೀನತೆಯೆಂದು ತಿಳಿಯಬೇಕು. ಅದಕ್ಕೆ ತಕ್ಕಂತೆ ಚಿಕಿತ್ಸೆ ಪಡೆಯಬೇಕು. ನಮ್ಮ ರಾಜ್ಯದಲ್ಲಿ ಶೇ. 40 ರಷ್ಟು ಮಹಿಳೆಯರು ತೀವ್ರತೆರನಾದ ರಕ್ತಹೀನತೆಯಿಂದ ಬಳಲುತ್ತಿದ್ದಾರೆಂಬ ಅಂದಾಜಿದೆ.

- ನೀವು ಏಕೆ ಹಿಮೋಗ್ಲೋಬಿನ್ ಪರೀಕ್ಷೆ ಮಾಡಿಸಬಾರದು?
- ಇದು ಸರ್ಕಾರಿ ಆಸ್ಪತ್ರೆಗಳಲ್ಲಿ ಉಚಿತವಾಗಿ ಐದೇ ನಿಮಿಷದಲ್ಲಿ ಮಾಡಿಸಬಹುದಾದ ಪರೀಕ್ಷೆ.


ಎಷ್ಟು ಸಾರಿ ಛೀಮಾರಿ ಹಾಕಿದರೇನು ನ್ಯಾಯಾಲಯ ? ಶೌಚ ಗುಂಡಿ ಸ್ವಚ್ಛ ಮಾಡಲು ಯಂತ್ರ ಖರೀದಿಸುವುದಿಲ್ಲಯ್ಯ!

ಅತ್ತ ಶೌಚಗುಂಡಿಯೊಳಗೆ ಬಿದ್ದು ಸಾಯುತ್ತಲೇ ಇರುವ ದಲಿತರೂ, ಇತ್ತ ಶಿಕ್ಷಣದ ಕೇಸರೀಕರಣ ಮಾಡಿ ಎನ್ನುವ ಬಿಜೆಪಿ ರಾಜ್ಯಾಧ್ಯಕ್ಷರೂ



ಆರ್.ರಾಮಕೃಷ್ಣ

ಬೆಂಗಳೂರು ಮಹಾನಗರದ ಒಳಚರಂಡಿ ವ್ಯವಸ್ಥೆಯ ಭಾಗವಾದ 2.5 ಲಕ್ಷ ಶೌಚ ಗುಂಡಿಗಳನ್ನು ಸ್ವಚ್ಛ ಮಾಡಲು –ಅಂದರೆ 'ಮ್ಯಾನ್ ಹೋಲ್' ಎಂದು ಕರೆಯಲಾಗುವ ಈ ಗುಂಡಿಗಳೊಳಗೆ ಮನುಷ್ಯರು ಇಳಿದು ಕೆಲಸ ಮಾಡಬೇಕಾದ ಅಮಾನವೀಯ ಪರಿಸ್ಥಿತಿಯನ್ನು ತಪ್ಪಿಸಲು ಅಗತ್ಯವಾದ ಆಧುನಿಕ ಯಂತ್ರಗಳನ್ನು ಖರೀದಿ ಮಾಡಲು, ಎರಡು ವರ್ಷಗಳ ಹಿಂದೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯೊಂದರ ಆಧಾರದಲ್ಲಿ ರಾಜ್ಯ ಹೈಕೋರ್ಟ್ ರಾಜ್ಯ ಸರ್ಕಾರಕ್ಕೆ ಸೂಚಿಸಿ ಗಡುವು ನೀಡಿತ್ತು. ಸರ್ಕಾರ ಗಡುವಿನಲ್ಲಿ ಆ ಕೆಲಸ ಮಾಡಲಿಲ್ಲ. ಅದನ್ನು ಗಮನಿಸಿದ ನ್ಯಾಯಾಲಯ ಸರ್ಕಾರಕ್ಕೆ ಛೀಮಾರಿ ಹಾಕಿ ಎಚ್ಚರಿಕೆ ನೀಡಿತು. 2011 ರ ಜುಲೈ ತಿಂಗಳಿನಲ್ಲಿ ಈ ಸಂಬಂಧ ನ್ಯಾಯಾಲಕ್ಕೆ ಮಾತು ಕೊಟ್ಟ ಸರ್ಕಾರ 6 ತಿಂಗಳ ಒಳಗಾಗಿ ಈ ಕೆಲಸಕ್ಕೆ ಅಗತ್ಯವಾದ 48 ಯಂತ್ರಗಳನ್ನು ಖರೀದಿಸುವುದಾಗಿ ಹೇಳಿತು. ಪೌರ ಕಾರ್ಮಿಕರಾಗಿ ಈ ರೀತಿಯ ಕೆಲಸ ಮಾಡುವವವರು ಶೇ. 99 ಅಥವಾ ಶೇ. 100 ರಷ್ಟು ದಲಿತರು ಅಂತ ಘಂಟಾಘೋಷವಾಗಿ ಹೇಳಬಹುದು. ನೂರಾರು, ಸಾವಿರಾರು ವರ್ಷಗಳ ಕಾಲದಿಂದ ಈ ಕೆಲಸಗಳನ್ನು ನಮ್ಮ ಸಮಾಜ ಅಸ್ಪೃಶ್ಯ ದಲಿತರ ಮೇಲೆ ಈ ಕೆಲಸಗಳನ್ನು ಹೇರಿಕೊಂಡು ಬಂದಿದೆ. ಹೇಗೂ, ದಲಿತರಲ್ಲವೇ ? ಅವರು ಶೌಚಾಲಯ ಗುಂಡಿಯೊಳಗೆ ಬಿದ್ದು ಸತ್ತರೇನು ? ಹಾಗೇ ಉಪವಾಸದಿಂದ ಹಾಳು ಬಾವಿಯಲ್ಲಿ ಬಿದ್ದು ಸತ್ತರೇನು ? ಈ ಶೌಚ ಗುಂಡಿಗಳಲ್ಲಿ ಉಸಿರುಗಟ್ಟಿ ಇತ್ತೀಚೆಗೆ ಹಲವಾರು ಜನ ಪ್ರಾಣ ಕಳೆದು ಕೊಂಡಿದ್ದಾರೆ. ದಲಿತರು ಈ ಗುಂಡಿಗಳಲ್ಲಿ ಬಿದ್ದು ಸತ್ತರೆ ಹತ್ತಾರು, ನೂರಾರು ಮಠಾಧೀಶರು ಜಾತಿ ಗುಂಪು ಕಟ್ಟಿಕೊಂಡು ಬೆಂಗಳೂರಿನ ಟೌನ್ ಹಾಲ್ ಮುಂದೆ ಸೇರಿ, ಸರ್ಕಾರದ ವಿರುದ್ಧ ಗುಟುರು ಹಾಕುತ್ತಾರೆಯೇ ? ಇಲ್ಲವಲ್ಲ.



ಸರ್ಕಾರ ಇಲ್ಲಿಯವರೆಗೆ ಖರೀದಿಸಿರುವುದು ಕೇವಲ 4 ಯಂತ್ರಗಳನ್ನು ಮಾತ್ರ. ಅವನ್ನು ಕೂಡ ಸಂಪೂರ್ಣವಾಗಿ ಬಳಸುತ್ತಿಲ್ಲ ಎಂಬ ವರದಿಗಳಿವೆ. ದಲಿತರ ಬದುಕಿನ ಹೀನಾಯ ಪರಿಸ್ಥಿತಿಯಲ್ಲಿ ಬದಲಾವಣೆ ತರಬೇಕು ಎಂಬ ಕಾಳಜಿ, ಬದ್ಧತೆ ಇಲ್ಲದೇ ಹೋದರೆ ಈಗ ಏನಾಗಿದೆಯೋ ಅದು ಬಿಟ್ಟು ಬೇರೇನೂ ಆಗಲು ಸಾಧ್ಯವಿಲ್ಲ. ಮನುಸ್ಮೃತಿ ಅಚಂದ್ರಾರ್ಕ ಎಂದು ಸಾರುವ ಸಂಘ ಪರಿವಾರದ ನೆಚ್ಚಿನ ಚಿಂತಕ ರಾಮಾಜೋಯಿಸರಾಗಲೀ, ಈಗೀಗ 'ಹಿಂದೂ ಸಂಸ್ಕೃತಿಗೆ ಧಕ್ಕೆ ಬಂದಾಗಲೆಲ್ಲ' ಹೋರಾಟದ ಅಂಗಳಕ್ಕಿಳಿದು ಸಮರ ಸಾರುವ ಚಿ.ಮೂ. ಅವರಾಗಲೀ, ಜಗದ್ಗುರು ಪೇಜಾವರೇಶ್ವರ ಸ್ವಾಮಿಗಳಾಗಲೀ ಅಥವಾ ಆರೆಸ್ಸೆಸ್ ಹಿರಿಯರಾದ ಮೈ.ಚ. ಜಯದೇವ, ರಾಮಣ್ಣಗಳಾಗಲಿ, ಭಜರಂಗಿ ಪಡೆಯ ಹಿರಿಕಿರಿ ಕಟ್ಟಾಳುಗಳಾಗಲೀ ಈ ಬಗ್ಗೆ ಯಾವ ಸೊಲ್ಲನ್ನೂ ಎತ್ತುವುದಿಲ್ಲ ಎನ್ನುವದು ಖಚಿತವಾದ್ದರಿಂದ ರಾಜ್ಯ ಬಿಜೆಪಿ ಸರ್ಕಾರ ಎಂದಿನಂತೆ ನೆಮ್ಮದಿಯಾಗಿ ತನ್ನ 'ರಾಜ್ಯಾಭಿವೃದ್ಧಿ' ಕಾರ್ಯವನ್ನು ಸಾಂಗವಾಗಿ ಮುಂದುವರೆಸಿ ಕೊಂಡು ಹೋಗಬಹುದು. ಬಿಜೆಪಿ ಸರ್ಕಾರದ ತಪ್ಪನ್ನು ಗುರುತಿಸಿ ಕಿವಿ ಹಿಂಡಿ ಸರಿದಾರಿಗೆ ತರುವ ಜವಾಬ್ದಾರಿ ಹೊಂದಿರುವ ಬಿಜೆಪಿ ರಾಜ್ಯಾಧ್ಯಕ್ಷ ಕೆ.ಎಸ್. ಈಶ್ವರಪ್ಪನವರು ಶಿಕ್ಷಣದ ಕೇಸರೀಕರಣದ ಪ್ರಶ್ನೆಯಲ್ಲಿ 'ಜೈಲ್ ಭರೋ' ಕಾರ್ಯಕ್ರಮದ ಸ್ಕೆಚ್ ಹಾಕುವುದರಲ್ಲಿ ಬ್ಯುಸಿ ಇರುವುದರಿಂದ ಅವರು ಈ ವಿಷಯದಲ್ಲಿ ಸರ್ಕಾರಕ್ಕೆ ಯಾವ ಕಿರಿಕಿರಿಯನ್ನೂ ಮಾಡುವುದಿಲ್ಲ ಎಂಬುದು ಕೂಡ ಖಚಿತವಾಗಿದೆ. ಇನ್ನು 'ಹಿಂದೂ ರಾಷ್ಟ್ರ' ನಿರ್ಮಾಣ ಕಾರ್ಯಕ್ಕೆ ಅಡ್ಡಿಯೇನು ?

ಕೇಸರೀಕರಣ ಮುಂದುವರಿಯಲಿ...!! ??

ಕರ್ನಾಟಕದಲ್ಲಿ ಶಾಲೆಗಳು ಆರಂಭವಾಗಿ ತಿಂಗಳೇ ಕಳೆಯುತ್ತ ಬಂದರೂ ಶಾಲಾ ಮಕ್ಕಳಿಗೆ ಅಗತ್ಯವಾದ ಪಠ್ಯ ಪುಸ್ತಕಗಳು ದೊರೆಕುತ್ತಿಲ್ಲ. ಸಮಾಜ ವಿಜ್ಞಾನ, ಸಮಾಜ ವಿಜ್ಞಾನ, ಕನ್ನಡ ಭಾಷೆ, ಗಣಿತ , ಪರಿಸರ ಅಧ್ಯಯನ ಮುಂತಾದ ಪಠ್ಯಗಳ ಕೊರತೆ ಕಾಡುತ್ತಿದೆ. ಪಾಠ ಕಲಿಯುವ ಮಕ್ಕಳು ಪಠ್ಯ ಪುಸ್ತಕಗಳಿಲ್ಲದೇ ಪುಸ್ತಕ ಇರುವವರಿಂದ ತೆಗೆದುಕೊಂಡು ಜೆರಾಕ್ಸ್ ಮಾಡಿಸಿಕೊಂಡು ಓದಬೇಕಾದ ದುಸ್ಥಿತಿ ಇದೆ. ಆದರೆ ಕರ್ನಾಟಕ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದ ಭಾರತೀಯ ಜನತಾ ಪಕ್ಷದ ರಾಜ್ಯ ಘಟಕದ ಅಧ್ಯಕ್ಷರಾದ ಕೆ.ಎಸ್. ಈಶ್ವರಪ್ಪನವರಿಗೆ ಈ ಬಗ್ಗೆ ಯಾವ ಚಿಂತೆಯೂ ಇಲ್ಲ. ಅವರು ಯಾವುದೋ ಶಾಲಾ ಸಮಾರಂಭದಲ್ಲಿ ಮಾತನಾಡುತ್ತಾ ಕರ್ನಾಟಕ ರಾಜ್ಯದ ಪಠ್ಯ ಶಾಲೆಗಳ ಹಸರೀಕರಣ ನಡೆಸಿ, ಪಠ್ಯ ಪುಸ್ತಕಗಳ ಕೇಸರೀಕರಣವನ್ನು ಮುಂದುವರೆಸಿ ಎಂದು ರಾಜ್ಯದ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ವಿಶ್ವೇಶ್ವರ ಹೆಗಡೆ• ಕಾಗೇರಿಯವರಿಗೆ ಕರೆ ನೀಡಿದ್ದಾರೆ. ಶಿಕ್ಷಣದ ಕೇಸರೀಕರಣ ಆರೆಸ್ಸೆಸ್–ಬಿಜೆಪಿಗಳ ಅತ್ಯಂತ ಪ್ರಿಯವಾದ ಅಜೆಂಡಾ. ಜನರನ್ನು ದೇಶಪ್ರೇಮ, ಸ್ವದೇಶಿ ಸಂಸ್ಕೃತಿ ....ಇತ್ಯಾದಿ ಹೆಸರಿನಲ್ಲಿ ಮತಾಂಧ ಭಾವನೆಗಳ ಆಧಾರದಲ್ಲಿ ಕೆರಳಿಸಿ, ವಿಭಜಿಸಿ ಅಸಮಾನತೆ, ಅನ್ಯಾಯದ ಶೋಷಕ ಸಾಮಾಜಿಕ–ಆರ್ಥಿಕ ವ್ಯವಸ್ಥೆಯನ್ನು ಸಮಾಜದ ಮೇಲೆ ಹೇರುವ ಪಿತೂರಿಗೆ ಅದು ಅಗತ್ಯ ಎಂಬುದು ಅವರಿಗೆ ಗೊತ್ತು.

ಇದಲ್ಲದೆ ರಾಜ್ಯದಲ್ಲಿ ನಿರಂತರ ಹಗರಣಗಳು, ಭೀಕರ ಲೂಟಿಕೋರತನದಲ್ಲಿ ಮುಳುಗಿರುವ ರಾಜ್ಯ ಬಿಜೆಪಿ ಸರ್ಕಾರದ ಅಸಹ್ಯಕರ ಮುಖವನ್ನು ಜನರಿಗೆ ಕಾಣದಂತೆ ಮರೆಮಾಚಲು ಶಿಕ್ಷಣದ ಕೇಸರೀಕರಣದ ಅಜೆಂಡಾ ನೆರವಿಗೆ ಬರಬಹುದು ಅಂತ ಈಶ್ವರಪ್ಪನವರಿಗೆ ಅನಿಸಿರಬಹುದು. ಆದರೆ ರಾಜ್ಯದ ಜನರಿಗೆ ಶಿಕ್ಷಣದ ಕೇಸರೀಕರಣದ ಯಾವ ಅಗತ್ಯವೂ ಇಲ್ಲ. ಅಸಲಿಗೆ ಬಿಜೆಪಿ ಸರ್ಕಾರವೇ ಅಗತ್ಯವಿಲ್ಲ. ಈ ಸರ್ಕಾರದ ಎಷ್ಟೋ ಜನ ಸಚಿವರುಗಳಿಗೆ ಸರಿಯಾದ ಜಾಗವೆಂದರೆ ಅದು ಪರಪ್ಪನ ಅಗ್ರಹಾರ. ಬಿಜೆಪಿ ಸರ್ಕಾರವನ್ನು ತೊಲಗಿಸುವ ನಿಟ್ಟಿನಲ್ಲಿ ಜನ

ಪುಟ 12 ಕ್ಕೆ

ಸಕಾಲ... ಅಹಾ ಸಕಾಲ

ಬಿಜೆಪಿ ಸರ್ಕಾರದ ಸಚಿವರು, ಸರಿಯಾಗಿ ವಿಧಾನ ಸೌಧಕ್ಕೇ ಬರುವುದಿಲ್ಲ. ಆಡಳಿತಕ್ಕೆ ಸಂಬಂಧಿಸಿದ ನಾನಾ ಕಡತಗಳನ್ನು ಬೇಗ ಬೇಗನೆ ಇತ್ಯರ್ಥ ಮಾಡುವುದಿಲ್ಲ ಎಂಬುದು ಈ ರಾಜ್ಯ ಬಿಜೆಪಿ ಸರ್ಕಾರದ ಹಳೆಯ ಖಾಯಿಲೆ. ಆದರೆ ಈ ಮಧ್ಯೆ ಕೆಲವು ದಿನ ಸರ್ಕಾರದ ಕೆಲವು ಸಚಿವರ ಕಡತ ಯಜ್ಞದ ಕೆಲಸ ಬಹಳ ವೇಗವಾಗಿ ನಡೆದು ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಂಡಿರುವ ವಿಷಯ ಇತ್ತೀಚೆಗೆ ಹೊರಬಿದ್ದಿದೆ.

ಹೊಸ ಹಣಕಾಸು ವರ್ಷದ ಅನುದಾನ, ಯೋಜನೆಗಳಿಗೆ ಸಂಬಂಧಿಸಿ ಲೇಖಾನುದಾನ ಸಿಕ್ಕ ಒಂದೂವರೆ ತಿಂಗಳ ನಂತರವೂ ಚುರುಕುಗೊಳ್ಳದ ಜಾರಿ ಪ್ರಕ್ರಿಯೆ ಮೇ ಕೊನೆಯ ಹೊತ್ತಿಗೆ ದಿಡೀರ್ ದುರುಕು ಗೊಂಡು ಬಿಟ್ಟಿತು. ಕಾರಣ ?? ಈ ಕಾರಣವೇ ತುಂಬಾ ಸ್ವಾರಸ್ಯಕರವಾದುದು.

ಯಡಿಯೂರಪ್ಪನವರು ಭಿನ್ನಮತೀಯ ತೋಡಿ ರಾಗವನ್ನು ಹಾಡುತ್ತ ಬಿಜೆಪಿ ಪಕ್ಷವನ್ನು, ಅದರ ಅಖಿಲ ಭಾರತ ಮುಖಂಡರನ್ನು ಯದ್ವ ತದ್ವಾ ಟೀಕಿಸತೊಡಗಿದ ನಂತರ ಈ ರೀತಿ ಆಡಳಿತ ಚುರುಕುಗೊಂಡಿದೆ.

ಮುಳುಗುವ ಹಡಗಿನಿಂದ ಮೊದಲು ಇಲಿಗಳು ಹೊರಬಿದ್ದು ಓಡಲು ಯತ್ನಿಸುತ್ತವಂತೆ. ಬಿಜೆಪಿ ಸರ್ಕಾರ ಅನ್ನುವ ಹಡಗು ಬಹುತೇಕ ಮುಳುಗುತ್ತಿದೆ ಎಂದು ಅನಿಸಿದಾಗ ಯಡಿಯೂರಪ್ಪ ಬಣದ ಉಮೇಶ್ ಕತ್ತಿ, ಉದಾಸಿ, ಬೊಮ್ಮಾಯಿ, ರೇಣುಕಾಚಾರ್ಯ ಮುಂತಾದ ಸಚಿವರೆಲ್ಲಾ ತಮ್ಮ ಕಚೇರಿ ಮೇಲೆ ದಾಳಿ ಇಟ್ಟು ಈ ಪರಿ ಕೆಲಸ ಮಾಡಿದರಂತೆ.

ಹುಚ್ಚನ ಮದುವೆಯಲ್ಲಿ ಉಂಡವನೇ ಜಾಣ ಅನ್ನೋ ಗಾದೆ ಮಾತು ನೆನಪಾಯಿತಾ ? ಪಾಪ ಯಡಿಯೂರಪ್ಪನವರ ಬಣದ ಸಚಿವರಿಗೂ ಅದೇ ಗಾದೆ ನೆನಪಾಗಿದೆ ಎಂದು ಕಾಣುತ್ತದೆ; ಏನು ಮಾಡುವುದು. ಮೇ ಕೊನೆವಾರದಲ್ಲಿದ್ದ ಸ್ಥಿತಿಯೇ ಈಗ ಮತ್ತೊಮ್ಮೆ ಎದುರಾಗಿದೆ. ಈಗಲೂ ಆಡಳಿತ ಚುರುಕಾಗುತ್ತದೇನೋ ನೋಡಬೇಕು. ಪಾಪ ಯಾವ ಯಾವ 'ಡೀಲಿಂಗ್' ಗಳನ್ನು ಅಂತಿಮಗೊಳಿಸಿ 'ಕ್ಲಿಂಚ್' ಮಡಬೇಕಾಗಿದೆಯೋ ? ಏನೋ ?

ಸಮರ್ಥ ಸಂಸದ, ಜನಪರ ನಾಯಕ ಕಾಂ. ದೀಪಂಕರ್ ಮುಖರ್ಜಿ ನಿಧನ


ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್(ಸಿಐಟಿಯು) ನ ಅಖಿಲ ಭಾರತ ಕಾರ್ಯದರ್ಶಿಗಳು ಹಾಗೂ ಮಾಜಿ ರಾಜ್ಯ ಸಭಾ ಸದಸ್ಯರೂ ಆದ ದೀಪಂಕರ್ ಮುಖರ್ಜಿಯವರು ಜೂನ್ 18 ಬೆಳಗ್ಗೆ 7.40 ಕ್ಕೆ ದೆಹಲಿಯಲ್ಲಿ ನಿಧನರಾದರು.

ಅವಿವಾಹಿರಾಗಿದ್ದುಕೊಂಡೆ ದುಡಿಯುವ ವರ್ಗಕ್ಕಾಗಿ ತನ್ನನ್ನು ಅರ್ಪಣೆ ಮಾಡಿಕೊಂಡಿದ್ದ ದೀಪಂಕರ ಮುಖರ್ಜಿ ಅತ್ಯಂತ ಸರಳ, ಸ್ನೇಹ ಜೀವಿಯಾಗಿದರು. ದೀಪಂಕರ್ ಮುಖರ್ಜಿಯವರ ನಿಧನ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷಕ್ಕೆ ಒಂದು ದೊಡ್ಡ ನಷ್ಟ ಎಂದು ಸಿಪಿಐ(ಎಂ) ಅಖಿಲ ಭಾರತ ಕಾರ್ಯದರ್ಶಿ ಪ್ರಕಾಶ್ ಕಾರಟ್ಟ ಕಂಬನಿ ಮಿಡಿದಿದ್ದಾರೆ. ಬೆಳಗಾವಿ ನಗರದಲ್ಲಿ ನಡೆದ ಸಿಐಟಿಯು ರಾಜ್ಯ ಸಮಿತಿ ಸಭೆಯು ಮೌನ ಆಚರಿಸುವ ಮೂಲಕ ಶ್ರದ್ಧಾಂಜಲಿ ಸಲ್ಲಿಸಿತು. ಸಭೆಯಲ್ಲಿ ಹಾಜರಿದ್ದ ಸಿಐಟಿಯು ಅಖಿಲ ಭಾರತ ಅಧ್ಯಕ್ಷರಾದ ಎ.ಕೆ. ಪದ್ಮನಾಭನ್, ಸಿಐಟಿಯು ರಾಜ್ಯ ಅಧ್ಯಕ್ಷರಾದ ವಿಜೆಕೆ ನಾಯರ್ ಹಾಗೂ ರಾಜ್ಯ ಪ್ರಧಾನ ಕಾರ್ಯದರ್ಶಿ ಎಸ್. ಪ್ರಸನ್ನಕುಮಾರ್ ಮಾತನಾಡಿ ದೀಪಂಕರ್ ಮುಖರ್ಜಿಯವರ ಕೊಡುಗೆಯನ್ನು ಸ್ಮರಿಸಿದರು.

ಪಿತ್ತಕೋಶ ಕ್ಯಾನ್ಸರ್‌ನಿಂದಾಗಿ ಇತ್ತೀಚೆಗೆ ಅವರು ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದರು. ಆದರೆ ಅದರಿಂದ ಪೂರ್ಣಗುಣವಾಗದ ಕಾರಣ 69 ವರ್ಷದ ದೀಪಂಕರ್ ಮುಖರ್ಜಿ ದೆಹಲಿಯ ಗಂಗಾ ರಾಮ್ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಬನಾರಸ್ ಹಿಂದೂ ವಿಶ್ವವಿದ್ಯಾಲಯದಿಂದ ಇಲೆಕ್ಟ್ರಿಕಲ್ ಎಂಜೀನೀಯರ್ ಪದವಿಧರಾಗಿದ್ದ ದೀಪಂಕರ್ ಕೇಂದ್ರ ಸರ್ಕಾರಿ ಸ್ವಾಮ್ಯದ ಫರ್ಟಿಲೈಸರ್ಸ್ ಕಂಪನಿಯಲ್ಲಿ ಅಧಿಕಾರಿಯಾಗಿ ಕೆಲಕಾಲ ಕೆಲಸ ಮಾಡಿದರು. ನಂತರ ಸಿಐಟಿಯುನ ಪೂರ್ಣಾವಧಿ ಕಾರ್ಯಕರ್ತರಾಗಿ ಪಶ್ಚಿಮ ಬಂಗಾಳದಿಂದ ಕೆಲಸ ಆರಂಭಿಸಿದ ಅವರು ನಂತರ ದೆಹಲಿಯಲ್ಲಿ ಸಿಐಟಿಯು ಅಖಿಲ ಭಾರತ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು.

ಪುಟ 14ಕ್ಕೆ



....ದಾನಶೂರತೆಯ ಮೆರೆದಾಟ!

ಪುಟ 7 ರಿಂದ

ತಾನೇ? .. ಎಷ್ಟೇ ದಾನಶೂರತೆ ಮೆರೆದರೂ ಇದನ್ನು ಪೂರೈಸಲು ಸಾಧ್ಯವಿಲ್ಲ. ಬದಲಿಗೆ, ನಮ್ಮ ಸ್ವಂತ ಜನಗಳ ಮತ್ತು ದೇಶೀ ಆರ್ಥಿಕದ ಹಿತಗಳನ್ನು ಬಲಿಗೊಡುವ ದಾನಶೂರತೆ ಯಾವ ಕಾರಣಕ್ಕೂ ಒಪ್ಪತಕ್ಕಂತದಲ್ಲ.

ಸಲಹೆ ಕೇಳಲು ಬಂದವರಲ್ಲ

ಅಷ್ಟೇ ಅಲ್ಲ, ಇಂತಹ ಘನ ಕಾಣಿಕೆಗಳು ಯುರೋ ವಲಯಕ್ಕೆ ಪುನಶ್ಚೇತನದಲ್ಲಿ ನೆರವಾಗುತ್ತವೆ ಎಂಬ ನಿರೀಕ್ಷೆಗಳು ತರ್ಕಬದ್ಧವೆನಿಸುವುದಿಲ್ಲ. ಯುರೋಪಿಯನ್ ಒಕ್ಕೂಟದ ಸರಕಾರೀ ಮುಖ್ಯಸ್ಥರು ಮುಂದಿನ ವಾರ ಸಭೆ ಸೇರಲಿದ್ದಾರೆ, ಅಲ್ಲಿ ತಮ್ಮ ಸಮಸ್ಯೆಗಳ ಬೆಳೆಯುತ್ತಿರುವ ಪಟ್ಟಿಯನ್ನು ಎದುರಿಸುವುದು ಹೇಗೆ ಎಂದು ಚರ್ಚಿಸಲಿದ್ದಾರೆ. ಗ್ರೀಸಿನಲ್ಲಿ ಅದನ್ನು ಆರ್ಥಿಕವಾಗಿ ಪಾರು ಮಾಡಲು ಯುರೋಪು ರೂಪಿಸಿರುವ ಕಾರ್ಯವ್ಯೂಹವನ್ನು ಜಾರಿ ಮಾಡುವ ಪಣ ತೊಟ್ಟಿರುವ ಮಧ್ಯ–ಬಲಪಂಥೀಯ ನ್ಯೂ ಡೆಮಾಕ್ರಸಿ ಪಾರ್ಟಿ ವಿಜಯ ಗಳಿಸಿದ್ದರೂ, ಗ್ರೀಸಿನ ಆರ್ಥಿಕ ಕೃತಕ ಉಸಿರಾಟದಲ್ಲೇ ಮುಂದುವರೆಯಬೇಕಾಗುತ್ತದೆ. ಸ್ಪೇನ್, 100 ಬಿಲಿಯ ಯುರೋಗಳ ಪಾರುಯೋಜನೆಯ ನಂತರವೂ, ತನ್ನ ಸಾಲಪಾವತಿ ಶಕ್ತಿಯ ಎಲ್ಲೇ ಮೀರಿ ದಿವಾಳಿಯತ್ತ ಕಾಲಿಟ್ಟಿದೆ. "ಮಾರುಕಟ್ಟೆಗಳು ಸ್ಪೇನಿನ ಬ್ಯಾಂಕ್ ಕೇಂದ್ರಿತ ಪಾರುಯೋಜನೆಯನ್ನು ಒಂದು ಬಸಿರಿನ ಸ್ಥಿತಿಯೆಂದು ಪರಿಗಣಿಸುತ್ತವೆ; ಭಾಗಶಃ ಬಸಿರು ಎಂಬುದಿಲ್ಲ" ಎಂದು ಸಾರ್ವಭೌಮ ಸಾಲಭೀತಿಯನ್ನು ಅಂದಾಜು ಮಾಡುವ ಒಂದು ಲಂಡನ್ನಿನ ಸಂಸ್ಥೆ ಹೇಳಿದೆ. ಇಟಲಿ ಈ ದಾರಿಯನ್ನು ಅನುಸರಿಸುವ ಮುಂದಿನ ದೇಶವಾಗುವಂತೆ ಕಾಣುತ್ತಿದೆ.

ಈ ನಡುವೆ, ಗ್ರೀಸಿಗೆ ಹೊಸ ನೆರವೇನೂ ಸಾಧ್ಯವಿಲ್ಲ ಎಂದು ಜರ್ಮನಿ ಹೇಳಿದೆ. " ಗ್ರೀಕ್ ಸರಕಾರ ವಚನಗಳನ್ನು ಪಾಲಿಸುತ್ತದೆ, ಪಾಲಿಸಲೇ ಬೇಕು. ನಮ್ಮ ಸುಧಾರಣಾ ಹೆಜ್ಜೆಗಳನ್ನು ಸಡಿಲಗೊಳಿಸಲಾಗದು" ಎಂದು ಜರ್ಮನಿಯ ಚಾನ್ಸಲರ್, ಅಂಜೆಲಾ ಮರ್ಕೆಲ್ ಜಿ–20 ಶೃಂಗಸಭೆಗೆ ಹೇಳಿದ್ದಾರೆ. ಈ ಹೆಜ್ಜೆಗಳೆಂದರೆ, ಗ್ರೀಸ್ ತನ್ನ 2013–14ರ ಬಜೆಟ್ ಗುರಿಗಳನ್ನು ಈಡೇರಿಸಲು 14.7 ಬಿಲಿಯ ಡಾಲರುಗಳನ್ನು ಹೆಚ್ಚುವರಿ ಉಳಿತಾಯವಾಗಿ ಎತ್ತಬೇಕು. ಅಂದರೆ ಅದರ ಖರ್ಚುಗಳಲ್ಲಿ, ಸರಕಾರೀ ಸಂಬಳ ಪಾವತಿ ಮೊತ್ತಗಳಲ್ಲಿ ಗಮನಾರ್ಹ ಕಡಿತವಲ್ಲದೆ, ಮುಖ್ಯವಾಗಿ ಸಾಮಾಜಿಕ, ಆರೋಗ್ಯಪಾಲನೆ ಮತ್ತು ಮಿಲಿಟರಿ ಖರ್ಚುಗಳಲ್ಲಿ ಭಾರೀ ಕಡಿತ ತರಬೇಕಾಗಿದೆ. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಗ್ರೀಸಿನ ದುಡಿಯುವ ಜನಗಳಿಗೆ ಇನ್ನಷ್ಟು ಅಸಹನೀಯ, ಹೊರಲಾರದ ಹೊರೆಗಳು ಕಾದಿವೆ.

ಜಿ–20 ಶೃಂಗಸಭೆಯಲ್ಲಿ ಬಿಕ್ಕಟ್ಟನ್ನು ಎದುರಿಸುವ ಕಾರ್ಯವ್ಯೂಹದ ಬಗ್ಗೆ ಯಾವುದೇ ಏಕೀಕೃತ ತಿಳಿವಿಲ್ಲದೆ, ಸೆಳೆತಗಳು ಸ್ಫೋಟಗೊಂಡು ಬಹಿರಂಗಕ್ಕೆ ಬಂದವು. ಯುರೋಪಿಯನ್ ಕಮಿಶನ್ ಅಧ್ಯಕ್ಷ ಜೋಸ್ ಮೇನ್ವಲ್ ಬರ್ರೋಸೊ, ಈ ಹಣಕಾಸು ಬಿಕ್ಕಟ್ಟಿನ ಮೂಲಗಳು ಅಮೆರಿಕಾದಲ್ಲಿನ ಅಪಾತ್ರ ಸಾಲ(ಸಬ್–ಪ್ರೈಮ್) ಮಾರುಕಟ್ಟೆಯಲ್ಲಿದ್ದು, ಯುರೋಪಿಯನ್ ಬ್ಯಾಂಕುಗಳಿಗೆ ಅದರ ಸೋಂಕು ತಗುಲಿದೆ ಎಂಬುದನ್ನು ಅಲ್ಲಿ ನೆರೆದಿದ್ದವರಿಗೆ ನೆನಪಿಸಿದರು. ಯುರೋಪಿಯನ್ನರು ಅಲ್ಲಿಗೆ ಬಂದಿರುವುದು "ಪ್ರಜಾಪ್ರಭುತ್ವದ ಮೇಲೆ ಅಥವ ಆರ್ಥಿಕವನ್ನು ಹೇಗೆ ನಿರ್ವಹಿಸಬೇಕು ಎಂಬುದರ ಮೇಲೆ ಪಾಠಗಳನ್ನು ಕೇಳಲು ಅಲ್ಲ" ಎಂದೂ ಅವರು ಹೇಳಿದರು. ಈ ಮಾತು ಭಾರತೀಯ ಪ್ರಧಾನ ಮಂತ್ರಿಗಳು ನೀಡಿದ ಸಲಹೆಯ ಬಗ್ಗೆ ಇರಬಹುದೇ ಎಂಬುದನ್ನು ಅವರೇ ಹೇಳಬೇಕು! ಏನೇ ಆಗಲಿ, ಭಾರತೀಯ ಆರ್ಥಿಕ ಉತ್ತಮಗೊಳ್ಳಬೇಕಾದರೆ, ಅದು ಅಂತರ್ರಾಷ್ಟ್ರೀಯ ಹಣಕಾಸು ಬಂಡವಾಳದ ಆದೇಶಗಳನ್ನು ಅನುಸರಿಸುವ ನವ–ಉದಾರವಾದಿ ಮಾನಸಿಕತೆಯನ್ನು ಕೈಬಿಟ್ಟು ನಮ್ಮ ದೇಶೀ ಬೇಡಿಕೆಗಳನ್ನು ಬಲಪಡಿಸಬಹುದಾದ ಮತ್ತು ದೇಶೀ ಆರ್ಥಿಕವನ್ನು ವಿಸ್ತರಿಸಬಹುದಾದ ಧೋರಣೆಗಳನ್ನು ಅನುಸರಿಸಿದರೆ ಮಾತ್ರ ಸಾಧ್ಯ.

ಬಿಜೆಪಿ ದರ್ಬಾರ್

ಪುಟ 11 ರಿಂದ

ಸಂದರ್ಭ ಸಿಕ್ಕಾಗ ಸರಿಯಾದ ತೀರ್ಪನ್ನೇ ಕೊಡಲಿದ್ದಾರೆ. ಶಿಕ್ಷಣದ ಕೇಸರೀಕರಣಕ್ಕಾಗಿ ತಾವು ಜೈಲಿಗೆ ಹೋಗಲೂ ಸಿದ್ಧ ಎಂದು ಈಶ್ವರಪ್ಪನವರು ಘೋಷಿಸಿದ್ದಾರೆ. ಈಶ್ವರಪ್ಪನವರು ತಮ್ಮ ಮತ್ತು ತಮ್ಮ ಬಂಧುಗಳ ಮೇಲಿರುವ ಭೂ ಅಕ್ರಮಗಳ ಪ್ರಕರಣವನ್ನು ಮೊದಲು ನೆನೆಸಿಕೊಳ್ಳಲಿ. ಅವರಿಗೆ ಅದರಲ್ಲಿ ಜೈಲಿಗೆ ಹೋಗುವ ಭಾಗ್ಯ ಮೊದಲು ಬರಬಹುದೇನೋ. ಈ ಹಗರಣ ಬಾನಾಗಡಿ ಕಾರಣಕ್ಕೆ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಳ್ಳಲು ಪಠ್ಯಗಳ ಕೇಸರೀಕರಣದ ಸಹಾಯ ಪಡೆಯಲು ಈಶ್ವರಪ್ಪನವರು ಯತ್ನಿಸಿದರೂ ಅದು ಬಹುಶಃ ಫಲಿಸುವುದಿಲ್ಲ.

★

ರಾಜ್ಯದ ಖಜಾನೆಗೆ ತೂತು ಕೊರೆದು ಖಾಸಗಿ ಖಜಾನೆ ತುಂಬಿಕೊಂಡ ಬಿಜೆಪಿ ನಾಯಕರ ಭ್ರಷ್ಟ ಹೊಲಸು ಮುಖ

ಡಾ. ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಪಕ್ಷದ ನೇತಾರ, ಕರ್ನಾಟಕ ರಾಜ್ಯದ ಮುಖ್ಯಮಂತ್ರಿಯಾಗಿದ್ದಾಗ ನಡೆದ ಹೀನಾಯ ಭ್ರಷ್ಟಾಚಾರದ ಅಸಹ್ಯಕರ ಮುಖವೊಂದು ಇದೀಗ ಸ್ಪಷ್ಟವಾಗಿ ಅನಾವರಣಗೊಳ್ಳುತ್ತಿದೆ. ಮೈಸೂರು ಮಿನರಲ್ಸ್ ಲಿ.ಯು ಜಿಂದಾಲ್ ಸಂಸ್ಥೆಯೊಂದಿಗೆ ಮಾಡಿಕೊಂಡಿದ್ದ ಕಬ್ಬಿಣದ ಅದಿರು ಪೂರೈಕೆ ಒಪ್ಪಂದದಿಂದ ರಾಜ್ಯ ಸರ್ಕಾರದ ಖಜಾನೆಗೆ 739 ಕೋಟಿ ರೂಪಾಯಿಗಳ ಅಗಾಧ ನಷ್ಟವಾಗಿದ್ದ ಹಿನ್ನೆಲೆಯ ಆಧಾರದಲ್ಲಿ ರಾಜ್ಯ ಸರ್ಕಾರ ಮತ್ತು ಜಿಂದಾಲ್ ಕಂಪನಿ ನಡುವೆ ನಷ್ಟ ವಸೂಲಿ ಸಂಬಂಧವಾಗಿ ಒಪ್ಪಂದವೊಂದು ಏರ್ಪಟ್ಟಿತ್ತು. ಸರ್ಕಾರ ನಷ್ಟ ವಸೂಲಿಗೆ ಕ್ರಮವಹಿಸಬೇಕಾಗಿತ್ತು. ಆದರೆ ನಂತರದ ರಾಜಕೀಯ ವಿದ್ಯಮಾನಗಳ ಹಿನ್ನೆಲೆಯಲ್ಲಿ ಸನ್ಮಾನ್ಯ ಯಡಿಯೂರಪ್ಪನವರು ಕರ್ನಾಟಕ ರಾಜ್ಯದ ಉಪಮುಖ್ಯಮಂತ್ರಿಗಳಾದರು (ಮತ್ತು ಆ ನಂತರ ಮುಖ್ಯ ಮಂತ್ರಿಗಳೂ ಆದರೆನ್ನಿ.) ಈ ಸೌಭಾಗ್ಯದ ಫಲ ರಾಜ್ಯಕ್ಕೆ ಸಂದದ್ದು ಹೀಗೆ. ನಷ್ಟ ವಸೂಲಿ ಬದಲಿಗೆ ನಷ್ಟ ವಸೂಲಿ ಒಪ್ಪಂದವನ್ನೇ ಮರು ಪರಿಷ್ಕರಿಸಲಾಯಿತು. ಜಿಂದಾಲ್ ಕಂಪನಿಯ ಪ್ರತಿನಿಧಿಗಳು ಯಡಿಯೂರಪ್ಪನವರ ಪುತ್ರಿಯನ್ನು ಭೇಟಿ ಮಾಡಿದ ಮೇಲೆ ಈ 'ಪವಾಡ' ಸಂಭವಿಸಿತು. ಜಿಂದಾಲ್ ಕಂಪನಿಗೆ ಸಹಾಯ ಮಾಡುವ ಸಲುವಾಗಿ ಘನ ಬಿಜೆಪಿ ಸರ್ಕಾರವು ಅದಿರು ರಫ್ತು ನಿಷೇಧ ಆದೇಶ ನೀಡಿತು. ಅಂದೇ, ಅದೇ ದಿನ ಯಡಿಯೂರಪ್ಪನವರ ಮಕ್ಕಳು–ಬಂಧುಗಳ ಒಡೆತನದ ಪ್ರೇರಣ ಟ್ರಸ್ಟ್‌ಗೆ ಜಿಂದಾಲ್ ಕಂಪನಿಯಿಂದ ಹಣ ಸಂದಾಯವಾಗುತ್ತದೆ. 2006 ರಿಂದ 2010 ರ ನಡುವೆ ಇದೇ ನಾಲ್ಕು ಬಾರಿ ಹಣ ಸಂದಾಯವಾಗುತ್ತದೆ. ಆ ಮೇಲೆ ಹಣವು ಯಡಿಯೂರಪ್ಪನವರು ಟ್ರಸ್ಟಿಯಾಗಿದ್ದ ಮತ್ತೊಂದು ಟ್ರಸ್ಟ್‌ಗೆ ವರ್ಗಾವಣೆಯಾಗುತ್ತದೆ. ಆಹಾ ಇದೂ ಕೂಡ 'ಪವಾಡ'ವೇ ಸೈ. ಈ ಪವಾಡಕ್ಕೆ ಸಂಬಂಧಿಸಿದ ಈ ಎಲ್ಲ ಮಾಹಿತಿಯನ್ನು ನ್ಯಾಯಾಲಯದಲ್ಲಿ ನೀಡಿರುವುದು ತನಿಖಾ ಸಂಸ್ಥೆ – ಸಿಬಿಐ. ನೋಡೋಣ ಈ ಪ್ರಕರಣದಲ್ಲಿ ಇನ್ನು ಏನೇನು ಮಾಹಿತಿಗಳು ಬಯಲಾಗುತ್ತವೋ ?

★

ಜನಶಕ್ತಿ
ಕನ್ನಡ ವಾರಪತ್ರಿಕೆ

ಜಿ–20 ರಲ್ಲಿ ಪ್ರಧಾನಿ ಮತ್ತದೇ 'ಉತ್ತೇಜನೆ', 'ಕಠಿಣ ಕ್ರಮ'ಗಳ ಭರವಸೆ



ವೇದರಾಜ ಎನ್.ಕೆ.

"ಇತರ ದೇಶಗಳಂತೆ ನಾವೂ ಕೂಡ 2008ರ ನಂತರ ಒಂದು ಉತ್ತೇಜನೆಗಾಗಿ ಹಣಕಾಸು ಕೊರತೆಗಳು ವಿಸ್ತರಿಸಲು ಬಿಟ್ಟೆವು. ನಾವೀಗ ಈ ವಿಸ್ತರಣೆಯಿಂದ ಹಿಂದೆಗೆಯು ವುದರ ಮೇಲೆ ಗಮನ ಕೇಂದ್ರೀಕರಿಸಿದ್ದೇವೆ. ಇದಕ್ಕೆ ಕಠಿಣ ನಿರ್ಣಯಗಳನ್ನು ಕೈಗೊಳ್ಳ ಬೇಕಾಗಿದೆ. ಅದರಲ್ಲಿ ಸಬ್ಸಿಡಿಗಳ ಕಡಿತವೂ ಸೇರಿದೆ. ಈ ಬಗ್ಗೆ ದೃಢ ನಿರ್ಧಾರ ಮಾಡಿದ್ದೇವೆ" ಎಂದು ಭಾರತದ ಪ್ರಧಾನ ಮಂತ್ರಿಗಳು ಮೆಕ್ಸಿಕೋದಲ್ಲಿ ನಡೆದಿರುವ ಜಿ–20 ದೇಶಗಳ ಏಳನೇ ಶೃಂಗ ಸಭೆಯಲ್ಲಿ ಹೇಳಿದ್ದಾರೆ. ಜತೆಗೇ, ಭಾರತದ ಬಗ್ಗೆ ಹೂಡಿಕೆದಾರರ 'ಭಾವನೆ'ಗಳಿಗೆ 'ಉತ್ತೇಜನೆ' ಕೊಡುವ ಕ್ರಮಗಳನ್ನೂ ಕೈಗೊಳ್ಳುವ ಭರವಸೆ ನೀಡಿದ್ದಾರೆ.


ಜಿ–20ರ ಈ ಶೃಂಗಸಭೆಯ ಆರಂಭದಲ್ಲಿ ಯುರೋಪಿಯನ್ ದೇಶಗಳನ್ನು, ಅವು ತಾವಾಗಿಯೇ ಒಂದು ದೊಡ್ಡ ಅವ್ಯವಸ್ಥೆ ತಂದುಕೊಂಡುದಲ್ಲದೆ, ಜಗತ್ತನ್ನೂ ಅದರೊಳಗೆ ಸಿಲುಕಿಸಿ ಈಗ ಬಡದೇಶಗಳಿಂದಲೂ ಸಹಾಯ ನಿರೀಕ್ಷಿಸುವ ಬಗ್ಗೆ 'ತರಾಟೆಗೆ ತೆಗೊಂಡರು' ಎನ್ನಲಾದ ಪ್ರಧಾನ ಮಂತ್ರಿಗಳು ಯುರೋಪಿಯನ್ ಒಕ್ಕೂಟದಲ್ಲಿ 'ಮಿತವ್ಯಯ'ದ ಕ್ರಮಗಳು ಮತದಾರರ ಆಕ್ರೋಶಕ್ಕೆ ಗುರಿಯಾಗಿರುವ ಹಿನ್ನೆಲೆಯಲ್ಲಿ ಕೇವಲ 'ಮಿತವ್ಯಯ'ವಷ್ಟೇ ಸಾಲದು, 'ಬೆಳವಣಿಗೆ'ಯೂ ಬೇಕು ಎಂದು ಅಲ್ಲಿ ನೆರೆದವರಿಗೆ ತಿಳಿಹೇಳಿದರಂತೆ.

ಅದಕ್ಕೇ ಒಂದೆಡೆ ಪಾಶ್ಚಿಮಾತ್ಯ ಹೂಡಿಕೆ ದ್ಧಾರರ 'ಭಾವನೆ'ಗಳಿಗೆ ಮಣೆ ಹಾಕಲು, ಅದರಿಂದ ಹೆಚ್ಚುವ ಹಣಕಾಸು ಕೊರತೆಯನ್ನು ತಡೆಯಲು ಜನಸಾಮಾನ್ಯರಿಗೆ ಕೊಡುವ 'ಸಬ್ಸಿಡಿ'ಗಳನ್ನು ಕಡಿತ ಮಾಡುವ 'ಕಠಿಣ ಕ್ರಮಗಳು'– ಯುರೋಪಿಯನ್ ಜನಸಾಮಾನ್ಯರ ಆಕ್ರೋಶಗಳಿಗೆ ಗುರಿಯಾಗಿರುವ 'ಮಿತವ್ಯಯ'ದ ಇನ್ನೊಂದು ಸ್ವರೂಪ. ಬಿಕ್ಕಟ್ಟು ತಂದವರಿಗೆ ಬಕ್ಷೀಸು, ಅದರ ಹೊರೆ ಹೊರುತ್ತಿರುವವರಿಗೆ ಮತ್ತಷ್ಟು ಹೊರೆ.

2011–12ರಲ್ಲಿ ಹಣಕಾಸು ಕೊರತೆ ಆರಂಭದ ಗುರಿಯಾದ 4.6 ಶೇ.ವನ್ನು ದಾಟಿ 5.8ಶೇ.ಕ್ಕೆ ಜಿಗಿದದ್ದು ಸಬ್ಸಿಡಿ ಮೊತ್ತ ಹೆಚ್ಚಿದುದಕ್ಕಿಂತ ಮಿಗಿಲಾಗಿ ತೆರಿಗೆ ಆದಾಯಗಳ ಇಳಿಕೆ ಯಿಂದಾಗಿ ಎಂದು ಸರಕಾರದ ಪರವಾಗಿ ಕೈವವರೂ ಹೇಳುತ್ತಿರುವಾಗ ಮತ್ತೆ ಅವೇ ಧೋರಣೆಗಳು–ಉಳ್ಳವರಿಗೆ ಉತ್ತೇಜನೆಗಳು, ಇಲ್ಲದವರಿಗೆ 'ಮಿತವ್ಯಯ'ದ ಕ್ರಮಗಳು– ಪರಿಸ್ಥಿತಿಯನ್ನು ಎಷ್ಟರ ಮಟ್ಟಿಗೆ ಸುಧಾರಿಸ ಬಲ್ಲವು? 5.3 ಶೇ.ಕ್ಕೆ ಕುಸಿದು, ಕಳೆದ ಒಂಭತ್ತು ವರ್ಷಗಳಲ್ಲೇ ಅತಿ ಕಡಿಮೆ ಜಿಡಿಪಿ ಬೆಳವಣಿಗೆ ದರವನ್ನು ದಾಖಲಿಸಿರುವ ಪರಿಸ್ಥಿತಿಯಲ್ಲಿ ಅದನ್ನು ಮತ್ತೆ 8–9ಶೇ.ಕ್ಕೆ ತರುವ ರಾಗ ಹಾಡುತ್ತಿರಲು ಸಾಧ್ಯವೇ?– ಮುಂದಿನ ಆರು ತಿಂಗಳಲ್ಲಿ 'ಸುಧಾರಣೆ'ಗಳನ್ನು ರಭಸದಿಂದ ನಡೆಸಿದರೆ ಸಾಧ್ಯ ಎಂಬ ನಂಬಿಕೆ ಇನ್ನೂ ಯುಪಿಎ–2 ಸರಕಾರಕ್ಕೆ ಇದ್ದಂತಿದೆ.

2ಜಿ ಹಗರಣವನ್ನೂ ಮೀರಿಸುವ ಕಲ್ಲಿದ್ದಲು ಹಗರಣ?

ನವ–ಉದಾರವಾದದ ಅಡಿಯಲ್ಲಿ ನೈಸರ್ಗಿಕ ಸಂಪನ್ಮೂಲಗಳ ಲೂಟಿಯ ಕತೆ. ಅನಂತ



ವಾಗಿರುವಂತೆ ಕಾಣುತ್ತಿದೆ. ಸಿಬಿಐ ಕಳೆದ ವಾರದಿಂದ ಕಲ್ಲಿದ್ದಲು ಗಣಿಗಳ ನೀಡಿಕೆಯಲ್ಲಿ ನಡೆದಿದೆಯೆನ್ನಲಾದ ಹಗರಣದ ತನಿಖೆ ಆರಂಭಿಸಿದೆ. ಈ ಹಗರಣವೂ ಸುದ್ದಿ ಯಾಗಿರುವುದು ದೇಶದ ಮಹಾ ಲೆಕ್ಕ ಪರಿಶೋಧನಾ ಅಧಿಕಾರಿಗಳ ಕಚೇರಿ (ಸಿಎಜಿ)ಯ ಒಂದು ವರದಿಯಿಂದ. 2004 ರಿಂದ 2009ರ ಅವಧಿಯಲ್ಲಿ, ಅಂದರೆ ಯುಪಿಎ–1 ಸರಕಾರದ ಅಧಿಕಾರಾವಧಿಯಲ್ಲಿ 155 ಕಲ್ಲಿದ್ದಲು ಗಣಿಗಳ ಬ್ಲಾಕುಗಳನ್ನು ಖಾಸಗಿಯವರಿಗೆ ಮತ್ತು ಸರಕಾರೀ ಕಂಪನಿ ಗಳಿಗೂ ಹಂಚಿದ್ದು ಈ ಹಂಚಿಕೆಯಲ್ಲಿನ ಅಪಾರದರ್ಶಕತೆಯಿಂದಾಗಿ ದೇಶದ ಬೊಕ್ಕಸಕ್ಕೆ 10.67 ಲಕ್ಷ ಕೋಟಿ ರೂ.ಗಳ ನಷ್ಟವಾಗಿದೆ ಎಂದು ತಿಳಿದು ಬಂದಿದೆ. ಅಂದರೆ 2ಜಿ ಹಗರಣದ ಆರು ಪಟ್ಟು!

ಇಲ್ಲಿಯೂ ಹಗರಣದ ವಿಧಿ–ವಿಧಾನ ಅದೇ, ಒಂದು ಬೆಲೆಬಾಳುವ ನೈಸರ್ಗಿಕ ಸಂಪನ್ಮೂಲ ವನ್ನು ಅತ್ಯಂತ ಅಗ್ಗದ ದರಗಳಲ್ಲಿ, ಅಥವ ಸುಮ್ಮನೇ ಹಾಗೆಯೇ ವಾಣಿಜ್ಯ ಲಾಭ ಗಳಿಕೆಗಾಗಿ ಕೊಟ್ಟು ಬಿಡುವುದು. ಇಂತಹ ನೀಡಿಕೆಗಳಿಂದ ಅಪಾರ ಲಾಭ ಗಳಿಸಿದ್ದು, 2ಜಿ ಹಗರಣದಂತೆಯೇ, ಬಹುದೊಡ್ಡ ಖಾಸಗೀ ಕಂಪನಿಗಳು, ಅವರ ಅಪಾರ ಲಾಭದ ಪ್ರಯೋಜನ ಈ ಸಂಪನ್ಮೂಲಗಳ ಮಾಲಕರಾದ ಈ ದೇಶದ ಜನಸಾಮಾನ್ಯರಿಗೆ ತಲುಪಿಯೇ ಇಲ್ಲ.

ಈ ಹಗರಣದ ಅವಧಿಯಲ್ಲಿ ಸ್ವತಃ ಯುಪಿಎ ಪ್ರಧಾನ ಮಂತ್ರಿಗಳೇ ಈ ಖಾತೆಯ ಮುಖ್ಯಸ್ಥರಾಗಿದ್ದುದು ಈ ಹಗರಣದ ಒಂದು ವೈಶಿಷ್ಟ್ಯ. ಇದಕ್ಕೆ ಪ್ರಧಾನ ಮಂತ್ರಿಗಳ ಪ್ರತಿಕ್ರಿಯೆ ಈ ನೀಡಿಕೆಯಲ್ಲಿ ಹಗರಣವೇನೂ ನಡೆದಿಲ್ಲೆಂಬ ವಿಶ್ವಾಸ ಮೂಡಿಸುವಲ್ಲಿ ವಿಫಲವಾಗಿರುವು ದರಿಂದ, ಈ ಬಗ್ಗೆ ಕೇಂದ್ರೀಯ ಜಾಗೃತಾ ಆಯೋಗ ಈ ಬಗ್ಗೆ ತನಿಖೆ ಮಾಡಲು ಸಿಬಿಐಗೆ ಹೇಳಿರುವ ಹಿನ್ನೆಲೆಯಲ್ಲಿ ಒಂದು ಪೂರ್ಣ ಪ್ರಮಾಣದ ತನಿಖೆ ನಡೆಸಬೇಕು ಎಂದು ಸಿಪಿಐ(ಎಂ) ಕೇಂದ್ರ ಸಮಿತಿ ಆಗ್ರಹಿಸಿದೆ.

ಕೃಷಿ ಬೆಂಬಲ ಬೆಲೆಗಳು: ಸುಳ್ಳುಗಳ ಕಂತೆಗಳ ಪ್ರಸಾರ

ಜೂನ್ 15ರಂದು ಯುಪಿಎ–2 ಸರಕಾರದ ಆರ್ಥಿಕ ವ್ಯವಹಾರಗಳ ಸಂಪುಟ ಸಮಿತಿ ಮುಂಗಾರು ಬೆಳೆಗಳಿಗೆ 2012–13ರ 'ಕನಿಷ್ಟ ಬೆಂಬಲ ಬೆಲೆ'(ಎಂಎಸ್‌ಪಿ)ಗಳನ್ನು ಪ್ರಕಟಿಸಿದೆ. ಇದು ಇದುವರೆಗಿನ ಅತೀ ದೊಡ್ಡ ಹೆಚ್ಚಳ ಎಂದು ಸರಕಾರದ 'ಅಭಿಮಾನಿಗಳು' ಡಂಗುರ ಸಾರುತ್ತಿದ್ದರೆ, ಸುಮಾರಾಗಿ ಎಲ್ಲ ಆರ್ಥಿಕ ಪತ್ರಿಕೆಗಳಲ್ಲಿ ಇವು ರೈತರಿಗೆ ನೀಡಿರುವ ಅಮೋಘ 'ಬಕ್ಷೀಸು'ಗಳು, ಇದರಿಂದ ಆಹಾರ ಹಣದುಬ್ಬರ ನಾಗಾಲೋಟ ಹೂಡುತ್ತದೆ ಎಂದೆಲ್ಲಾ ಬರೆದಿವೆ. ಇದರಿಂದಾಗಿ ಸರಕಾರದ ಆಹಾರ ಸಬ್ಸಿಡಿಗಳು ಮೇಲೇರುತ್ತವೆ, ಧಾನ್ಯ ಖರೀದಿ ಖರ್ಚು ಕೂಡ ಮೇಲೇರುತ್ತದೆ ಎಂದೆಲ್ಲ 'ವಿಶ್ಲೇಷಣೆ'ಗಳ ಮಹಾಪೂರವೇ ಬಂದಿದೆ. ಕಳೆದ ಕೆಲವು ಕೆಲವು ವರ್ಷಗಳಿಂದ ಕೃಷಿ ಉತ್ಪಾದನೆಯ ಖರ್ಚುಗಳಲ್ಲಿ ಎಂತಹ ಹೆಚ್ಚಳವಾಗಿದೆ, ಈ ಹೆಚ್ಚಿದ ಬೆಂಬಲ ಬೆಲೆಗಳು ನಿಜವಾಗಿಯೂ ಖರ್ಚಿನ ಹೆಚ್ಚಳವನ್ನಾದರೂ ಸರಿದೂಗಿಸಿ ವೆಯೇ ಎಂಬ ಬಗ್ಗೆ ತುಸುವೂ ತಲೆಕೆಡಿಸಿಕೊಳ್ಳದೆ ಸರಕಾರದ ಹೇಳಿಕೆಗಳಿಗೇ ಪ್ರಚಾರ ಕೊಡುತ್ತಿವೆ ಯೆಂದು ಅಖಿಲ ಭಾರತ ಕಿಸಾನ್ ಸಭಾದ ಮುಖಂಡರಾದ ಹಾಗೂ ಕೃಷಿಬೆಲೆಗಳ ಅಧ್ಯಯನ ಮಾಡಿರುವ ವಿಜೂ ಕೃಷ್ಣನ್ ಹೇಳಿದ್ದಾರೆ.

ಸರಕಾರಕ್ಕೆ ಬೆಂಬಲ ಬೆಲೆಗಳ ಬಗ್ಗೆ ಸಲಹೆ ನೀಡುವ 'ಕೃಷಿ ಖರ್ಚುಗಳು ಮತ್ತು ಬೆಲೆಗಳ ಆಯೋಗ'(ಸಿಎಸಿಪಿ)ವೇ 2011–12ರಲ್ಲಿ ಕೃಷಿ ಉತ್ಪಾದನಾ ಖರ್ಚುಗಳು ಎಷ್ಟಿರಲು ಸಾಧ್ಯ ಎಂಬುದನ್ನು 2008–09ರ ಖರ್ಚುಗಳ ಮಾಹಿತಿಗಳ ಆಧಾರದಲ್ಲಿಯೇ ಲೆಕ್ಕ ಹಾಕಲಾಗಿದೆ ಎಂದು ಒಪ್ಪಿಕೊಂಡಿದೆ. ಈ ನಾಲ್ಕು ವರ್ಷಗಳಲ್ಲಿ ಕೃಷಿ ಲಾಗುವಾಡುಗಳ, ಅದರಲ್ಲಿಯೂ ರಸಗೊಬ್ಬರದ ಬೆಲೆಗಳ ಏರಿಕೆಯ ಪ್ರಮಾಣ ಅಗಾಧವಾಗಿದೆ ಎಂಬುದನ್ನು ಯಾರೂ ಅಲ್ಲಗಳೆಯಲು ಸಾಧ್ಯವಿಲ್ಲ. ಆದರೆ ದೇಶದ ದೊಡ್ಡ ಆರ್ಥಿಕ ಪತ್ರಿಕೆಗಳ 'ವಿಶ್ಲೇಷಕ'ರಿಗೆ ಇವುಗಳನ್ನು ಗಮನಿಸಬೇಕೂ ಎಂದನಿಸಿದಂತಿಲ್ಲ.

ಉದಾಹರಣೆಗೆ, ಈ ಅವಧಿಯಲ್ಲಿ ಡಿಎಪಿ ಗೊಬ್ಬರದ ಬೆಲೆಗಳಲ್ಲಿ 31.87ಶೇ. ಎಂಒಪಿ ಯಲ್ಲಿ 41.66ಶೇ., ಸೂಪರ್ ಪೊಟಾಶ್ ಗೊಬ್ಬರಗಳ ಬೆಲೆಗಳಲ್ಲಿ 62.5ಶೇ. ಮತ್ತು ಎನ್‌ಪಿಕೆಯಲ್ಲಿ 37.5 ಶೇ. ಹೆಚ್ಚಳವಾಗಿದೆ ಎಂದು ಅಂಕಿ–ಅಂಶಗಳಿಂದ ಕಂಡು ಬಂದಿದೆ. ಅಲ್ಲದೆ ರಸಗೊಬ್ಬರ ಇಲಾಖೆ ಈ ಬೆಲೆಗಳನ್ನು ಈ ವರ್ಷ ಇನ್ನೂ 10ಶೇ ಏರಿಸುವ ಬಗ್ಗೆ ಮತ್ತು ಜೈವಿಕ ಗೊಬ್ಬರಗಳನ್ನೂ ಪ್ರೋತ್ಸಾಹಿಸುವ ಹೆಸರಲ್ಲಿ ರಾಸಾಯನಿಕ ಗೊಬ್ಬರಗಳ ಮೇಲಿನ ಸಬ್ಸಿಡಿಯನ್ನು ಇಳಿಸುವ ಬಗ್ಗೆ ಯೋಚಿಸುತ್ತಿದೆ. ಬೆಂಬಲ ಬೆಲೆಗಳನ್ನು ಲೆಕ್ಕ ಹಾಕುವಾಗ ಇವನ್ನೆಲ್ಲ ಯುಪಿಎ–2 ಸರಕಾರ ಲೆಕ್ಕಕ್ಕೆ ತಗೊಂಡಿಲ್ಲ. ಪ್ರಸಿದ್ಧ ಕೃಷಿ ವಿಜ್ಞಾನ ಎಂ. ಎಸ್. ಸ್ವಾಮಿನಾಥನ್ ಅಧ್ಯಕ್ಷತೆಯ ಆಯೋಗ ಶಿಫಾರಸು ಮಾಡಿರುವ ಸೂತ್ರದ ಪ್ರಕಾರ ಭತ್ತದ ಕನಿಷ್ಟ ಬೆಂಬಲ ಬೆಲೆ ರೂ.1,332, ಮೆಕ್ಕೆಜೋಳದ್ದು ರೂ.1,382, ಜೋಳದ್ದು ರೂ.1,260, ರಾಗಿಯದ್ದು ರೂ.1,907. ಆದರೆ ಸರಕಾರ ಪ್ರಕಟಿಸಿರುವ ಬೆಂಬಲ ಬೆಲೆ ಅನುಕ್ರಮವಾಗಿ ರೂ.1,250, 1,175, 1,175 ಮತ್ತು 1,500.

ಇತರ ಬೆಳೆಗಳ ಪ್ರಕಟಿತ ಬೆಂಬಲ ಬೆಲೆಗಳೂ ಸ್ವಾಮಿನಾಥನ್ ಆಯೋಗ ಶಿಫಾರಸು ಮಾಡಿರುವ ಸೂತ್ರದ ಪ್ರಕಾರ ಲೆಕ್ಕ ಹಾಕಿದರೆ ಬರುವ ಸಂಖ್ಯೆಗಿಂತ ಕಡಿಮೆಯೇ ಇವೆ ಎಂದು ಲೆಕ್ಕ ಹಾಕಿರುವ ವಿಜೂ ಕೃಷ್ಣನ್ ರೈತರಿಗೆ 'ನ್ಯಾಯಯುತ', 'ಫಲದಾಯಕ' ಬೆಲೆಗಳನ್ನು ಕೊಡಲಾಗುತ್ತಿದೆ ಎಂಬುದು ಕೇವಲ ಮಿಥ್ಯೆ ಎನ್ನುತ್ತಾರೆ.

*

ಪಶ್ಚಿಮ ಬಂಗಾಳ : ಸ್ಥಳೀಯ ಸಂಸ್ಥೆಗಳ ಚುನಾವಣೆ

ದಾಳಿ–ದೌರ್ಜನ್ಯದ ನಡುವೆ ಮುನ್ನಡೆಯ ದಾರಿ ತೋರಿದ 'ಹಲ್ದಿಯಾ'

ಪಶ್ಚಿಮ ಬಂಗಾಳದ ಸ್ಥಳೀಯ ಸಂಸ್ಥೆ ಚುನಾವಣೆಯ ಫಲಿತಾಂಶದ ಬಗ್ಗೆ ರಾಷ್ಟ್ರಮಟ್ಟದಲ್ಲಿ ಸಾಕಷ್ಟು ಕುತೂಹಲವಿತ್ತು. ಇದಕ್ಕೆ ಕಾರಣವೂ ಇತ್ತು. 34 ವರ್ಷಗಳ ಸುದೀರ್ಘ ಸರ್ಕಾರ ನಡೆಸಿದ ಎಡರಂಗ ಸರ್ಕಾರ ಪತನಗೊಳಿಸಿ ತೃಣಮೂಲ ಕಾಂಗ್ರೆಸ್ ಅಧಿಕಾರಕ್ಕೇರಿತ್ತು.

ಇದಾಗಿ ಸುಮಾರು ಒಂದು ವರ್ಷವೇ ಕಳೆದಿದೆ. ಹಲವು ವಿವಾದ–ಗದ್ದಲಗಳಿಂದ ತನ್ನ ನಿಜಬಣ್ಣ ತೋರಿಸಿದ್ದ ಮಮತಾ ಮತ್ತವರ ಪಡೆಯ ನಾಯಕರ ಆಡಳಿತದ ಬಗ್ಗೆ ಜನರು ತೀರ್ಪು ನೀಡುವ ಸಮಯ ಇದಾಗಿತ್ತು. ಜನ ನಿಜವಾಗಿಯೂ ಎಡರಂಗದಿಂದ ರೋಸಿ ಹೋಗಿದ್ದಾರಾ... ತೃಣಮೂಲದಲ್ಲಿ ಪರ್ಯಾಯ ಕಂಡುಕೊಂಡರಾ... ಹೊಸ ಆಡಳಿತದ ಬಗ್ಗೆ ತೃಪ್ತಿ ಇದೆಯಾ ಎಂಬೆಲ್ಲ ಪ್ರಶ್ನೆಗಳಿಗೆ ಸಹಜವಾಗಿಯೇ ಜನರು ಉತ್ತರ ನೀಡುವ ಸಮಯ ಇದಾಗಿತ್ತು.

ಆರು ಮಹಾನಗರ ಪಾಲಿಕೆಗಳ ಚುನಾವಣಾ ಫಲಿತಾಂಶ ಹೊರಬಿತ್ತು. ಇದರಲ್ಲಿ ಮಮತಾ ಸರ್ಕಾರ ವಿರುದ್ಧದ ಜನರ ಆಕ್ರೋಶ ಪ್ರತಿಧ್ವನಿಸುತ್ತಿತ್ತು.

ಹಲ್ದಿಯಾ ಮಹಾನಗರ ಪಾಲಿಕೆ

ಪಶ್ಚಿಮ ಮಿಡ್ನಾಪುರ ಜಿಲ್ಲೆಯ ಹಲ್ದಿಯಾ ಪಾಲಿಕೆಯಲ್ಲಂತೂ ಇದು ಸ್ಪಷ್ಟವಾಗಿ ಗೋಚರಿಸಿತು. ಈ ಜಿಲ್ಲೆಯ ವ್ಯಾಪ್ತಿಯಲ್ಲೇ ಬರುವ ನಂದಿಗ್ರಾಮದಲ್ಲಿ ಅಂದು ಅರಾಜಕತೆಯ ರುದ್ರತಾಂಡವವಾಗಿತ್ತು. 2008ರಲ್ಲಿ ನಡೆದ ಜಿಲ್ಲಾ ಕೌನ್ಸಿಲ್ ಚುನಾವಣೆಯಲ್ಲಿ ತೃಣಮೂಲ ಈ ಪರಿಸ್ಥಿತಿಯ ಲಾಭ ಪಡೆದುಕೊಂಡಿತ್ತು. ಅಷ್ಟು ಮಾತ್ರವಲ್ಲ, 2009ರ ಲೋಕಸಭಾ ಚುನಾವಣೆ ಮತ್ತು 2011ರಲ್ಲಿ ಅಸೆಂಬ್ಲಿ ಚುನಾವಣೆಯಲ್ಲಿ ಜಿಲ್ಲೆಯ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಜಯಭೇರಿ ಬಾರಿಸಿತ್ತು. ಈ ಅವಧಿಯುದ್ದಕ್ಕೂ ಸಿಪಿಎಂ, ಸಿಐಟಿಯು ಸೇರಿದಂತೆ ಎಡ ಪಕ್ಷಗಳ ಕಾರ್ಯಕರ್ತರು ಮತ್ತು ಹಿತೈಷಿಗಳ ವಿರುದ್ಧ ಅಭೂತಪೂರ್ವ ಕ್ರೂರ ದಾಳಿ, ನರಮೇಧ ನಡೆಸಿತ್ತು. ತೃಣಮೂಲ ಸಂಸದ ಸುಭೇಂದ್ರ ಅಧಿಕಾರಿ ನೇತೃತ್ವದ ದಾಳಿಯ ಸ್ವರೂಪ ಹೇಗಿತ್ತೆಂದರೆ ಪಕ್ಷದ ಕಚೇರಿ, ಬೆಂಬಲಿಗರ ಮನೆಗಳೂ ಟಾರ್ಗೆಟ್ ಆಗಿತ್ತು. ಯಾರೂ ಕೆಂಬಾವುಟ ಹಿಡಿಯುವ ಹಾಗಿಲ್ಲ ಎಂಬ ಫರ್ಮಾನನ್ನೂ ಹೊರಡಿಸಲಾಗಿತ್ತು.

ಇದಾದ ಐದು ವರ್ಷಗಳ ಬಳಿಕವೂ ಎಡರಂಗ ಶಾಂತಿಯುತ ಪ್ರಚಾರ ನಡೆಸಲು ಅವಕಾಶ ಸಿಗಲಿಲ್ಲ. ಅಭ್ಯರ್ಥಿಗಳು ಮತ್ತು ಅವರ ಕುಟುಂಬಕ್ಕೆ ಜೀವ ಬೆದರಿಕೆ ಒಡ್ಡಲಾಯಿತು. ಕಾಂಗ್ರೆಸ್ ಕೂಡ ತೃಣಮೂಲ ಜೊತೆಗಿನ ಮೈತ್ರಿ ಕಡಿದುಕೊಂಡ ಕಾರಣ, ಅದರ ಅಭ್ಯರ್ಥಿಗಳನ್ನೂ ಬೆದರಿಸಲಾಯಿತು. ಕೆಲವರ ಕಿಡ್ನ್ಯಾಪ್ ನಡೆದರೆ, ಇನ್ನು ಕೆಲವರು ಜೀವ ಭಯದಿಂದ ನಾಮಪತ್ರ ವಾಪಸ್ ಪಡೆದುಕೊಂಡಿದ್ದರು. ಜನತೆಯನ್ನು ಬೆದರಿಸಲು ತೃಣಮೂಲ ಗೂಂಡಾ ಪಡೆಗಳನ್ನು ಛೂಬಿಟ್ಟಿತು.



ಇಷ್ಟೆಲ್ಲ ಆದರೂ ಹಲ್ದಿಯಾದ ಜನತೆ ಮತ್ತೆ ಎಡಪಕ್ಷದತ್ತ ತಮ್ಮ ಒಲವನ್ನು ತೋರಿದರು. ಫಲಿತಾಂಶದ ಮೂಲಕ ಗೂಂಡಾರಾಜ್ಯಕ್ಕೆ ದಿಟ್ಟ ಉತ್ತರ ನೀಡಿದರು. 26 ಸದಸ್ಯ ಬಲದ ಪಾಲಿಕೆಯಲ್ಲಿ 15 ಸ್ಥಾನಗಳಲ್ಲಿ ಎಡ ಪಕ್ಷದ ಅಭ್ಯರ್ಥಿಗಳನ್ನು ಚುನಾಯಿಸಿದರು. ಈ ಪೈಕಿ 14ರಲ್ಲಿ ಸಿಪಿಐ(ಎಂ), ಒಂದರಲ್ಲಿ ಸಿಪಿಐ ಗೆಲುವು ಸಾಧಿಸಿತು. ಉಳಿದ ಸ್ಥಾನಗಳಲ್ಲೂ ಎಡ ಅಭ್ಯರ್ಥಿಗಳು ಅತ್ಯಲ್ಪ ಮತಗಳಿಂದ ಸೋಲು ಕಂಡರು. 40ರಿಂದ 52 ಮತಗಳ ಅಂತರದಿಂದ ಹಲವು ಸ್ಥಾನಗಳು ಕೈತಪ್ಪಿದವು. ಆದರೂ, ಈ ಪರಿಸ್ಥಿತಿಯಲ್ಲಿ ಎಡಶಕ್ತಿಗಳ ಪರ ಪ್ರಚಂಡ ಫಲಿತಾಂಶ ಇದಾಗಿತ್ತು.

ಹಲ್ದಿಯಾದ ಜಯದ ಹಿನ್ನೆಲೆಯಲ್ಲಿ ಸಂತಸ ವ್ಯಕ್ತಪಡಿಸಿದ ಎಡರಂಗದ ಸಂಚಾಲಕ ಬಿಮನ್ ಬಸು, ಭಯೋತ್ಪಾದಕ ಗೂಂಡಾ ಶಕ್ತಿಗಳನ್ನು ಧಿಕ್ಕರಿಸಿ ಎಡಶಕ್ತಿಗಳನ್ನು ಬೆಂಬಲಿಸಿದ ಹಲ್ದಿಯಾ ಜನತೆಗೆ ಧನ್ಯವಾದಗಳನ್ನು ಅರ್ಪಿಸಿದರು.

ದುರ್ಗಾಪುರ ಮಹಾನಗರ ಪಾಲಿಕೆ

ಇಲ್ಲೂ ಪರಿಸ್ಥಿತಿ ಭಿನ್ನವಾಗಿರಲಿಲ್ಲ. ಪೂರ್ಣ ಪ್ರಮಾಣದ ಗೂಂಡಾ ದಾಳಿಗಳು ಇಲ್ಲೂ ಮುಂದುವರಿಯಿತು. ಸಿಪಿಐ(ಎಂ) ಬೂತ್ ಕ್ಯಾಂಪ್‌ಗಳ ಮೇಲೆ ನಿರಂತರ ದಾಳಿ ನಡೆಸಲಾಯಿತು. ಪಕ್ಷದ ಚುನಾವಣಾ ಏಜೆಂಟರನ್ನು ಮತಗಟ್ಟೆ ಪ್ರವೇಶಕ್ಕೆ ನಿರ್ಬಂಧಿಸಲಾಗಿತ್ತು. ಕೆಲವು ಕಡೆಗಳಲ್ಲಂತೂ ಮತಯಂತ್ರಗಳನ್ನು ವಶಪಡಿಸಿ ಅಕ್ರಮ ಮತದಾನವನ್ನೂ ಮಾಡಲಾಯಿತು. ಪೊಲೀಸರು ಮತ್ತು ಆಡಳಿತ ಯಂತ್ರದ ಸಹಾಯ ಪಡೆದು ಈ ಕೃತ್ಯಗಳನ್ನು ಮಾಡಲಾಯಿತು. ಮತದಾರರನ್ನು ಬೆದರಿಸುವ ಕಾರ್ಯವೂ ನಡೆಯಿತು. ಹೊರಗಿನ ಗೂಂಡಾಗಳನ್ನು ಕರೆಸಿ ಅಕ್ರಮ ಮತದಾನ ಮಾಡಿದ ಬಗ್ಗೆ ಮಾಧ್ಯಮಗಳೂ ವರದಿ ಮಾಡಿತ್ತು. ಈ ಹಿನ್ನೆಲೆಯಲ್ಲಿ ಎಡರಂಗ ಮರುಚುನಾವಣೆಗೆ ಒತ್ತಾಯವನ್ನೂ ಮಾಡಿತ್ತು.

43 ಸ್ಥಾನಗಳ ದುರ್ಗಾಪುರ ಪಾಲಿಕೆಯ ಫಲಿತಾಂಶ ಹೊರಬಿತ್ತು. ಈ ಪೈಕಿ 29 ಸ್ಥಾನಗಳನ್ನು ತೃಣಮೂಲ ಗೆದ್ದರೆ, 11ರಲ್ಲಿ ಸಿಪಿಐ(ಎಂ) ಅಭ್ಯರ್ಥಿಗಳು ಜಯ ಗಳಿಸಿದರು. ಕಾಂಗ್ರೆಸ್, ಬಿಜೆಪಿ ಹಾಗೂ ಪಕ್ಷೇತರರು ತಲಾ ಒಂದು ಸ್ಥಾನಗಳಲ್ಲಿ ಗೆಲುವು ದಾಖಲಿಸಿದರು.

ಪನ್‌ಸ್ಕುರಾ ಮಹಾನಗರ ಪಾಲಿಕೆ

ಇಲ್ಲಿ ಸಿಪಿಐ(ಎಂ) ಜೊತೆಗೆ ಕಾಂಗ್ರೆಸ್ ಕೂಡಾ ತೃಣಮೂಲದ ದಾಳಿಗೆ ತುತ್ತಾಗಬೇಕಾಯಿತು. ಪ್ರತಿಪಕ್ಷಗಳನ್ನು ಸಂಪೂರ್ಣ ನಿರ್ನಾಮ ಮಾಡಿ ವೈಟ್‌ವಾಶ್ ಮಾಡುವ ಯೋಜನೆ ತೃಣಮೂಲದ್ದಾಗಿತ್ತು.

ಇಲ್ಲಿ ತೃಣಮೂಲ 12 ಸ್ಥಾನಗಳನ್ನು ಗೆದ್ದರೆ, ಎಡಪಕ್ಷಗಳು ಐದು ಸ್ಥಾನಗಳಲ್ಲಿ ಜಯಗಳಿಸಿದರು. ಮೂರರಲ್ಲಿ ಸಿಪಿಐ(ಎಂ) ಮತ್ತು ಎರಡರಲ್ಲಿ ಸಿಪಿಐ ಅಭ್ಯರ್ಥಿಗಳು ಚುನಾಯಿತರಾದರು. ಇಲ್ಲಿ ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿತು.

ಕೂಪರ್ಸ್ ಕ್ಯಾಂಪ್

ಇಲ್ಲಿನ ಫಲಿತಾಂಶದಿಂದ ಆಡಳಿತಾರೂಢ ತೃಣಮೂಲಕ್ಕೆ ತೀವ್ರ ಮುಖಭಂಗಕ್ಕೆ ಒಳಗಾಯಿತು. 12 ಕ್ಷೇತ್ರಗಳ ಪೈಕಿ 11ರಲ್ಲಿ ಕಾಂಗ್ರೆಸ್ ಜಯ ಗಳಿಸಿತು. ಇಲ್ಲೂ ಕೂಡ ತನ್ನ ಮಿತ್ರ ಪಕ್ಷ ಸೇರಿದಂತೆ ಪ್ರತಿಪಕ್ಷಗಳ ವಿರುದ್ಧ ತೃಣಮೂಲದ ಗೂಂಡಾ ಪಡೆಗಳ ದಾಳಿ ನಡೆದಿದ್ದರೂ ಕಾಂಗ್ರೆಸ್ ಜಯಭೇರಿ ಬಾರಿಸಿತು.

ನಲ್‌ಹತಿ (ಬಿರ್ಭುಮ್ ಜಿಲ್ಲೆ)

ತ್ರಾಸದಾಯಕವಾಗಿ ಇಲ್ಲಿ ತೃಣಮೂಲ ತನ್ನ ಅಧಿಕಾರವನ್ನು ಉಳಿಸಿಕೊಂಡಿತು. ತೃಣಮೂಲ ಎಂಟು, ಎಡರಂಗ ಮೂರು, ಕಾಂಗ್ರೆಸ್ ಮೂರು, ಬಿಜೆಪಿ ಒಂದು ಸ್ಥಾನಗಳನ್ನು ಗೆಲುವು ಸಾಧಿಸಿದೆ. ಕಡಿಮೆ ಅಂತರದಲ್ಲಿ ಪಾಲಿಕೆಯನ್ನು ಉಳಿಸಿಕೊಳ್ಳುವ ಮೂಲಕ ತೃಣಮೂಲ ಮಾನ ಕಾಪಾಡಿಕೊಂಡಿದೆ. ತೃಣಮೂಲ ಕಾಂಗ್ರೆಸ್‌ನ ಅಧ್ಯಕ್ಷರು ತಾನು ಸ್ಪರ್ಧಿಸಿದ ಎರಡೂ ಕ್ಷೇತ್ರದಲ್ಲೂ ಸೋಲು ಕಂಡಿದ್ದಾರೆ. ಎಡಪಕ್ಷಗಳನ್ನು ಸೋಲಿಸಲು ಸಿಪಿಐ(ಎಂ) ಅಭ್ಯರ್ಥಿಯನ್ನು ರಾತೋರಾತ್ರಿ ಬಂಧಿಸುವ ಹೀನ ಕೃತ್ಯವೂ ನಡೆಯಿತು. ಈ ಘಟನೆ ಆಳುವ ಪಕ್ಷದ ವಿರುದ್ಧ ತೀವ್ರ ಜನಾಕ್ರೋಶಕ್ಕೂ ಗುರಿಯಾಯಿತು.

ಧೂಪ್‌ಗಿರಿ (ಜಲ್ಪಾಯ್‌ಗುರಿ ಜಿಲ್ಲೆ)

ಬಹುತೇಕ ಶಾಂತಿಯುತವಾಗಿ ಚುನಾವಣಾ ಪ್ರಕ್ರಿಯೆ ನಡೆದ ಧೂಪ್‌ಗಿರಿಯಲ್ಲಿ ಎಡರಂಗ ಹಿನ್ನಡೆ ಕಂಡಿತು. ಕಮ್ತಾಪುರ್ ಪೀಪಲ್ಸ್ ಪಾರ್ಟಿಯ ನಾಯಕ ಮಿತಾಲಿ ರೇ ತಮ್ಮೊಂದಿಗಿದ್ದಾರೆ ಎಂದು ಹೇಳುವ ಮೂಲಕ ಚುನಾವಣಾ ಲಾಭ ಪಡೆದುಕೊಂಡಿತು. ಪ್ರತ್ಯೇಕತಾವಾದಿ ಚಳವಳಿಯಲ್ಲಿ ತೊಡಗಿಸಿಕೊಂಡ ಕೆಪಿಪಿಯ ಜೊತೆಗಿನ ಮತಗಳು ಹರಿದು ತೃಣಮೂಲಕ್ಕೆ ಚುನಾವಣಾ ಲಾಭ ತಂದುಕೊಟ್ಟಿತು. 11 ಸ್ಥಾನಗಳಲ್ಲಿ ತೃಣಮೂಲ ಗೆದ್ದರೆ, ನಾಲ್ಕರಲ್ಲಿ ಎಡಪಕ್ಷಗಳು ಮತ್ತು ಒಂದು ಸ್ಥಾನ ಬಿಜೆಪಿ ಪಾಲಾಯಿತು.

ದೀಪಂಕರ್ ಮುಖರ್ಜಿ ನಿಧನ.....

ಪುಟ 12 ರಿಂದ

ಎರಡು ಬಾರಿ ರಾಜ್ಯ ಸಭಾ ಸದಸ್ಯರಾಗಿ ಆಯ್ಕೆಯಾಗಿದ್ದ ಅವರು, ಇಂಧನ, ಗ್ಯಾಸ್ ಮತ್ತು ಪೆಟ್ರೋಲಿಯಂ, ಪ್ರವಾಸೋದ್ಯಮ ಮತ್ತು ಸಾರಿಗೆ ಕ್ಷೇತ್ರದಲ್ಲಿ ಸಂಸತ್ತಿನ ಸ್ಥಾಯಿ ಸಮಿತಿ ಸದಸ್ಯರಾಗಿ ಹಾಗೂ ಭವಿಷ್ಯನಿಧಿ ಟ್ರಸ್ಟ್ ಸಮಿತಿಯ ಸದಸ್ಯರಾಗಿ ಕಾರ್ಮಿಕ ವರ್ಗಕ್ಕೆ ನ್ಯಾಯ ಒದಗಿಸುವಲ್ಲಿ ಅವರು ಸಾಕಷ್ಟು ಶ್ರಮಿಸಿದ್ದರು. ಅಲ್ಲದೆ ಸಂಸತ್ತಿನ ಒಳಗೆ ಸರ್ಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಪರಿಣಾಮಕಾರಿ ಧ್ವನಿ ಎತ್ತಿದ್ದರು.

ಕಲ್ಲಿದ್ದಲು, ಪೆಟ್ರೋಲಿಯಂ, ಸಾರ್ವಜನಿಕ ಉದ್ದಿಮೆಗಳ ವಿಚಾರಗಳು, ವಿಮೆ, ಬ್ಯಾಂಕಿಂಗ್ ಮುಂತಾದ ಹಣಕಾಸು ರಂಗದ ಸಂಸ್ಥೆಗಳು ಹೀಗೆ ನಾನಾ ವಿಷಯಗಳನ್ನು ಆಲವಾಗಿ ಅಭ್ಯಾಸ ಮಾಡಿದ್ದ ದೀಪಂಕರ್ ಮುಖರ್ಜಿಯವರು ಆ ವಿವರಗಳನ್ನು ಪರಿಣಾಮಕಾರಿಯಾಗಿ ವಿವಿಧ ವೇದಿಕೆಗಳಲ್ಲಿ ಮಂಡಿಸುತ್ತಾ ಆಳುವ ಸರ್ಕಾರಗಳ ಮೋಸಗಳನ್ನು ಸಮರ್ಥವಾಗಿ ಬಯಲಿಗೆಳೆಯುತ್ತಿದ್ದರು. ದೀಪಂಕರ್ ಮುಖರ್ಜಿಯವರ ನಿಧನವು ದೇಶದ ದುಡಿಯುವ ಜನರ ಚಳುವಳಿಗೆ ಅಪಾರ ನಷ್ಟ ಉಂಟುಮಾಡಿದೆ.

ಸುವರ್ಣ ಭೂಮಿ ; 75 ಸಾವಿರ ರೈತರು ಕಪ್ಪು ಪಟ್ಟಿಗೆ

ದೀರ್ಘ ಕಾಲದ ಯೋಜನೆಗಳಿಂದ ಮಾತ್ರ ಜನತೆಗೆ ಸಹಾಯವಾಗಬಹುದು. ಆದರೆ ಈ ಸರ್ಕಾರ ನಿರಂತರವಾಗಿ ಕೇಸರೀಕರಣದ ಆಲೋಚನೆಯ ಮೇಲೆ ಯೋಜನೆಯನ್ನು ರೂಪಿಸಿ ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ನೀಡುತಿದ್ದ ಬೀಜ, ಗೊಬ್ಬರಕ್ಕೆ, ಯಂತ್ರೋಪಕರಣಗಳಿಗೆ, ಕೃಷಿ ಉಪಯೋಗಿ ವಸ್ತುಗಳಿಗೆ ಈ ಹಿಂದೆ ಬೇರೆ ಸರ್ಕಾರಗಳು ರೂಪಿಸಿದ ಎಲ್ಲ ಯೋಜನೆಗಳನ್ನು ನಿಲ್ಲಿಸಿದೆ.



ತಾನು ಜನಪರ, ರೈತಪರವಾದ ಆಡಳಿತ ನೀಡುವುದಾಗಿ ರೈತನ ಹೆಸರಿನ ಮೇಲೆ ಪ್ರಮಾಣ ವಚನ ಸ್ವೀಕರಿಸುವ ನಾಟಕವಾಡಿ ಇಂದು ಜಾತಿ, ಪಂಗಡದ ರಾಜಕಾರಣ ಮಾಡುತ್ತಿರುವುದು ಎಲ್ಲರಿಗೂ ತಿಳಿದ ವಿಷಯ.

ಈ ಹಿನ್ನೆಲೆಯಲ್ಲಿ ರೂಪಿಸಿದ ಯೋಜನೆ ಸುವರ್ಣ ಭೂಮಿ ಯೋಜನೆ, ಯೋಜನೆಯ ಪ್ರಾರಂಭದಿಂದಲೂ ಅದರಲ್ಲಿ ಬಿಜೆಪಿಯ ಶಾಸಕರು ಮತ್ತು ಕಾರ್ಯಕರ್ತರು ತಮ್ಮ ರಾಜಕೀಯ ಹಿತಾಸಕ್ತಿಗೆ ತಕ್ಕಂತೆ ಸಾಕಷ್ಟು ಶ್ರಮವಹಿಸಿ ಯೋಜನೆಯ ಫಲಾನುಭವಿಗಳನ್ನು ಆಯ್ಕೆ ಮಾಡಿದರು. ಈ ಯೋಜನೆಯ ಒಟ್ಟು ಫಲಾನುಭವಿಗಳಲ್ಲಿ ಶೇ. 90 ರಷ್ಟು ಇರುವವರು ಪಕ್ಷದ ಕಾರ್ಯಕರ್ತರು ಮತ್ತು ಹಿತೈಷಿಗಳು. ಉಳಿದಂತೆ 10 ರಷ್ಟು ಜನರು ಸಹ ಪಕ್ಷದ ನಿರೀಕ್ಷೆಯಲ್ಲಿದ್ದವರು. ಈಗ ತಮ್ಮ ಒಳ ರಾಜಕೀಯದಲ್ಲಿ ತಾಳಮೇಳ ಇಲ್ಲದ ಸಮಯದಲ್ಲಿ ಅವರ ನಿರೀಕ್ಷೆ ಹುಸಿಯಾಗಿ ಯೋಜನೆ ಸಮರ್ಪಕವಾಗಿ ಬಳಕೆಯಾಗಿಲ್ಲವೆಂದು ಮತ್ತು ಈ 10 ರಷ್ಟು ಜನರಿಗೆ ಮುಂದಿನ ಮೂರು ವರ್ಷದಲ್ಲಿ ಯಾವುದೇ ಸರ್ಕಾರಿ ಸೌಲಭ್ಯ ಪಡೆಯಲು ಅನರ್ಹರರಾನ್ನಾಗಿ ಮಾಡಿ ಕುತಂತ್ರದಿಂದ 75 ಸಾವಿರ ರೈತರನ್ನು ಕಪ್ಪುಪಟ್ಟಿಗೆ ಸೇರಿಸಲು ಹೊರಟಿದೆ.

ಜನ, ಜಾನುವಾರುಗಳು ಹಸಿವಿನಿಂದಿರುವಾಗ ಯಾವುದೇ ಪರಿಹಾರ ಕಾರ್ಯಗಳನ್ನು ಕೈಗೊಳ್ಳದೆ. ಅಧಿಕ ಆದಾಯ ತರುವ ಬೆಳೆಗಳ ಬೆಳೆಯಲು ಈ ಯೋಜನೆಯಿಂದ ಸಹಾಯಧನ ನೀಡುತ್ತೇವೆಂದು ಹೇಳಿದ ಸರ್ಕಾರ ಬಂದ ಬೆಳೆಗೆ ಸರಿಯಾದ ದರ ನಿಗದಿ ಮಾಡಿಲ್ಲಿಲ್ಲ, ಕಳೆದ ವರ್ಷ ಮುಂಗಾರು ಮಳೆ ವೇಳೆಗೆ ಸರಿಯಾಗಿ ಆಗದೇ ಸ್ವಲ್ಪ ಪ್ರಮಾಣದಲ್ಲಿ ದ್ವಿದಳ ಧಾನ್ಯ ಬೆಳೆದವು. ಆದರೆ ಮೊದಲಿದ್ದ ದರ ಬೆಳೆ ಬಂದಾಗ ಇರಲಿಲ್ಲ.

ಇನ್ನೂ ಬಿಟಿ ಹತ್ತಿ ಬೆಳೆಗೆ ಅಧಿಕ ತೇವಾಂಶ ಬೇಕು, ಅಧಿಕ ಬಂಡವಾಳ ಹೂಡಬೇಕು, ಆದರೆ ಸರ್ಕಾರ ನೀಡಿದ ಐದು ಸಾವಿರ ಹಣ ಬೀಜ ಖರೀದಿಸಲು ಸಾಲದು. ಆದರೂ ಬಿತ್ತನೆ ಮಾಡಿ ಬೆಳೆ ಬರದ ಕಾರಣ ಕೈಸುಟ್ಟುಕೊಂಡ. ಅಧಿಕ ಆದಾಯ ಇರಲಿ ಹಾಕಿದ ಬಂಡವಾಳ ಸಹ ಹಿಂದಿರುಗಲಿಲ್ಲ.

ಉತ್ತಮವಾಗಿ ಬಂದ ಈರುಳ್ಳಿ ಬೆಳೆಗೆ ಬೆಲೆಯೇ ಇಲ್ಲದೆ ಕಸ ಸೇರುವಂತಾಯಿತು. ಬೆಂಬಲ ಬೆಲೆಗೆ ಖರೀದಿಸಿದ ಸರ್ಕಾರ ಇನ್ನೂ ಹಣ ಬಿಡುಗಡೆ ಮಾಡಿಲ್ಲ. ಹೀಗಿರುವಾಗ ಲಕ್ಷಾಂತರ ಹಣ ಕಳೆದುಕೊಂಡ ರೈತ ತನ್ನ ಅಳಲನ್ನ ಯಾರ ಮುಂದೆ ಹೇಳಬೇಕು. 'ಕೆರೆಯ ನೀರನ್ನು ಕೆರೆಗೆ ಚೆಲ್ಲಿ ವರ ಪಡೆದಂತೆ' ಸರ್ಕಾರ ರೈತ ಹಣ ರೈತರಿಗೆ, ಬಡ ಜನರಿಗೆ ನೀಡಲು ಸ್ವಂತ ಹಣ ಕೊಟ್ಟಂತೆ ಆಡುತ್ತಿದೆ. ಯಾರದ್ದೋ ದುಡ್ಡು ಎಲ್ಲಮ್ಮನ ಜಾತ್ರೆ.

ಈ ವರ್ಷ ಉತ್ತಮ ಮಳೆಯಾಗದು ಎಂಬ ನಿರೀಕ್ಷೆಯಲ್ಲಿ ಇರುವಾಗ ರೈತರಿಗೆ ಸಹಾಯ ಮಾಡುವ ಬದಲು ಭೂಗಳ್ಳರ ಸ್ವಾಗತಕ್ಕಾಗಿ ಮುತುವರ್ಜಿ ವಹಿಸಿದಷ್ಟು ರೈತನಿಗೆ ಅನುಕೂಲ ಮಾಡುವಲ್ಲಿ ವಿಫಲವಾಗಿದೆ. ಹಾವೇರಿಯಲ್ಲಿ ಬಿಟಿ ಹತ್ತಿ ಬೀಜಕ್ಕಾಗಿ ಆದ ಆಹಾಕಾರಕ್ಕೆ ಯಾವ ಕ್ರಮವನ್ನು ಕೈಗೊಳ್ಳಲಿಲ್ಲ. ರೈತರ ಬೇಡಿಕೆಗೆ ಪೂರಕವಾಗಿ ಬೀಜ ನೀಡಲು ವಿಫಲವಾಗಿ ರೈತರು ಹೆಚ್ಚಿನ ಬೆಲೆಗೆ ಬೀಜ ಖರೀದಿಸುವಂತೆ ಮಾಡಿತು. 900 ರೂಪಾಯಿ ಬೆಲೆಯ ಬೀಜಕ್ಕೆ ರಯತರು 2500-3000 ರಾಪಾಯಿ ಕೊಡಬೇಕಾಗಿ ಬಂದಿತು. ಇದರಿಂದಾಗಿ ಕಂಪನಿಗಳಿಗೆ ಅಧಿಕ ಲಾಭವಾದರೆ ಈವರೆಗೂ ಮಳೆ ಇಲ್ಲದ ಕಾರಣ ಮತ್ತೆ ಬರಗಾಲದ ಬಲೆಗೆ ಸಿಕ್ಕರೆ ಸಾಲದ ಹೊರೆ ತಾಳದೆ ರೈತ ಪ್ರಾಣ ಕಳೆದುಕೊಳ್ಳುವ ಒತ್ತಡಕ್ಕೆ ಸಿಕ್ಕಿದ್ದಾನೆ. ಈ ಎಲ್ಲ ವಿಷಯ ತಿಳಿದು ಕೇಸರೀಕರಣ ಜಾತಿ ರಾಜಕಾರಣದಲ್ಲಿ ಕಾಲಕಳೆಯುತ್ತ ತನ್ನ ಅಧಿಕಾರ ಆಸೆಯಲ್ಲಿಯೇ ಜನರನ್ನು ದಾರಿತಪ್ಪಿಸುತ್ತಿದೆ.

ಬಂಡವಾಳಿಗರಿಗೆ ಸಾವಿರಾರು ಕೋಟಿ ರೂಪಾಯಿಗಳ ಲೂಟಿಗೆ ಅನುಕೂಲ ಮಾಡುವ ಸರ್ಕಾರ ಕೇವಲ ಮೊದಲ ಕಂತಿನಲ್ಲಿ ರೈತರಿಗೆ ನೀಡಿದ್ದು ಕೇವಲ 149 ಕೋಟಿ ಇದು ಪೂರ್ಣವಾಗಿ ಹಸಿದವರಿಗೆ ಬಡವರಿಗೆ ತಲುಪಿಲ್ಲ. ಬಿಜೆಪಿ ಪಕ್ಷದ ಕಾರ್ಯಕರ್ತರಿಗೆ ಹೆಚ್ಚಿನದಾಗಿ ತಲುಪಿದೆ.

ರೈತರನ್ನು ಕಪ್ಪು ಪಟ್ಟಿಗೆ ಸೇರಿಸಿ ಎಲ್ಲಾ ಸೌಲಭ್ಯಗಳಿಂದ ವಂಚಿತ ಮಾಡುವ ರಾಜ್ಯಸಕಾರದ ನೀತಿಯನ್ನು ಖಂಡಿಸಿರುವ ಕರ್ನಾಟಕ ಪ್ರಾಂತ ರೈತ ಸಂಘ ಸ್ಥಳೀಯವಾಗಿ ಹೋರಾಟ ರೂಪಿಸಲು ಕರೆನೀಡಿದೆ.

– ಮುರುಘೇಶ.ಎ.ಕೆ

'ಜನಶಕ್ತಿ' ಸಂಪರ್ಕ ವಿಳಾಸ ಬದಲಾಗಿದೆ. ದಯಮಾಡಿ ಗಮನಿಸಿ

ದುಡಿಯುವ ಜನರ ಪ್ರಾಣ ಮಿತ್ರ 'ಜನಶಕ್ತಿ ಕನ್ನಡ ವಾರ ಪತ್ರಿಕೆ'ಯ ಸಂಪರ್ಕ ವಿಳಾಸ ಬದಲಾಗಿ ಬಹಳಷ್ಟು ದಿನಗಳಾಗಿವೆ. ಆದರೆ ಈಗಲೂ ಕೆಲವೊಂದು ಲೇಖನ, ಪತ್ರ ಇತ್ಯಾದಿಗಳನ್ನು ಹಳೆಯ ವಿಳಾಸಕ್ಕೆ ಕಳಿಸಲಾಗುತ್ತಿದೆ ಎಂಬುದು ನಮ್ಮ ಗಮನಕ್ಕೆ ಬಂದಿದೆ. ದಯಮಾಡಿ ಈ ಕೆಳಗಿನ ವಿಳಾಸವನ್ನು ಗಮನಿಸಿ ತಮ್ಮ ಪತ್ರಗಳನ್ನು ಅಲ್ಲಿಗೆ ಕಳಿಸಬೇಕಾಗಿ ವಿನಂತಿ.

'ಜನಶಕ್ತಿ' ಕಾರ್ಯಾಲಯ

ಇ.ಎಂ.ಎಸ್. ಭವನ, ನಂ.37/ಎ, 8 ನೇ ಅಡ್ಡರಸ್ತೆ,
ಅಂಚೆ ಕಛೇರಿ ಎದುರು, ಮಹಾಲಕ್ಷ್ಮಿ ಬಡಾವಣೆ, ಬೆಂಗಳೂರು– 560086

'ಜನಶಕ್ತಿ' ಸರಿಯಾಗಿ ತಲುಪುತ್ತಿಲ್ಲವೇ ?

'ಜನಶಕ್ತಿ' ಪತ್ರಿಕೆಯ ಪ್ರಸಾರ, ವಿತರಣೆಗೆ ಸಂಬಂಧಿಸಿ ಸಮಯಕ್ಕೆ ಸರಿಯಾಗಿ ತಲುಪುತ್ತಿಲ್ಲ, ಅಥವಾ ತಲುಪುತ್ತಲೇ ಇಲ್ಲವೆಂಬ ಬಗೆಗೆ ಹಾಗೂ ಇನ್ನು ಕೆಲವು ಸ್ವರೂಪದ ದೂರುಗಳು ಕೆಲವೊಮ್ಮೆ ಕೇಳಿ ಬರುತ್ತಿವೆ. ದೂರುಗಳನ್ನು ದಾಖಲಿಸಿಕೊಂಡು ಸರಿಪಡಿಸಲು ಪ್ರಯತ್ನಿಸಲಾಗುವುದು.

'ಜನಶಕ್ತಿ' ಕಾರ್ಯಾಲಯದಿಂದಾದ ದೋಷವಾದಲ್ಲಿ ಇಲ್ಲಿಯೇ ಸರಿಪಡಿಸಲಾಗುವುದು. ಅಂಚೆ ಮೂಲಕ ತಲುಪುವುದರಲ್ಲಿ ಸಮಸ್ಯೆ ಇದ್ದಲ್ಲಿ ಇಲಾಖೆಗೆ ದೂರು ನೀಡಿ ಸರಿಪಡಿಸಲು ಕೋರಲಾಗುವುದು. ದೂರುಗಳನ್ನು ಜನಶಕ್ತಿ ಕಾರ್ಯಾಲಯದಲ್ಲಿ ದಾಖಲಿಸಲು ಕೋರುತ್ತೇವೆ.

ಕಾರ್ಯಾಲಯದ ದೂರವಾಣಿ: 080–23491114

ಮೊಬೈಲು : ಎಚ್. ಎಂ. ನಾಗರಾಜ್, 9482220931

ಜನಶಕ್ತಿಯ ಪ್ರಸಾರ, ಲೆಕ್ಕಪತ್ರ, ವಿಳಾಸ ಬದಲಾವಣೆ ಇತ್ಯಾದಿಗಳ ಸಂಬಂಧವಾಗಿ ಈ ಮೇಲಿನ ವಿಳಾಸ ಮತ್ತು ದೂರವಾಣಿಗಳಲ್ಲಿಯೇ ಸಂಪರ್ಕಿಸಲು ವಿನಂತಿ. ಈ ವಿಷಯಗಳ ಸಂಬಂಧ ತೀರಾ ಅಗತ್ಯವಾದಲ್ಲಿ ಮಾತ್ರ ಸಂಪಾದಕರು ಅಥವಾ ಸಂಪದಕೀಯ ವಿಭಾಗದ ಸಂಗಾತಿಗಳನ್ನು ಸಂಪರ್ಕಿಸಲು ಕೋರಿಕೆ.

ಪತ್ರಿಕೆಗೆ ಲೇಖನ, ವರದಿ ಇತ್ಯಾದಿ ಕಳಿಸುವವರು ದಯಮಾಡಿ ನುಡಿ ತಂತ್ರಾಂಶದಲ್ಲಿ ಈ ಕೆಳಕಂಡ ವಿಳಾಸಕ್ಕೆ ಕಳುಹಿಸಬೇಕೆಂದು ಹಾಗೂ ತಪ್ಪದೇ ಜನಶಕ್ತಿಗಾಗಿ ಲೇಖನ, ಅಥವಾ ವರದಿ ಎಂದು ನಮೂದಿಸಬೇಕಾಗಿ ವಿನಂತಿ. ವರದಿ, ಲೇಖನಗಳಿಗೆ ಸಂಬಂಧಿಸಿದ ಅರ್ಥಪೂರ್ಣ ಫೋಟೋಗಳನ್ನು ಕಳುಹಿಸುವುದು ಒಳ್ಳೆಯದು. ಈ ವಿಷಯಕ್ಕೆ ಸಂಬಂಧಿಸಿ ಸಂಪರ್ಕಕ್ಕಾಗಿ ವಿವರ.

ಆರ್. ರಾಮಕೃಷ್ಣ – 9448505789

ಎಸ್.ವೈ. ಗುರುಶಾಂತ್ – 9448230114 E mail: js_weekly@yahoo.com

ಏಜೆನ್ಸಿ ಬಾಕಿ ಪಾವತಿಸಿ–
ಜನಶಕ್ತಿ ನಿರಂತರವಾಗಿ ಹೊರ ಬರಲು ಸಹಕರಿಸಿ

ದುಡಿಯುವ ಜನರ ದನಿಯಾಗಿ ಕಾರ್ಯನಿರ್ವಹಿಸುತ್ತಿರುವ ಜನಶಕ್ತಿ ಪತ್ರಿಕೆಯು ತಡೆಯಿಲ್ಲದೇ ನಿರಂತರವಾಗಿ ಹೊರಬರುವುದು ಅಗತ್ಯವಾಗಿದೆ. ಜನಶಕ್ತಿಯ ಓದುಗರು ಮತ್ತು ಏಜೆನ್ಸಿದಾರರಿಗೆ ಈ ಬಗೆಗೆ ಹೆಚ್ಚು ವಿವರಿಸಬೇಕಾದ ಅಗತ್ಯವಿಲ್ಲ. ಆದರೆ ಏಜೆನ್ಸಿದಾರರ ಬಾಕಿ ಹೊತ್ತವು ಏರಿ ಪತ್ರಿಕೆಯನ್ನು ಹೊರ ತರುವುದು ದಿನೇ ದಿನೇ ಒಂದು ಸಾಹಸದಂತಾಗುತ್ತಿದೆ. ಆದ್ದರಿಂದ ದಯಮಾಡಿ ಏಜೆನ್ಸಿದಾರರು ತಮ್ಮ ಬಾಕಿಗಳನ್ನು ತುರ್ತು ಆದ್ಯತೆಯ ಮೇರೆಗೆ ತೀರಿಸಲು ಕ್ರಮ ವಹಿಸಬೇಕೆಂದು ವಿನಂತಿಸುತ್ತೇವೆ. ಕೂಡಲೇ ಬಾಕಿ ಪಾವತಿಸಿ ಸಹಕರಿಸುವಿರೆಂದು ಆಶಿಸುತ್ತೇವೆ.


– ಸಂ. ಮಂ.

ಅರಿವು ಎಚ್ಚರಗಳ ನಡುವೆ ಮುಕ್ಕಾಗದ ದೃಶ್ಯಕಾವ್ಯ ಭಾಗೀರತಿ

ಬರಗೂರ ರಾಮಚಂದ್ರಪ್ಪನವರ ಸಿನೆಮಾಗಳೆಂದರೆ ಒಂದಿಷ್ಟು ನಿರೀಕ್ಷೆಗಳನ್ನು ಸಹಜವಾಗಿ ಅಪೇಕ್ಷಿಸುತ್ತವೆ. ನಾಲ್ಕು ದಶಕಗಳ ಕಾಲ ತಮ್ಮೆಲ್ಲ ನಂಬುಗೆಗಳನ್ನು ಮತ್ತು ತಾತ್ವಿಕ ನೆಲೆಗಳನ್ನು ಮತ್ತೆ ಮತ್ತೆ ಪರೀಕ್ಷೆಗೊಳಪಡಿಸಿ ಅವುಗಳನ್ನು ಬರಹದಲ್ಲಿ ಮಾತ್ರವಲ್ಲ ಚಿತ್ರ ಭಾಷೆಯಲ್ಲಿಯೂ ಆಚೀಚೆ ಒಪ್ಪಂದ ಮಾಡಿಕೊಳ್ಳದೆ 'ಬರಗೂರ ಶೈಲಿ ಮಾರ್ಗ' ನಿರ್ಮಿಸಿಕೊಂಡವರು. ಈ ಸಾಲಿನಲ್ಲಿ ಕನ್ನಡದ ಅತ್ಯಂತ ಜನಪ್ರಿಯವಾದ 'ಕೆರೆಗೆಹಾರ' ಖಂಡಕಾವ್ಯ ಚಿತ್ರವಾಗಿ ಬಂದಿದೆ. ಕೆರೆಗೆಹಾರ, ಪುಣ್ಯಕೋಟಿ ಕನ್ನಡ ಕಾವ್ಯ ಪರಂಪರೆಯಲ್ಲಿ ಅನೇಕ ಸಾರಿ ಚರ್ಚೆಗೆ ಒಳಪಟ್ಟ ಖಂಡಕಾವ್ಯಗಳು. ನಂಬುಗೆ ಮತ್ತು ಸವಾಲುಗಳನ್ನು ಒಂದರ್ಥದಲ್ಲಿ ಎದುರೆದುರು ಇಟ್ಟುಕೊಂಡು ಜನಮಾನ್ಯತೆ ಪಡೆದ ಕಾವ್ಯಗಳಿವು. ಖಂಡಿತವಾಗಿಯೂ ಎಂದಿಗೂ ತಿರಸ್ಕರಿಸಲ್ಪಟ್ಟಿಲ್ಲ.

ಬರಗೂರರ 'ಭಾಗೀರತಿ' ಕೆರೆಗೆಹಾರ ಕಾವ್ಯದ ಜೀವಕೋಶಗಳ ಮೂಲಕ ಮಾರ್ಪಟ್ಟ ಚಿತ್ರ, ಅದರ ಮೂಲ ಆಶಯಗಳಿಗೆ ಧಕ್ಕೆ ತರದಂತೆ ಕಾವ್ಯದೊಳಗಿನ ಪಾತ್ರಗಳಿಗೆ ತಾಕಲಾಟ, ತಳಮಳಗಳು ಸಾಂಕೇತಿವಾಗಿ ಚಿತ್ರಿತಗೊಂಡಿದೆ.

ಕರ್ನಾಟಕದುದ್ದಗಲಕ್ಕೂ 'ಕೆರೆಗೆಹಾರ' ಮಾದರಿಯ ಅನೇಕ ಖಂಡಕಾವ್ಯಗಳು ಸಿಗುತ್ತವೆ. ನೀರು ಮತ್ತು ನೆಲದ



ಸಂಬಂಧದಂತೆ ಮನುಷ್ಯ ಮತ್ತು ನಂಬುಗೆಯ ಅರ್ಥದಲ್ಲಿ ಈ ಎಲ್ಲ ರಚನೆಗಳು ಜನರ ಮಧ್ಯ ಈಗಲೂ ಉಸಿರಾಡುತ್ತಿವೆ. ಬೆವರಿನ ಶ್ರಮವಿಲ್ಲದೆ ಕೆರೆ ಕಟ್ಟಲು ಸಾಧ್ಯವಿಲ್ಲ. ಇದನ್ನು ಜೀವ ಬಲಿದಾನಕ್ಕೂ ಮಿಗಿಲು ಕೆರೆಯೊಂದರ ಆದ್ಯತೆ ಎಂಬ ಅರ್ಥದಲ್ಲಿ ಸ್ವೀಕರಿಸಲಾಗಿದೆ. ಭಾವನಾತ್ಮಕ ತುಮುಲಗಳ 'ಕೆರೆಗೆಹಾರ' ಪಧ್ಯ ಖಂಡಕಾವ್ಯದಲ್ಲಿ ಬಲಿದಾದ ಪ್ರಧಾನವಾದರೆ, ಬರಗೂರರ ಭಾಗೀರತಿಯಲ್ಲಿ ಅವಳ ಕಿಡಿ ಸ್ವರೂಪದ ತುಮುಲಗಳೆ ಪ್ರಧಾನವಾಗಿದೆ.



ಕಥಾನಕದ ಮೂಲ ಸಾರಕ್ಕೆ ಬರುವ ಮುಂಚೆ ಅನೇಕ ಮಾನವೀಕರಣ ಆಯಾಮಗಳನ್ನು ಕೂಡ ಬರಗೂರ ನೀಡಿದ್ದಾರೆ. ದಂಡಿನಲ್ಲಿರುವ ಕಥಾನಾಯಕ ಮಹಾದೇವ ಭಾಗೀರತಿಯ "ಕೆರೆ ಕಟ್ಟಿಸು" ಎಂಬ ಒಂದೇ ಪ್ರೀತಿಯ ನುಡಿಗೆ ರಾಜಪ್ರಭುತ್ವದ ತನಕ ಹೋಗಿ ಅದನ್ನೊಪ್ಪಿಸುವುದು, ರಾಜ ಸಿಂಹಾಸನದಿಂದ ಕೆಳಗಿಳಿದು ಕೆರೆಯ ಕಟ್ಟುವ ಕೆಲಸ ಆರಂಭವಾದಾಗ ನೆಲಕ್ಕೆ ಬರುವುದು, ಹಲವು ಸಂದರ್ಭಗಳಲ್ಲಿ ಮಹಾರಾಣಿ ಜನಸಾಮಾನ್ಯರ ಧ್ವನಿಯಾಗಿ ರಾಜನ ಅಂಹಕಾರವನ್ನು ಕೆಣಕಿ ಮಾತನಾಡುವುದು, ಭಾಗೀರತಿಯ ಅಕ್ಕ ತನ್ನೆಲ್ಲ ದುರಂತಗಳನ್ನು ಮರೆತು ಹೊಸ ಬದುಕಿನ ಸಾರಥ್ಯಕ್ಕೆ ಒಪ್ಪಿಗೆ ನೀಡುವುದು ಇವೆಲ್ಲ ಬರಗೂರರ ಭಾಗೀರತಿಯಲ್ಲಿ ಸಾಮಾಜಿಕ ಸಂಚಲನಗಳಾಗಿ ಸಿಗುತ್ತವೆ.

ತಳಮಳ ಹಾಗೂ ಸಂಘರ್ಷದ ಕಿಡಿಗಳನ್ನು ಹೊತ್ತಿಸಿ ಮೂಲ ಕೆರೆಗೆಹಾರದ ಚೌಕಟ್ಟನ್ನು ಮಿಕ್ಕಿ ನಿಲ್ಲುವ ನಂಬುಗೆಯದ್ದು. "ಇದು ಮೂಢನಂಬಿಕೆಯ ಕಥೆಯಾ ಮೆಡಂ ?" ಎಂಬ ಪ್ರಶ್ನೆಯೊಂದಿಗೆ ಆರಂಭವಾಗುವ ಚಿತ್ರ ಕೊನೆಗೆ ಕೆರೆಗೆ ಕಲ್ಲೊಂದನ್ನು ಎಸೆಯುವ ಮೂಲಕ ಕೊನೆಗೊಳ್ಳುತ್ತದೆ. ಚಿತ್ರದೊಡಲಲ್ಲಿ ಪ್ರತಿಭಟನೆಯ

ಬರಗೂರರ ಚಿತ್ರವೀಕ್ಷಣೆಗಿಂತ ನಿರೀಕ್ಷೆಗಳನ್ನೇ ಹೆಚ್ಚಾಗಿ ಅಪೇಕ್ಷಿಸುವ ಪ್ರಜ್ಞಾವಂತ ಸಮುದಾಯ ತಾವೇ ಹಾಕಿಕೊಂಡ ನಿಷೇದಿತ ನಿಲುವುಗಳನ್ನು ಆಚೆ ನಿಂತು ನೋಡಿದರೆ, ಭಾಗೀರತಿಯ ಸಾರ್ಥಕತೆ ಕಾಣುವುದು. ಬರಹಗಾರನೊಬ್ಬ ತನ್ನ ಸ್ವಾತಂತ್ರ್ಯ ನಡುವೆ ಕಾವ್ಯ ಪರಂಪರೆಯನ್ನು ಗೌರವಿಸುವದನ್ನು ಮುಂದಿಟ್ಟುಕೊಂಡಾಗ ಭಾಗೀರತಿ ಹೆಚ್ಚು ಹತ್ತಿರವಾಗುತ್ತದೆ.

ಕಥೆ, ಕಥಾನಕ, ತಾತ್ವಿಕತೆ, ಸೈದ್ಧಾಂತಿಕ ನಿಲುವುಗಳ ನೂರು ತಿಕ್ಕಾಟದಲ್ಲಿ ಚಿತ್ರ ದೃಶ್ಯಕಾವ್ಯದ ಸಮೃದ್ಧತೆಯನ್ನು ನಿರಾಕರಿಸುವಂತಾಗಬಾರದು. ಮುಖ್ಯವಾಗಿ ಸಿನಿಮಾ ಹೇಳುವ ಒಟ್ಟು ಸಂದೇಶದಷ್ಟೇ ಅದರ ಕಲಾತ್ಮಕತೆಯು ಮುಖ್ಯವಾಗಬೇಕು. 'ಭಾಗೀರತಿ' ಅಂಥ ಅನೇಕ ವೈಭವಗಳಿಂದ ಮೆರೆದಿದೆ. ಮುಖ್ಯ ಪಾತ್ರಧಾರಿ ಕಿಶೋರರ ದೇಹಭಾಷೆ, ಭಾವನಾ ಮತ್ತು ತಾರಾ ನಟಿಯರ ಭಾವಚರ್ಯೆಗಳು ಅದ್ಭುತವಾಗಿವೆ. ಮೊದಲ ಬಾರಿ ಛಾಯಾಗ್ರಹಣ ನಿರ್ವಹಿಸಿದ ಹರೀಶ ಸೊಂಡೆಕೊಪ್ಪ ಛಾಯಾಗ್ರಹಣ ಮನಸೂರೆಗೊಳ್ಳುವಂತಹದ್ದು. ಚಿತ್ರ ರಂಗದ ಖ್ಯಾತರಾದ ಹರಣಿ, ಪದ್ಮಾವಾಸಂತಿ, ಶ್ರೀನಾಥ ಅವರುಗಳು ಕಲಾತ್ಮಕ ಚಿತ್ರದಲ್ಲಿ ಬರುವುದು ಸ್ವಾಗತಾರ್ಹ.

ಬಹಳ ಮುಖ್ಯವಾಗಿ ಬರಗೂರವರ ಚಿತ್ರ ಸಂಭಾಷಣೆ ಎಂದಿನಂತೆ ಭಾವನಾತ್ಮಕ ಮತ್ತು ವೈಚಾರಿಕ ನೆಲೆಗಳಿಂದ ತುಡಿಯುತ್ತವೆ. ಕೆರೆಯ ಅಗತ್ಯತೆಯನ್ನು ಮತ್ತು ಅದರ ಜೀವ ಸಂಬಂಧಿ ಸೂತ್ರಗಳನ್ನು ಎಲ್ಲ ದೃಶ್ಯಗಳಲ್ಲಿ ಮತ್ತೆ ಮತ್ತೆ ಬರಗೂರ ಮಾರ್ದನಿಸಿದ್ದಾರೆ. ಪ್ರೀತಿ, ಸಂಕಟ, ಮನುಷ್ಯ ತುಮುಲಗಳ ಹಾಗೂ ವಾಸ್ತವದಲ್ಲಿ ಕೆರೆಗಳ ಅಗತ್ಯವಾಗಿ ಹಾರಕ್ಕಿಂತ ಕೆರೆಯೇ ಪ್ರಧಾನವಾಗಿ ಮಂಡಿತವಾಗಿದೆ. ಅನೇಕ ಸಾಧ್ಯತೆಗಳಲ್ಲಿ ವಿಸ್ತಾರಗೊಂಡ ತನ್ನ ಶ್ರೀಮಂತ ಚಿತ್ರಿಕರಣದಿಂದ ಜನಪ್ರಿಯ ಸಿನಿಮಾದ ತೊಳೆಯನ್ನು ಕೂಡ ಚಪ್ಪರಿಸಿದ್ದು ಗಮನಾರ್ಹ.

ಸತೀಶ ಕುಲಕರ್ಣಿ,
ಹಾವೇರಿ



ಬರಗಾಲ ಬಿದ್ದೈತಿ

ಸುಮ್ಮನಿದ್ದೇವೆ ಆದರೆ ತಿಳಿಯದಿರಿ
ಮಲಗಿದ್ದೇವೆಂದು, ಸೋತಿದ್ದೇವೆಂದು,
ಬೂದಿ ಮುಚ್ಚಿದರೂ ಧಿಗಿನಿಗಿಸುವ
ಕೆಂಡದುಂಡಿಗಳು ನಾವು

ನಮ್ಮ ಪಾಲಿನ ಅನ್ನ ಕಸಿದು ತಿನ್ನುವ
ನಾಯಿಗಳಿಗೆ ಕಳಿಸುವೆವು ನರಕಕ್ಕೆ,
ಮುಟ್ಟಿದರೆ ಮಣ್ಣುಗೂಡಿಸುವೆವು,
ಬರಗಾಲದ ದಿಕ್ಕೆಟ್ಟ ರೈತ, ಕೂಲಿಗಳು

ನಾವು ನೋವು, ಹಸಿವೆಯನುಂಡ ಮಣ್ಣಿನ
ಮಕ್ಕಳು, ಪರೀಕ್ಷಿಸದಿರಿ ತಾಳ್ಮೆಯನು,
ಕಂಗೆಡಿಸಿದರೆ ಸಿಡಿಯುವೆವು
ಸಿಡಿಮದ್ದುಗಳಾಗಿ
ಬರಗಾಲದ ಹಸಿದ ಹುಲಿಗಳು ನಾವು

ಲಂಚ ತಿನ್ನುವ ಕೈಗಳಿಗೆ ಹಬ್ಬ
ಈ ಬರಗಾಲ, ಗಾಡ ನಿದ್ರೆ
ಮಾಡುವ ಸರ್ಕಾರ, ಬಡಿದೆಬ್ಬಿಸಿ
ಬೀದಿಗೆ ಬಂದು, ಘರ್ಜಿಸಿ
ಸಿಂಹಗಳಂತೆ ರೈತರೇ, ಕೂಲಿಗಳೇ !!

– ಜಿ.ಎ.ಹಿರೇಮಠ
ಹಾವೇರಿ

(ಕಳೆದ ವರ್ಷದ ಬರದ ಬೇಗೆ ಇನ್ನೂ ತೀರಿಲ್ಲ. ಮಳೆಗಾಲ ಬಂದರೂ ರಾಜ್ಯದ ಬಹಳಷ್ಟು ಕಡೆ ಮಳೆ ಇಲ್ಲ. ಆಳುವ ಜನಕ್ಕೆ ಕುರ್ಚಿ ಕಾದಾಟ ಬಿಟ್ಟು ಬೇರ್ಯಾವುದರ ಕಡೆಗೂ ಲಕ್ಷ್ಯವಿಲ್ಲ. ಅಧಿಕೃತ ವಿರೋಧ ಪಕ್ಷಗಳು ಏನು ಮಾಡುತ್ತಿದ್ದಾವೋ ಗೊತ್ತಿಲ್ಲ. ಇಂಥ ಹೊತ್ತಲ್ಲಿ ನೊಂದವರ ಎದೆಯಾಳದ ಕಿಚ್ಚು ಒಂದು ಕವನವಾಗಿ 'ಸಿಡಿದರೆ' ಅದು ಹೇಗಿರುತ್ತದೆ. ಓದಿ, ಒಂದು ಹೃದಯ ಸ್ಪರ್ಶಿ ಕವನ.)

JANASHAKTHI KANNADA VARA PATRIKE: Printed by G.N.NAGARAJ, No.12, 18th Cross, S.R.Nagar, BANGALORE-560027 Published by: G.N.NAGARAJ, No 12, 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at: Kriya Prakashana, 12, 18th Cross, S.R.Nagar, BANGALORE-560027 Karnataka (State) and Published at BANGALORE No 12, 18th Cross, S.R.Nagar, BANGALORE-560027 Editor S.Y.GURURSHANTH, No12, 18th Cross, S.R.Nagar, BANGALORE - 560027
Editor: S.Y.GURUSHANTH